# ಯುಗಶಕ್ತಿ

- ಭೂಕಂಪಗಳೂ ಜಲಪ್ರಳಯಗಳೂ
- ಇಸ್ಲಾಮ್ ಶಾಂತಿಯ ಧರ್ಮ
- ಸಮಾನತೆ ಮತ್ತು ಸಹೃದಯತೆ
- ಇಸ್ಲಾಮ್ ಧರ್ಮದಲ್ಲಿ ವಿವಾಹ ವಿಚ್ಛೇದನ ನಿಯಮ
- ಹಝ್ರತ್ ಈಸಾನಬಿಯ ಜೀವಿತ ಮತ್ತು ಮರಣ
- ಪ್ರವಾದಿತ್ವ ಸಮಾಪ್ತಿಯ ನಿಜಸ್ಥಿತಿ
- ಇಸ್ಲಾಮಿನ ಮೂಲಭೂತ ವಿಶ್ವಾಸಗಳು ಮತ್ತು ಮೌದೂದಿ ಪತ್ರಿಕೆ
- ಜಮಾತೆ ಇಸ್ಲಾಮಿ ಮತ್ತು ಮಾನವ ಹಕ್ಕು ರಕ್ಷಣೆ !

ಜನವರಿ 2005

ತ್ರೈಮಾಸಿಕ
ಬೆಲೆ ರೂ. 5/-

"ಯಾರಾದರೂ ಸತ್ಪಥದಲ್ಲಿ ನಡೆಯುವನಾದರೆ ಅವನ ಆತ್ಮದ ಒಳಿತಿಗಾಗಿಯೇ ಅವನು ಸತ್ಪಥದಲ್ಲಿ ನಡೆಯುತ್ತಾನೆ. ಯಾರಾದರೂ ಪಥಭ್ರಷ್ಟನಾಗುವನಾದರೆ ಅದರ ದೋಷ ಸಹ ಅವನಿಗೆಯೇ. ಭಾರ ಹೊರುವ ಯಾವನೂ ಇನ್ನೊಬ್ಬನ ಭಾರವನ್ನು ಹೊರಲಾರನು. ಒಬ್ಬ ಸಂದೇಶವಾಹಕನನ್ನು ಕಳುಹಿಸುವ ತನಕ ನಾವು (ಜನರನ್ನು) ಶಿಕ್ಷಿಸುವುದಿಲ್ಲ." - ಪವಿತ್ರಖುರ್‌ಆನ್ (17:16)

# ಯುಗರಶ್ಮಿ

ತ್ರೈಮಾಸಿಕ

10-23-1008/1, 1ನೇ ಮಹಡಿ, ಅನ್ಸಾರಿ ರಸ್ತೆ, ಬಂದರ್, ಮಂಗಳೂರು - 575 001

ಬಿಡಿ ಪ್ರತಿ ರೂ. 5-00 ವಾರ್ಷಿಕ ಚಂದಾ ರೂ. 20-00 ಅಂಚೆ ಮೂಲಕ ರೂ. 30-00

**ವಿಷಯ ಸೂಚಿಕೆ** **ಪುಟ**


| | |
|---|---|
| ಭೂಕಂಪಗಳೂ ಜಲಪ್ರಳಯಗಳೂ | 1 |
| ಮುಹಮ್ಮದ್ ಪೈಗಂಬರರ ನುಡಿಮುತ್ತುಗಳು | 2 |
| ಇಸ್ಲಾಮ್ ಶಾಂತಿಯ ಧರ್ಮ | 3 |
| ಸಮಾನತೆ ಮತ್ತು ಸಹೃದಯತೆ | 10 |
| ಇಸ್ಲಾಮ್ ಧರ್ಮದಲ್ಲಿ ವಿವಾಹ ವಿಚ್ಛೇದನ ನಿಯಮ | 14 |
| ಪವಿತ್ರ ಖುರ್‌ಆನಿನ ಪ್ರಕಾಶದಲ್ಲಿ ಹಝ್ರತ್ ಈಸಾನಬಿಯ ಜೀವಿತ ಮತ್ತು ಮರಣ | 24 |
| ಪ್ರವಾದಿತ್ವ ಸಮಾಪ್ತಿಯ ನಿಜಸ್ಥಿತಿ - 8 | 29 |
| ಇಸ್ಲಾಮಿನ ಮೂಲಭೂತ ವಿಶ್ವಾಸಗಳು ಮತ್ತು ಮೌದೂದಿ ಪತ್ರಿಕೆ | 33 |
| ಜಮಾತೆ ಇಸ್ಲಾಮಿ ಮತ್ತು ಮಾನವ ಹಕ್ಕು ರಕ್ಷಣೆ ! | 40 |
| 'ಜಮಾತೆ ಇಸ್ಲಾಮಿ ಹಿಂದ್' ಭಾರತಕ್ಕೆ ನಿಷ್ಠ ಸಂಘಟನೆಯೇ? | 41 |
| ಅಹ್ಮದೀ ಮುಸ್ಲಿಮರು ಶಾಂತಿ ಹರಡುವವರು | 42 |
| ಅಹ್ಮದಿಯಾ ವಾರ್ತೆಗಳು | 43 |
| ಸವಿ ನೆನಪು | 44 |



# ತ್ಸುನಾಮಿ ಸಂತ್ರಸ್ತರಿಗೆ

## ಉದಾರವಾಗಿ ನೆರವು ನೀಡಿರಿ

### ನಿಮ್ಮ ದೇಣಿಗೆಗಳನ್ನು ಈ ವಿಳಾಸಕ್ಕೆ ಕಳುಹಿಸಿರಿ:

**"HUMANITY FIRST"**
SADR ANJUMAN AHMADIYYA
QADIAN - 143516

(PUNJAB)

بسم الله الرحمن الرحيم

نحمده ونصلي على رسوله الكريم

# ಯುಗರಶ್ಮಿ

ಸಂಪಾದಕ: ಮುಹಮ್ಮದ್ ಯೂಸುಫ್

| | | | | |
|---|---|---|---|---|
| ಆರಂಭ : 1975 | ಸಂಪುಟ : 22 | ಜನವರಿ 2005 | ಸುಲ್ಹ್ 1384 | ಸಂಚಿಕೆ : 1 |


## ಭೂಕಂಪಗಳೂ ಜಲಪ್ರಳಯಗಳೂ

"ನೆನಪಿಡಿರಿ, ಈ ಭೂಲೋಕದಲ್ಲಿ ಅನೇಕ ಭೂಕಂಪಗಳು ಘಟಿಸಲಿವೆಯೆಂಬ ಸೂಚನೆಯನ್ನು ದೇವನು ನನಗೆ ಅರುಹಿದ್ದಾನೆ. ನಾನು ಮುಂಚಿತವಾಗಿಯೇ ಹೇಳಿದ್ದಂತೆ, ಅಮೇರಿಕ ಮತ್ತು ಯುರೋಪು ಭೂಕಂಪಗಳಿಗೆ ಗುರಿಯಾಗಿವೆ. ಹಾಗೆಯೇ ಏಷ್ಯಾ ಸಹ ಈಡಾಗುವುದು ಖಂಡಿತ. ಅವುಗಳಲ್ಲಿ ಕೆಲವು ಪ್ರಳಯಕಾಲದ ಭಯಂಕರವಾದ ಸರ್ವನಾಶಕ್ಕೆ ಸಮಾನವಾಗಿರಬಹುದು. ಹಲವಾರು ಮಂದಿ ಮಡಿಯುವರು. ರಕ್ತದ ಹೊಳೆಗಳೇ ಹರಿಯುವುವು.

"ಮನುಷ್ಯನುಂಟಾದ ಕಾಲದಿಂದ ಇಷ್ಟರ ವರೆಗೆ ಸಂಭವಿಸದ ರೀತಿಯ ಅತ್ಯಂತ ಭಯಂಕರವಾದ ನಾಶವು ಉಂಟಾಗುವುದು. ಭೂಮಿಯ ನಾನಾ ಭಾಗಗಳು ಅಲ್ಲಿ ಎಂದೂ ಜನವಾಸವಿರಲಿಲ್ಲವೆಂದು ಭಾಸವಾಗುವಷ್ಟರ ಮಟ್ಟಿಗೆ ಅಡಿಮೇಲಾಗಿ ಸರ್ವನಾಶವಾಗುವುವು. ಅದರೊಂದಿಗೆ ಭೂಮಿಯಲ್ಲಿಯೂ ಆಕಾಶದಲ್ಲಿಯೂ ಭಯಾನಕವಾದ ನಾಶಗಳು ಘಟಿಸುವುವು. ವಿವೇಕಿಗಳಾದ ಜನರು ಇವುಗಳ ಅಸಾಮಾನ್ಯತೆಯನ್ನು ಗ್ರಹಿಸುವರು. ಅವುಗಳ ಕುರಿತು ವೈಜ್ಞಾನಿಕ ಹಾಗೂ ತತ್ವಶಾಸ್ತ್ರ ಗ್ರಂಥಮಾಲೆಗಳಿಂದ ಏನನ್ನೂ ಅರಿಯಲು ಸಾಧ್ಯವಾಗಲಿಕ್ಕಿಲ್ಲ. ಆಗ ಜನರು ಮುಂದೇನು ಸಂಭವಿಸಬಹುದೆಂದು ಕಳವಳಗೊಳ್ಳುವರು. ಅನೇಕರು ರಕ್ಷಿಸಲ್ಪಡುವರು; ಅನೇಕರು ನಾಶವಾಗುವರು. ಅಂತಹ ದಿನಗಳು ಅತಿ ಸಮೀಪವಾಗಿವೆ. ಅಷ್ಟೇಕೆ, ಬಾಗಿಲಲ್ಲೇ ಬಂದು ನಿಂತಿವೆ. ಒಂದು ಮಹಾನಾಶವನ್ನು ಈ ಲೋಕವು ಕಣ್ಣಾರೆ ಕಾಣಲಿದೆ. ಭೂಕಂಪಗಳು ಮಾತ್ರವಲ್ಲ, ಭೂಮಿಯಲ್ಲೂ ಆಕಾಶದಲ್ಲೂ ಇನ್ನೂ ಭಯಂಕರವಾದ ವಿಪತ್ತುಗಳು ಘಟಿಸುವುವು. ಮನುಷ್ಯರು ಪರಮಾತ್ಮನನ್ನು ಮರೆತು, ತಮ್ಮ ಪ್ರಯತ್ನ ಹಾಗೂ ಹೃದಯದ ಸಕಲ ಆಶಯಗಳನ್ನು ಕೇವಲ ಲೌಕಿಕ ಆಡಂಭರಗಳಿಗಾಗಿ ಮೀಸಲಾಗಿರಿಸಿದ ಕಾರಣದಿಂದಾಗಿ ಇವೆಲ್ಲ ಸಂಭವಿಸುವುವು... 'ಓರ್ವ ಪ್ರವಾದಿಯನ್ನು ಕಳುಹಿಸದೆ ನಾವು ಜನರನ್ನು ಶಿಕ್ಷಿಸುವುದಿಲ್ಲ' ಎಂದು ಅಲ್ಲಾಹನು ಪವಿತ್ರ ಖುರ್‌ಆನಿನಲ್ಲಿ (17:16) ಹೇಳಿರುವನು.

"ಪಶ್ಚಾತ್ತಾಪಪಡುವವರು ರಕ್ಷಣೆಯನ್ನು ಹೊಂದುವರು. ಆಪತ್ತುಗಳಿಗೆ ಭಯಪಡುವವರೊಡನೆ ಕರುಣೆ ತೋರಿಸಲ್ಪಡುವುದು. ಈ ಕಷ್ಟ, ಪರಂಪರೆಗಳಿಗೆ ಗುರಿಯಾಗಲಾರೆವೆಂದು ನೀವು ಭಾವಿಸುವಿರಾ? ಅಥವಾ ಉಪಾಯದಿಂದ ಸ್ವಯಂ ರಕ್ಷಣೆ ಪಡೆಯಲು ನಿಮಗೆ

# ಮುಹಮ್ಮದ್ ಪೈಗಂಬರರ ನುಡಿಮುತ್ತುಗಳು

- ಅತ್ಯಂತ ಸುಸ್ವಭಾವ ಹೊಂದಿದವನು ಅಂತಿಮ ವಿಚಾರಣೆಯ ದಿನ ನನಗೆ ಅತೀ ಸಮೀಪವಾಗಿರುವನು. ನಿಮ್ಮ ಪೈಕಿ ಡಂಬಕೊಚ್ಚುವ ಬಡಾಯಿಕೋರರು ಮತ್ತು ದುರಹಂಕಾರಿಗಳು ಅಂತಿಮ ವಿಚಾರಣೆಯ ದಿನ ಅತ್ಯಂತ ತಿರಸ್ಕಾರಕ್ಕೆ ಪಾತ್ರರೂ ನನ್ನಿಂದ ಅತ್ಯಂತ ದೂರ ಸರಿಸಲ್ಪಟ್ಟವರೂ ಆಗಿರುವರು.
- ನಾನು ಎಲ್ಲ ವಿಧದ ಉತ್ತಮ ಸ್ವಭಾವ ಗುಣಗಳನ್ನು ಪರಿಪೂರ್ಣಗೊಳಿಸಲು ಅಲ್ಲಾಹನಿಂದ ಕಳುಹಿಸಲ್ಪಟ್ಟಿರುವೆನು.
- ಒಬ್ಬ ಸತ್ಯವಿಶ್ವಾಸಿಯನ್ನು ಈ ಲೋಕದಲ್ಲಿ ಆತನ ಸಂಕಷ್ಟಗಳಿಂದ ಬಿಡುಗಡೆಗೊಳಿಸಿದರೆ ಅಂತಿಮ ವಿಚಾರಣೆಯ ದಿನ ಅಲ್ಲಾಹನು ಹಾಗೆ ಮಾಡುವವನ ಸಂಕಷ್ಟಗಳನ್ನು ನಿವಾರಿಸುವನು.
- ಜೀವಿತದಲ್ಲಿ ಕಷ್ಟಕ್ಕೊಳಗಾದವರಿಗೆ ಅವರ ಜೀವನ ಸುಲಭಗೊಳ್ಳುವಂತೆ ಯಾರಾದರೂ ಮಾಡಿದರೆ ಅವರಿಗೆ ಇಹಲೋಕದಲ್ಲೂ ಪರಲೋಕದಲ್ಲೂ ಅಲ್ಲಾಹನು ಸುಖ ನೀಡುವನು.
- ಒಬ್ಬ ಸತ್ಯವಿಶ್ವಾಸಿಯ ಬಲಹೀನತೆಯನ್ನು ಮರೆಮಾಡುವವನಿಗೆ ಅಲ್ಲಾಹನು ಈ ಲೋಕದಲ್ಲೂ ಪರ ಲೋಕದಲ್ಲೂ ಮರೆಯನ್ನು ದಯಪಾಲಿಸುವನು.
- ಯಾರು ತನ್ನ ಸಹೋದರನಿಗೆ ಸಹಾಯ ಮಾಡುತ್ತಾನೋ ಆತನ ಸಹಾಯಕ್ಕೆ ಅಲ್ಲಾಹನಿರುತ್ತಾನೆ.

---

ಸಾಧ್ಯವಿದೆಯೇ? ಎಂದಿಗೂ ಸಾಧ್ಯವಿಲ್ಲ. ಅಂದು ಮನುಷ್ಯರ ಎಲ್ಲ ಯೋಜನೆಗಳು ಪರಾಜಯಗೊಳ್ಳುವುವು. ಅಮೇರಿಕದಲ್ಲಿ ಮತ್ತು ಇನ್ನಿತರ ಭೂಖಂಡಗಳಲ್ಲಿ ಭೂಕಂಪಗಳಾದರೂ ನಿಮ್ಮ ರಾಜ್ಯವು ಸುರಕ್ಷಿತವಾಗಿಯೇ ಇರುವುದೆಂದು ಭಾವಿಸಬೇಡಿ. ಅದಕ್ಕಿಂತಲೂ ಅತ್ಯಂತ ದಾರುಣವಾದ ಕಷ್ಟನಷ್ಟಗಳಿಗೆ ನೀವು ಗುರಿಯಾಗಬೇಕಾದೀತು.

"ಎಲೈ ಯುರೋಪಿನ ಜನಾಂಗಗಳೇ, ನೀವು ಸುರಕ್ಷಿತರಲ್ಲ. ಎಲೈ ಏಷ್ಯಾದ ಜನಾಂಗಗಳೇ, ನೀವು ಸಹ ಸುರಕ್ಷಿತರಲ್ಲ. ಎಲೈ ದ್ವೀಪನಿವಾಸಿಗಳೇ, ನಿಮ್ಮ ಸ್ವಯಂ ಕಲ್ಪಿತ ದೇವರುಗಳು ಆ ದಿನದಂದು ನಿಮ್ಮ ರಕ್ಷಣೆಗೆ ಬರಲಾರರು. ದೊಡ್ಡ ದೊಡ್ಡ ನಗರಗಳು ನಾಶವಾಗುವುದನ್ನು ಮತ್ತು ಜನಭರಿತ ಪ್ರದೇಶಗಳು ಜನಶೂನ್ಯವಾಗುವ ಭವಿಷ್ಯದ ಚಿತ್ರವನ್ನು ನಾನು ಈಗಲೇ ಕಾಣುತ್ತಿದ್ದೇನೆ. ಆ ಸರ್ವಾಧಿಪತಿಯಾದ ದೇವನು ಒಂದು ದೀರ್ಘಕಾಲದ ವರೆಗೆ ಮೌನಾವಲಂಬಿಯಾಗಿದ್ದನು. ಅವನ ಸಮ್ಮುಖದಲ್ಲೇ ಹೇಯವಾದ ಅನೇಕ ಅತಿ ದುಷ್ಕೃತ್ಯಗಳು ನಡೆಯುತ್ತಿದ್ದರೂ ಅವನು ಸುಮ್ಮಗಿದ್ದನು. ಆದರೆ ಈಗ ಅವನು ಭಯಂಕರ ಸ್ವರೂಪದಿಂದ ತನ್ನ ಮುಖವನ್ನು ತೋರಿಸುವನು. ಅಂತಹ ಕಾಲ ದೂರವಿಲ್ಲ! ಕಿವಿ ಇದ್ದವರು ಕೇಳಿಕೊಳ್ಳಲಿ! ನಾನು ಎಲ್ಲರನ್ನೂ ದೇವರ ರಕ್ಷಣೆಯಲ್ಲಿ ಒಂದುಗೂಡಿಸಲಿಕ್ಕೆ ಕೈಲಾದಷ್ಟು ಪ್ರಯತ್ನಿಸಿದೆ. ಆದರೆ ನಿಯತಿ ನಿಯಮ ಪೂರ್ಣಗೊಳ್ಳಬೇಕಲ್ಲವೇ? ನಾನು ಸತ್ಯವಾಗಿಯೂ ನಿಮ್ಮೊಡನೆ ಹೇಳುತ್ತೇನೆ: ಈ ರಾಜ್ಯದ ಸರದಿ ಸಹ ಸಮೀಪಿಸುತ್ತಿದೆ. ನೋಹಾ ಪ್ರವಾದಿಯ ಕಾಲ* ನಿಮ್ಮ ಕಣ್ಣ ಮುಂದೆ ಪ್ರತ್ಯಕ್ಷವಾಗುವುದು. ಪ್ರವಾದಿ ಲೂತ್‌ರವರ ರಾಜ್ಯದಲ್ಲಿ ಸಂಭವಿಸಿದ್ದನ್ನು** ನಿಮ್ಮ ಸ್ವಂತ ಕಣ್ಣುಗಳಿಂದ ಕಾಣುವಿರಿ. ಆದರೆ ಪರಮಾತ್ಮನು ತನ್ನ ಕೋಪವನ್ನು ನಿಧಾನವಾಗಿ ತೋರಿಸುವನು. ನಿಮ್ಮ ಮೇಲೆ ದಯಾದೃಷ್ಟಿಯನ್ನು ಬೀರುವಂತೆ ನೀವು ಅವನೊಡನೆ ಪಶ್ಚಾತ್ತಾಪದಿಂದ ಪ್ರಾರ್ಥಿಸಿರಿ. ದೇವರನ್ನು ಮರೆತವನು ಮನುಷ್ಯನಲ್ಲ; ಕ್ರಿಮಿಕೀಟಕ್ಕೆ ಸಮಾನನು. ದೇವನಿಗೆ ಯಾರು ಹೆದರುವುದಿಲ್ಲವೋ ಅವನು ಸತ್ತಂತೆಯೇ ಸರಿ; ಜೀವವಿಲ್ಲದವನು." (ಹಖೀಖತುಲ್ ವಹ್ಯ್, 1907 - ಪುಟ : 256-257)

**ಹಝ್ರತ್ ಮಿರ್ಝಾ ಗುಲಾಂ ಅಹ್ಮದ್**
ಅಹ್ಮದಿಯಾ ಸಂಘಟನೆಯ ಸ್ಥಾಪಕರು

* ಭಯಂಕರ ಜಲಪ್ರಳಯ

** ಭೀಕರ ಭೂಕಂಪ

# ಇಸ್ಲಾಮ್ ಶಾಂತಿಯ ಧರ್ಮ

**ಅಹ್ಮದಿಯಾ ಮುಸ್ಲಿಮ್ ಸಂಘಟನೆಯ ಸರ್ವೋನ್ನತ ನಾಯಕರು ಮತ್ತು ಪಂಚಮ ಖಲೀಫರು ಆಗಿರುವ ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್ ಸಾಹೇಬ್ ಇತ್ತೀಚೆಗೆ ಆಫ್ರಿಕದ ಬೆನಿನ್ ದೇಶದ ವಿಶ್ವವಿದ್ಯಾಲಯದಲ್ಲಿ ಮಾಡಿದ ಭಾಷಣ.**

ಪ್ರಿಯ ವಿದ್ಯಾರ್ಥಿಗಳೇ ಮತ್ತು ವಿಶ್ವವಿದ್ಯಾಲಯದ ಉದ್ಯೋಗಸ್ಥರೇ, ಅಸ್ಸಲಾಮು ಅಲೈಕುಮ್ ವ ರಹ್ಮತುಲ್ಲಾಹ್ (ನಿಮ್ಮ ಮೇಲೆ ಅಲ್ಲಾಹನ ಶಾಂತಿ ಮತ್ತು ಅನುಗ್ರಹಗಳು ಸುರಿಯಲ್ಪಡಲಿ).

ಇಸ್ಲಾಮ್ ಶಾಂತಿಯ ಧರ್ಮವೆಂಬುದರ ಕುರಿತು ವಿವರಿಸಲು ನನ್ನೊಡನೆ ಕೇಳಲಾಗಿದೆ. ಸಮಯದ ಕೊರತೆಯ ಕಾರಣದಿಂದ ನಾನು ಈ ವಿಷಯದ ಕುರಿತು ಸಂಕ್ಷಿಪ್ತವಾಗಿ ವಿವರಿಸುವೆನು.

ಇಸ್ಲಾಮ್ ಧರ್ಮವು ಶಾಂತಿಯ ಧರ್ಮವೆಂದು ವಿವರಿಸಲು ಬಯಸುವಾಗ ಸಹಜವಾಗಿ ಒಂದು ಪ್ರಶ್ನೆಯು ಮನಸ್ಸಿನಲ್ಲಿ ಸ್ಫುರಿಸುತ್ತದೆ: ಲೋಕದಲ್ಲಿ ಯಹೂದ್ಯಮತ, ಕ್ರೈಸ್ತಮತ, ಹಿಂದೂ ಮತ, ಬುದ್ಧಮತ ಮೊದಲಾದ ನಾನಾ ರೀತಿಯ ಮತ ಧರ್ಮಗಳು ಆಚರಣೆಯಲ್ಲಿದ್ದು ಇಸ್ಲಾಮ್ ಧರ್ಮ ಶಾಂತಿಯ ಧರ್ಮವೋ ಎಂದು ಅಧ್ಯಯನ ಮಾಡುವಾಗ ಅದಕ್ಕೆ ಅಸಾಮಾನ್ಯವಾದ ಒಂದು ಅನ್ಯತೆ ಏಕಿದೆ?

ಇದಕ್ಕಿರುವ ಒಂದು ಕಾರಣವೇನೆಂದರೆ, ಇಸ್ಲಾಮ್ ಧರ್ಮವು ಸ್ಥಾಪಿತವಾದ ನಂತರ ಇಸ್ಲಾಮಿನ ಶತ್ರುಗಳು ಇಸ್ಲಾಮ್ ಧರ್ಮವು ಉಗ್ರಗಾಮಿ ತತ್ವಗಳ ಮತ್ತು ಹಿಂಸಾಚಾರದ ಧರ್ಮವೆಂದೂ ಅದು ಜನರನ್ನು ಖಡ್ಗದ ಮೂಲಕ ಬಲಾತ್ಕಾರದಿಂದ ನಂಬುವಂತೆ ಮಾಡುತ್ತದೆ ಎಂದೂ ಪ್ರಚಾರ ಮಾಡತೊಡಗಿದರು. ಅವರ ಪ್ರಚಾರವು ವಾಸ್ತವಿಕವಾಗಿರಲಿಲ್ಲ. ಇಸ್ಲಾಮಿನ ಆರಂಭದ ಕಾಲಘಟ್ಟದಲ್ಲಿ ಮಕ್ಕದ ಮುಸ್ಲಿಮರು ವಿರೋಧಿಗಳಿಂದ ನಾನಾ ವಿಧಗಳ ಹಿಂಸಾಚಾರಗಳಿಗೆ ಗುರಿಯಾದರೂ ಅವರು ಪ್ರತಿಕ್ರಿಯೆ ತೋರಿಸದೆ ಶಾಂತರಾಗಿದ್ದರು. ಅವರು ಮದೀನಕ್ಕೆ ವಲಸೆ ಹೋದರು. ಆದರೆ ಮಕ್ಕದ ಅವಿಶ್ವಾಸಿಗಳು ಅಲ್ಲಿಗೂ ಅವರನ್ನು ಹಿಂಬಾಲಿಸಿದರು ಮತ್ತು ಒಂದು ಯುದ್ಧಕ್ಕಾಗಿ ಅವರನ್ನು ಬಲವಂತಪಡಿಸಿದರು. ಆ ಬಗ್ಗೆ ನಾನು ಮುಂದೆ ವಿವರಿಸುವೆನು.

ಇಸ್ಲಾಮ್ ಧರ್ಮವು ಖಡ್ಗದ ಮೂಲಕ ಪ್ರಚಾರಗೊಂಡಿತು ಎಂದು ಆಕ್ಷೇಪಿಸುವವರಿಗೆ ಅವರ ವಾದವು ತಪ್ಪು ಎಂಬುದಕ್ಕೆ ನೀಡಬಹುದಾದ ಒಂದು ಸಾಕ್ಷ್ಯಾಧಾರವೇನೆಂದರೆ, ಇಸ್ಲಾಮ್ ಧರ್ಮವನ್ನು ನಂಬದ ಮಕ್ಕದ ಅವಿಶ್ವಾಸಿಗಳು ಇಸ್ಲಾಮಿನ ವಿರುದ್ಧ ಹಲವು ವಿಧಗಳ ಆಕ್ಷೇಪಗಳನ್ನು ಮಾಡಿದ್ದರೂ ಮುಸ್ಲಿಮರು ಅವಿಶ್ವಾಸಿಗಳ ವಿರುದ್ಧ ಖಡ್ಗ ಉಪಯೋಗಿಸಿ ಅವರು ತಮ್ಮ ಧರ್ಮವನ್ನು ಬದಲಾಯಿಸಲು ಬಲಾತ್ಕಾರ ಮಾಡಿದ್ದರೆಂದು ಎಂದೂ ಅವರು ಆಕ್ಷೇಪಿಸಲಿಲ್ಲವೆಂಬುದಕ್ಕೆ ಚರಿತ್ರೆಯು ಸಾಕ್ಷ್ಯ ನೀಡುತ್ತದೆ.

ಇಸ್ಲಾಮ್ ಧರ್ಮಕ್ಕೆ ಕೆಟ್ಟ ಹೆಸರು ಕೊಡಮಾಡಿದ ಇನ್ನೊಂದು ಕಾರಣವೇನೆಂದರೆ, ಕೆಲವು ಮುಸ್ಲಿಮ್ ಗುಂಪುಗಳು ಮತ್ತು ಸಂಸ್ಥೆಗಳು ದುರದೃಷ್ಟಕರವಾಗಿ ಹೊಂದಿದ್ದ ತಮ್ಮ ಸ್ವಾರ್ಥ ಹಿತಾಸಕ್ತಿಗಳ ಕಾರಣದಿಂದ, ತಿಳಿದೋ ತಿಳಿಯದೆಯೋ ಇಸ್ಲಾಮ್ ಧರ್ಮಕ್ಕೆ ವಿಕೃತ ಮತ್ತು ಭಯಾನಕ, ಉಗ್ರಗಾಮಿ ಸ್ವರೂಪವನ್ನು ನೀಡಿ ಲೋಕದ ಮುಂದಿರಿಸುತ್ತಿದ್ದಾರೆ.

ಒಂದು ಧರ್ಮದ ಸೌಂದರ್ಯವನ್ನು ಅಥವಾ ಅದರ ದೋಷಗಳನ್ನು ಗುರುತಿಸಲು ನ್ಯಾಯ ಬದ್ಧವಾಗಿರುವ ಮಾರ್ಗ, ಆ ಧರ್ಮದ ಪವಿತ್ರ ಗ್ರಂಥವನ್ನು ಮೂಲಾಧಾರವಾಗಿ ಇಟ್ಟುಕೊಂಡು ಅಧ್ಯಯನ ಮಾಡಿ ತೀರ್ಮಾನಿಸುವುದಾಗಿದೆ. ಹೀಗೆ ಮಾಡದಿದ್ದರೆ ಪ್ರತಿಯೊಬ್ಬ ಧರ್ಮಾವಲಂಬಿ ಇನ್ನಿತರ ಧರ್ಮಾವಲಂಬಿಗಳನ್ನು ಮನಸ್ಸಿಗೆ ತೋಚಿದಂತೆ ಆಕ್ಷೇಪಿಸಲು ತೊಡಗುವನು.

ಉದಾಹರಣೆಗೆ ಬೈಬಲಿನ ಪ್ರಕಾರ ಕ್ರೈಸ್ತಧರ್ಮದ ಉಪದೇಶ ಹೀಗಿದೆ:

"ಆದರೆ ನಾನು ನಿಮಗೆ ಹೇಳುವುದೇನೆಂದರೆ - ಕೆಡುಕುಗಳನ್ನು ಎದುರಿಸಬೇಡ. ಒಬ್ಬನು ನಿನ್ನ ಬಲಗೆನ್ನೆಯ ಮೇಲೆ ಹೊಡೆದರೆ ಅವನಿಗೆ ಮತ್ತೊಂದು ಕೆನ್ನೆಯನ್ನು ಒಡ್ಡು." (ಮತ್ತಾಯ 5 : 39)

ಆದರೆ ಬೋಸ್ನಿಯಾದಲ್ಲಿ, ಇರಾಖ್‌ನಲ್ಲಿ ಮತ್ತು ಬೇರೆ ದೇಶಗಳಲ್ಲಿ ಕ್ರೈಸ್ತ ಧರ್ಮಾವಲಂಬಿಗಳಾದ ಅಮೇರಿಕ ಮತ್ತು ಇತರ ಪಾಶ್ಚಿಮಾತ್ಯ ದೇಶಗಳ ವರ್ತನೆಗಳನ್ನು ನೋಡಿರಿ. ಅವರು ಅತಿಕ್ರಮಣ ಮಾಡಿದ್ದಾರೆ ಮತ್ತು ಮಾಡುತ್ತಲೂ ಇದ್ದಾರೆ. ಇವರ ಈ ವರ್ತನೆಗಳನ್ನು ನೋಡಿ, 'ಒಬ್ಬ ನಿಮ್ಮ ಮೇಲೆ ತಲೆ ಎತ್ತಿದ್ದರೆ ಆ ತಲೆಯನ್ನು ತುಳಿದು ಹಾಕಬೇಕೆಂಬುದು ಕ್ರೈಸ್ತ ಧರ್ಮದ ತತ್ವ' ಎಂದು ಯಾರಾದರೂ ಹೇಳುವುದಾದರೆ ಅದು ಕ್ರೈಸ್ತ ಧರ್ಮದ ವಿರುದ್ಧ ಮಾಡಿದ ಘೋರ ಅನ್ಯಾಯವಾಗುವುದು.

ಆದುದರಿಂದ ಇಸ್ಲಾಮಿನ ನಿಜವಾದ ತತ್ವಗಳೇನೆಂದು ಕಂಡು ಹಿಡಿಯಲು ನಾವು ಪವಿತ್ರ ಖುರ್‌ಆನನ್ನು ಅಧ್ಯಯನ ಮಾಡಿ ಅದು ಏನು

ಹೇಳುತ್ತದೆ ಎಂದು ತಿಳಿದುಕೊಳ್ಳಬೇಕು.ಪವಿತ್ರ ಖುರ್‌ಆನಿನ ಪಾಠಗಳನ್ನು ಮರೆತು ಬಿಟ್ಟಿರುವ ಕೆಲವು ಮುಸ್ಲಿಮರು ಮಾಡುತ್ತಿರುವ ಕೆಲಸಗಳನ್ನು ನೋಡಿ ನಾವು ಇಸ್ಲಾಮ್ ಧರ್ಮದ ತತ್ವಗಳ ಕುರಿತು ನಿರ್ಧರಿಸಬಾರದು.

ಪವಿತ್ರ ಖುರ್‌ಆನ್ ಶಾಂತಿಯನ್ನು ಪ್ರತಿಪಾದಿಸುತ್ತದೆ ಎಂಬುದೇ ಅಹ್ಮದಿಯಾ ಮುಸ್ಲಿಮ್ ಸಮುದಾಯದ ನಿಲುವಾಗಿದೆ. ಈ ಸಂದೇಶವನ್ನು ಜಗತ್ತಿನ ಪ್ರತಿಯೊಂದು ಮೂಲೆಗೂ ನಾವು ತಲುಪಿಸಬೇಕಾಗಿದೆ. ಆದುದರಿಂದ ನಾನು ನನ್ನ ಈ ದಿನದ ಸಂದೇಶವನ್ನು ಪವಿತ್ರ ಖುರ್‌ಆನ್ ಮೂಲಕ ಪ್ರಾರಂಭಿಸುವೆನು. ಅನಂತರ, ಪವಿತ್ರ ಖುರ್‌ಆನ್ ಅವತೀರ್ಣಗೊಳಿಸಲ್ಪಟ್ಟ ಮಹಾನುಭಾವರಾದ ಪವಿತ್ರ ಪ್ರವಾದಿ ಮುಹಮ್ಮದ್ (ಸಲ್ಲಾಲ್ಲಾಹು ಅಲೈ ಹಿ ವ ಸಲ್ಲಂ) ರವರ ನಡವಳಿಕೆಯನ್ನು ಪರಿಶೋಧಿಸುವೆನು. ಅವರು ಎಂದಾದರೂ ಯಾವುದೇ ರೀತಿಯ ಕ್ರೌರ್ಯವನ್ನು, ಹಿಂಸಾಚಾರವನ್ನು, ಭಯೋತ್ಪಾದನೆಯನ್ನು ಪ್ರೋತ್ಸಾಹಿಸಿದ್ದರೋ? ಎಂದು ನೋಡುವೆನು.

ಪವಿತ್ರ ಖುರ್‌ಆನ್ ಮತ್ತು ಹಝ್ರತ್ ಪೈಗಂಬರರ (ಸ) ಹೇಳಿಕೆಗಳನ್ನು ಆಧಾರವಾಗಿಟ್ಟುಕೊಂಡು, ತಾನು ವಾಗ್ದತ್ತ ಮಸೀಹ್ ಎಂದು ವಾದಿಸಿದ್ದ ಅಹ್ಮದಿಯಾ ಜಮಾಅತಿನ ಸ್ಥಾಪಕರಾದ ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್ (ಅಲೈಹಿಸ್ಸಲಾಂ) ಕೆಲವು ಸಂಗತಿಗಳನ್ನು ಸ್ಪಷ್ಟಗೊಳಿಸಿದ್ದಾರೆ. ಅವುಗಳಲ್ಲಿ ಕೆಲವನ್ನು ನಾನು ವಿವರಿಸುವೆನು.

ಶಾಂತಿ ಸ್ಥಾಪನೆಗೆ ಪೂರಕವಾಗಿ ಪವಿತ್ರ ಖುರ್‌ಆನ್ ನೀಡುವ ಉಪದೇಶ ಏನೆಂದು ಮೊತ್ತ ಮೊದಲು ನೋಡೋಣ.

"ಯಾರಾದರೂ ಒಬ್ಬ ವ್ಯಕ್ತಿಯನ್ನು ಕೊಲೆಗೈದುದಕ್ಕಾಗಿ ಅಥವಾ ರಾಜ್ಯದಲ್ಲಿ ಕಲಹವನ್ನುಂಟುಮಾಡಿದುದ್ದಕ್ಕಾಗಿ ಹೊರತು, (ನಿರಪರಾಧಿಯಾದ) ಒಬ್ಬನನ್ನು ಕೊಂದರೆ ಅವನು ಮನುಷ್ಯರೆಲ್ಲರನ್ನೂ ಕೊಂದಂತಾಗುವುದು". (ಪವಿತ್ರ ಖುರ್‌ಆನ್ 5 : 33)

ಪವಿತ್ರ ಖುರ್‌ಆನಿನ ಈ ವಚನವನ್ನು ಅಹ್ಮದಿಯಾ ಜಮಾಅತಿನ ಸ್ಥಾಪಕರು ಹೀಗೆ ವ್ಯಖ್ಯಾನಿಸಿರುವರು:

"ಒಬ್ಬನನ್ನು ಅನ್ಯಾಯವಾಗಿ ಕೊಂದರೆ, ರಾಷ್ಟ್ರದ್ರೋಹ ಅಥವಾ ಹಿಂಸೆಯನ್ನು ಪ್ರಚೋದಿಸಿ ದೇಶದಲ್ಲಿ ಅಸ್ತವ್ಯಸ್ತತೆಯನ್ನು ಉಂಟುಮಾಡಿದುದ್ದಕ್ಕೆ ಪ್ರತಿಯಾಗಿ ಹೊರತು ಒಬ್ಬನನ್ನು ಕೊಲ್ಲುವುದಾದರೆ, ಹಾಗೆ ಕೊಂದವನು ಮಾನವರೆಲ್ಲರನ್ನೂ ಕೊಂದಂತಹ ಪಾಪದೋಷಕ್ಕೆ ಪಾತ್ರನಾಗುತ್ತಾನೆ. ಬೇರೆ ಮಾತಿನಲ್ಲಿ ಹೇಳುವುದಾದರೆ, ಸರಿಯಾದ ಕಾರಣವಿಲ್ಲದೆ ಕೊಲೆ ಮಾಡುವುದು ಅಲ್ಲಾಹನ ದೃಷ್ಟಿಯಲ್ಲಿ ಮಾನವ ಸಮುದಾಯವನ್ನು ಕೊಂದಂತೆ ಆಗುತ್ತದೆ. ನಿಷ್ಕಾರಣವಾಗಿ ಮಾಡುವ ಕೊಲೆಯು ಎಷ್ಟು ಗುರುತರವಾದ ಪಾಪ ಕೃತ್ಯವಾಗಿದೆ ಎಂದು ಈ ವಚನದಿಂದ ಸ್ಪಷ್ಟವಾಗುತ್ತದೆ." (ಚಶ್ಮಯೆ ಮಅ್‌ರಿಫತ್, ಪುಟ 23- 24)

ಇದು ಪವಿತ್ರ ಖುರ್‌ಆನಿನ ಸುಂದರ ಉಪದೇಶವಾಗಿದೆ. ಅನ್ಯಾಯವಾಗಿ ಕೊಲ್ಲುವುದು, ನಿಷ್ಕಳಂಕರ ರಕ್ತ ಸುರಿಸಿ ಕೊಲ್ಲುವುದು ಪವಿತ್ರ ಖುರ್‌ಆನ್ ಪ್ರಕಾರ ಮಾನವ ಕುಲವನ್ನೇ ಕೊಂದಂತಹ ಪಾಪಕೃತ್ಯವಾಗಿದೆ. ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ಒಬ್ಬನನ್ನು ಅನ್ಯಾಯವಾಗಿ ಕೊಂದರೆ ಅದು ಸಾವಿರಾರು ನಿಷ್ಪಾಪಿಗಳಾದ ಜನರನ್ನು ವಧಿಸಿದಂತಹ ಪಾಪ ಕೃತ್ಯವಾಗಿದೆ. ಸಾವಿರಾರು ನಿಷ್ಕಳಂಕ ಜನರನ್ನು ಕೊಂದ ಅಪರಾಧಿಗೆ ವಿಧಿಸಬಹುದಾದ ಶಿಕ್ಷೆ ಹೇಗಿರಬಹುದೆಂದು ಎಲ್ಲರೂ ಚೆನ್ನಾಗಿ ಊಹಿಸಬಹುದಾಗಿದೆ. ಇದು ಸರ್ವಶಕ್ತನಾದ ದೇವನು ಪವಿತ್ರ ಖುರ್‌ಆನ್‌ನಲ್ಲಿ ನಮಗೆ ನೀಡಿದ ಉಪದೇಶವಾಗಿದೆ. ಯಾರು ಇದಕ್ಕೆ ವಿರುದ್ಧವಾಗಿ ವರ್ತಿಸುತ್ತಾರೋ ಅವರು ಪವಿತ್ರ ಖುರ್‌ಆನಿನ ಉಪದೇಶಗಳಿಗೆ ವಿರುದ್ಧವಾಗಿ ವರ್ತಿಸುತ್ತಾರೆ.

ಅಹ್ಮದಿಯಾ ಜಮಾಅತಿನ ಸ್ಥಾಪಕರು ಈ ಉಪದೇಶವನ್ನು ಇನ್ನಷ್ಟು ವಿವರಿಸಿರುವರು. ಪವಿತ್ರ ಖುರ್‌ಆನ್‌ನ ಉಪದೇಶಗಳ ಕುರಿತು ಗಾಢವಾಗಿ ಅಧ್ಯಯನ ಮತ್ತು ಚಿಂತನೆಮಾಡಿ ಇಸ್ಲಾಮಿನ ಸರಿಯಾದ ಉಪದೇಶಗಳನ್ನು ಅರ್ಥ ಮಾಡಲು ಅಲ್ಲಾಹನು ಅವರಿಗೆ ಮಾರ್ಗದರ್ಶನವನ್ನು ದಯಪಾಲಿಸಿದನು. ಮೇಲೆ ಉಲ್ಲೇಖಿಸಲಾದ ಪವಿತ್ರ ಖುರ್‌ಆನ್ ವಚನದ ಕುರಿತು ಅವರು ಹೀಗೆ ಹೇಳುತ್ತಾರೆ:

"ಯಾರು ದಯೆಯನ್ನು ತ್ಯಜಿಸುತ್ತಾನೋ ಅವನು ಧರ್ಮವನ್ನು ತ್ಯಜಿಸುತ್ತಾನೆ. ಯಾವುದೇ ನ್ಯಾಯಬದ್ಧ ಕಾರಣವಿಲ್ಲದೆ ಒಬ್ಬನನ್ನು ಕೊಲ್ಲುವವನು ಮಾನವ ಕುಲವನ್ನೇ ಕೊಲ್ಲುವವನ ಹಾಗೆ ಆಗುತ್ತಾನೆ ಎಂದು ಪವಿತ್ರ ಖುರ್‌ಆನ್ ಉಪದೇಶಿಸುತ್ತದೆ. ಇದೇ ಪ್ರಕಾರ ನಾನು ಹೇಳುತ್ತೇನೆ: ಯಾರಾದರೂ ತನ್ನ ಸಹೋದರನಿಗೆ ಕರುಣೆಯನ್ನು ತೋರಿಸದಿದ್ದರೆ ಅವನು ಮಾನವ ಕುಲದೊಂದಿಗೆ ನಿಷ್ಕರುಣೆಯಿಂದ ವರ್ತಿಸಿದವನ ಹಾಗೆ ಆಗುತ್ತಾನೆ."

(ಅಲ್‌ಹಕಮ್ ಸಂಪುಟ 9 ಸಂಚಿಕೆ 15. 30 ಎಪ್ರಿಲ್ 1905)

ಮೇಲೆ ಉಲ್ಲೇಖಿಸಿದ ಪವಿತ್ರ ಖುರ್‌ಆನಿನ ವಚನವನ್ನು ಆಧಾರವಾಗಿಟ್ಟುಕೊಂಡು ಅಹ್ಮದಿಯಾ ಜಮಾಅತಿನ ಸ್ಥಾಪಕರು ಮಾಡಿದ ತೀರ್ಮಾನವನ್ನು ಹೀಗೆ ವಿವರಿಸಬಹುದು: ಇಸ್ಲಾಮ್ ಧರ್ಮವು ಉಗ್ರವಾದಿ ನಿಲುವನ್ನು ಹೊಂದಿದ ಧರ್ಮವೆಂದು ಜನರು ಭಾವಿಸುವುದು ಅವರಿಗೆ ಇಸ್ಲಾಮ್ ಧರ್ಮದ ಕುರಿತು ಸರಿಯಾದ ತಿಳುವಳಿಕೆ ಇಲ್ಲದ ಕಾರಣದಿಂದಾಗಿದೆ. ನೀವು ನಿಮ್ಮ ಸಹಜೀವಿಗೆ ದಯೆಯನ್ನು ತೋರಿಸದಿದ್ದರೆ ನೀವು ಲೋಕದಲ್ಲಿ ಶಾಂತಿಯನ್ನೂ ಸೌಹಾರ್ದವನ್ನೂ ನಾಶಮಾಡುವುದಕ್ಕೆ ಕಾರಣೀಭೂತರಾಗುವಿರಿ. ನೀವು ಯಾರನ್ನಾದರೂ ಕೊಲ್ಲುವ ಯೋಚನೆಯನ್ನೇ ಬಿಟ್ಟು ಬಿಡಿರಿ. ನೀವು ಲೋಕದಲ್ಲಿರುವ ಪ್ರತಿಯೊಬ್ಬನೊಂದಿಗೆ ದಯಾಭಾವನೆಯಿಂದ ವರ್ತಿಸುವವರಾಗಿರಿ ಮತ್ತು ಇಸ್ಲಾಮಿನ ಶಾಂತಿ ಸಂದೇಶವನ್ನು ಹರಡುವವರಾಗಿರಿ.

ಹಝ್ರತ್ ಮುಹಮ್ಮದ್ ಪೈಗಂಬರ್[ಸ] ತನ್ನ ಜೀವಿತದಲ್ಲಿ ದಯಾಭಾವದಿಂದ ವರ್ತಿಸಿದ ಅಸಂಖ್ಯಾತ ಉದಾಹರಣೆಗಳಿಂದ ಕೆಲವನ್ನು ಮಾತ್ರ ನಿಮ್ಮ ಮುಂದೆ ಇರಿಸುತ್ತೇನೆ. ಅವರು ಇತರರ ಕುರಿತು ಎಂತಹ ಕಾಳಜಿ ಹೊಂದಿದ್ದರೆಂಬುದು ನಿಮಗೆ ಆ ಮೂಲಕ ಸ್ಪಷ್ಟವಾಗುವುದು.

ಒಬ್ಬ ವ್ಯಕ್ತಿ ಇನ್ನೊಬ್ಬ ವ್ಯಕ್ತಿಯ ಏಳಿಗೆಯನ್ನು ಆಶಿಸುವುದಾದರೆ ಆ ವ್ಯಕ್ತಿಗಾಗಿ ತನ್ನಿಂದ ಸಾಧ್ಯವಿರುವಷ್ಟು ಆ ಬಗ್ಗೆ ಪ್ರಯತ್ನಿಸುವುದು ಕಂಡು ಬರುತ್ತದೆ. ಹಝ್ರತ್ ಪೈಗಂಬರ್[ಸ] ತನ್ನ ನಾಡಿನವರ ಬಗ್ಗೆ ಬಹಳ ಕರುಣೆಯನ್ನು ಹೊಂದಿದವರಾಗಿದ್ದರು. ಅವರು ಜನಿಸಿದ ನಾಡಿನ ಜನರು ನಾವು ಊಹಿಸಲಾರದಷ್ಟು ಹೆಚ್ಚಿನ ಸಂಖ್ಯೆಯ ದೇವರುಗಳನ್ನು ಆರಾಧಿಸುವವರಾಗಿದ್ದರೂ ಅವರ ಏಳಿಗೆಗಾಗಿ ಪೈಗಂಬರರು[ಸ] ಏಕದೇವನಾದ ಅಲ್ಲಾಹನನ್ನು ಪ್ರಾರ್ಥಿಸುತ್ತಿದ್ದರು. ಏಕದೇವನಿಗೆ ಸಹಭಾಗಿಗಳನ್ನು ಊಹಾಪೋಹದಿಂದ ಸೃಷ್ಟಿಸಿ ಪೂಜಿಸುವವರನ್ನು ಕ್ಷಮಿಸಲಾಗದೆಂದು ಸರ್ವಶಕ್ತನಾದ ಏಕದೇವನು ಸ್ಪಷ್ಟಪಡಿಸಿದ್ದನಾದುದರಿಂದ ಪೈಗಂಬರ್[ಸ] ಬಹಳ ಆತಂಕಗೊಂಡು ಪದೇ ಪದೇ ಸಾಷ್ಟಾಂಗ ಮಾಡಿ ಪ್ರಾರ್ಥಿಸುತ್ತಿದ್ದರು. ತನ್ನ ನಾಡಿನ ಜನರು ಸುಧಾರಣೆ ಹೊಂದಬೇಕೆಂಬ ಉತ್ಕಟಾಕಾಂಕ್ಷೆ ಅವರ ಹೃದಯದಲ್ಲಿದ್ದಿತು. ಅವರು ತನ್ನ ನಾಡಿನ ಜನರಿಗಾಗಿ ಕೊರಗಿ ಪ್ರಾರ್ಥಿಸುತ್ತಾ ಬಲಗುಂದಿದವರಾದರು. ಕೊನೆಗೆ ಸರ್ವಶಕ್ತನಾದ ದೇವನೇ ಅವರಿಗೆ ಹೇಳಿದನು: ಅವರ ಬಗ್ಗೆ ದುಃಖಿಸಿ ದುಃಖಾತಿ ರೇಖದಿಂದ ನಿನ್ನ ಜೀವವನ್ನೇ ನಾಶಕ್ಕೆ ಗುರಿಪಡಿಸಬಾರದು. (ಪವಿತ್ರ ಖುರ್‌ಆನ್ 18 : 7). ನಿನ್ನ ದೌತ್ಯ ಜನರಿಗೆ ಸಂದೇಶ ತಲುಪಿಸುವುದು ಮಾತ್ರ. ಹಝ್ರತ್ ಪೈಗಂಬರ್[ಸ] ತನ್ನ ಶತ್ರುಗಳಿಗಾಗಿ ಹೀಗೆ ಪ್ರಾರ್ಥಿಸಿದರು:

"ಓ ಅಲ್ಲಾಹ್ ನನ್ನ ಜನರಿಗೆ ಮಾರ್ಗದರ್ಶನ ನೀಡು. ಅವರಿಗೆ ಸತ್ಯವು ತಿಳಿದಿಲ್ಲ."

ದುಸ್ಸಾನ್ ಎಂಬ ಗೋತ್ರವನ್ನು ಶಪಿಸಲು ಪೈಗಂಬರ್[ಸ] ರೊಂದಿಗೆ ಹೇಳಿದಾಗ ಅವರು ಹೀಗೆ ಪ್ರಾರ್ಥಿಸಿದರು:

"ಓ ಅಲ್ಲಾಹ್, ದುಸ್ಸಾನ್ ಗೋತ್ರಕ್ಕೆ ಮಾರ್ಗದರ್ಶನ ದಯಪಾಲಿಸು."

ಮೇಲಿನ ಉದಾಹರಣೆಗಳು ಹಝ್ರತ್ ಪೈಗಂಬರರಿಗೆ[ಸ] ಕರುಣೆ ಮತ್ತು ಮಾನವರ ಏಳಿಗೆಯ ಕುರಿತು ಇದ್ದ ಕಾಳಜಿಯನ್ನು ಸ್ಪಷ್ಟಪಡಿಸುತ್ತದೆ. ಖಡ್ಗದ ಮೂಲಕ ಬಲಾತ್ಕಾರವಾಗಿ ಧರ್ಮಪರಿವರ್ತನೆಯನ್ನು ಜನರ ಮೇಲೆ ಹೇರಲಾಗುವುದೆಂದು ಅವರು ಎಂದೂ ಹೇಳಿರಲಿಲ್ಲ. ಅವರು ತನ್ನ ಶತ್ರುಗಳ ವಿರುದ್ಧ ಸಹ ಯಾವುದೇ ಅಶುಭಕರವಾದ ಮಾತನ್ನು ಹೇಳಲು ಅಥವಾ ಅವರನ್ನು ಶಪಿಸಲು ಎಂದೂ ಮುಂದಾಗಲಿಲ್ಲ.

ಬುಖಾರಿಯವರ ಕಿತಾಬುತ್ತಫ್‌ಸೀರ್‌ನಲ್ಲಿ ಹೀಗೆ ಬರೆಯಲಾಗಿದೆ:

"ಮಕ್ಕದ ಬಹುದೈವಾರಾಧಕರು ಹಝ್ರತ್ ಪೈಗಂಬರ[ಸ] ರನ್ನು ಮಕ್ಕದಿಂದ ಹೊರಹೋಗುವಂತೆ ಮಾಡಿದ ನಂತರ ಸಹ ಮದೀನದಲ್ಲಿ ಅವರನ್ನು ನೆಮ್ಮದಿಯಿಂದ ಇರಲು ಬಿಡಲಿಲ್ಲ. ಹೀಗಿದ್ದರೂ ಪೈಗಂಬರರು ಅವರ ಕುರಿತು ಕರುಣೆಯ ಭಾವವನ್ನು ಹೊಂದಿದವರಾಗಿದ್ದರು. ಪೈಗಂಬರರು[ಸ] ಮದೀನಕ್ಕೆ ವಲಸೆ ಹೋದನಂತರ ಮಕ್ಕದವರು ಕ್ಷಾಮವನ್ನು ಅನುಭವಿಸಬೇಕಾಯಿತು. ಅವರಿಗೆ ಆಹಾರ ದೊರಕದ ಕಾರಣ ಅವರು ಸತ್ತ ಮೃಗಗಳ ಮಾಂಸವನ್ನೂ ಎಲುಬುಗಳನ್ನೂ ತಿನ್ನಬೇಕಾಯಿತು. ಇಂತಹ ಕಷ್ಟದ ಪರಿಸ್ಥಿತಿಯಲ್ಲಿ ಮಕ್ಕದವರ ನಾಯಕನಾದ ಅಬೂಸೂಫಿಯಾನ್ ಪೈಗಂಬರರ[ಸ] ಬಳಿಗೆ ಬಂದು ಹೀಗೆ ಹೇಳಿದರು: 'ಓ ಮುಹಮ್ಮದ್, ನೀವು ಸಂಬಂಧಿಕರ ಕುರಿತು ಅವರೊಂದಿಗೆ ಉತ್ತಮವಾದ ರೀತಿಯಲ್ಲಿ ವರ್ತಿಸಬೇಕು ಎಂದು ಆಜ್ಞಾಪಿಸುತ್ತಿರುವಿರಿ. ನಿಮ್ಮ ಜನರೇ ಸಾಯುತ್ತಿದ್ದಾರೆ. ನೀವು ನಿಮ್ಮ ದೇವನೊಡನೆ ಈ ಕ್ಷಾಮವನ್ನು ಹೋಗಲಾಡಿಸಲು ಮತ್ತು ಮಳೆಗಾಗಿ ಪ್ರಾರ್ಥಿಸಿರಿ. ಇಲ್ಲದಿದ್ದರೆ ನಿಮ್ಮವರಾದ ಜನರು ನಾಶವಾಗುವರು.'

ಅಬೂಸೂಫಿಯಾನ್‌ರೊಂದಿಗೆ ಅವರ ನಿಜ ಸ್ಥಿತಿಯನ್ನು ತಿಳಿಸಲು ಹಝ್ರತ್ ಪೈಗಂಬರ[ಸ] ಹೀಗೆ ಹೇಳಿದರು: 'ನೀವು ಬಹಳ ಧೈರ್ಯಶಾಲಿ ಹಾಗೂ ಶೂರರೂ ಆಗಿದ್ದೀರಿ. ಮಕ್ಕದವರು ಅತಿರೇಕ ವರ್ತನೆಗಳನ್ನು ಮಾಡಿದವರಾಗಿದ್ದರೂ ನೀವು ಅವರ ಪರವಾಗಿ ಪ್ರಾರ್ಥನೆಯನ್ನು ಬಯಸುತ್ತಿರುವಿರಿ.'

ಹಝ್ರತ್ ಪೈಗಂಬರರು[ಸ] ದಯೆಯ ಸಾಕಾರ ಸ್ವರೂಪವಾಗಿದ್ದ ಕಾರಣ ಅವರು ಪ್ರಾರ್ಥಿಸುವುದನ್ನು ನಿರಾಕರಿಸಲಿಲ್ಲ. ತಮ್ಮ ಜನತೆ ನಾಶವಾಗಲಿ ಎಂದು ಅವರು ಎಂದೂ ಬಯಸಿರಲಿಲ್ಲ. ಅವರ ಕೈಗಳು ಪ್ರಾರ್ಥನೆಗಾಗಿ ಎತ್ತಲ್ಪಟ್ಟುದನ್ನು ಜನರು ಕಂಡರು. ಬರಗಾಲ ಕೊನೆಗೊಳ್ಳಲು ಮತ್ತು ಮಳೆ ಸುರಿಯಲು ಅವರು ಮಾಡಿದ ಪ್ರಾರ್ಥನೆ ದೇವ ಸನ್ನಿಧಿಯಲ್ಲಿ ಅಂಗೀಕರಿಸಲ್ಪಟ್ಟಿತು. ಎಷ್ಟು ಹೆಚ್ಚಾಗಿ ಮಳೆ ಸುರಿಯಿತೆಂದರೆ ಮಕ್ಕದ ಖುರೈಶ್ ಗೋತ್ರದ ಜನರಿಗೆ ಸುಖ ಸಮೃದ್ಧಿಯ ಕಾಲವು ಮರಳಿ ದೊರಕಿತು. ಆದರೆ ಅವರ ವಿರೋಧ ಸಹ ಕಡಿಮೆಯಾಗದೆ ಹೆಚ್ಚಾಯಿತು." (ಬುಖಾರಿ : ಕಿತಾಬುತ್ತಫ್‌ಸೀರ್)

ಇಂತಹ ಮನೋಭಾವ ಹೊಂದಿದ ಮಹಾನುಭಾವರು ಉಗ್ರಗಾಮಿ ತತ್ವಗಳ ಮತ್ತು ಭಯೋತ್ಪಾದನೆಯ ಉಪದೇಶ ನೀಡಿದರು ಎಂದು ಹೇಳಲು ಹೇಗೆ ತಾನೆ ಸಾಧ್ಯ.

## ಇಸ್ಲಾಮ್ ಧರ್ಮದಲ್ಲಿ ಬಲಾತ್ಕಾರವಿಲ್ಲ

ಪವಿತ್ರ ಖುರ್‌ಆನ್ ಹೇಳುತ್ತದೆ:

"ಧರ್ಮದಲ್ಲಿ ಯಾವುದೇ ರೀತಿಯ ಬಲಾತ್ಕಾರವಿಲ್ಲ. ಖಂಡಿತವಾಗಿಯೂ ಸನ್ಮಾರ್ಗವು ದುರ್ಮಾರ್ಗದಿಂದ ಭಿನ್ನವಾಗಿದೆ. ಯಾವಾತನು ದುಷ್ಟ ಶಕ್ತಿಗಳನ್ನು ತಿರಸ್ಕರಿಸಿ ಅಲ್ಲಾಹನನ್ನು ನಂಬುತ್ತಾನೋ ಖಂಡಿತವಾಗಿಯೂ ಆತನು ಸುದೃಢವಾದೊಂದು ಕೈಯಾಸರೆಯನ್ನು

ಹಿಡಿದಿರುವನು (ಎಂದು ತಿಳಿದುಕೊಳ್ಳಲಿ). ಅದು ಎಂದಿಗೂ ಮುರಿದು ಹೋಗುವಂಥದ್ದಲ್ಲ. ಅಲ್ಲಾಹನು ಎಲ್ಲವನ್ನು ಆಲಿಸುವವನೂ ಎಲ್ಲವನ್ನು ಬಲ್ಲವನೂ ಆಗಿದ್ದಾನೆ."(2:257)

ಪವಿತ್ರ ಖುರ್‌ಆನಿನ ಈ ವಚನದ ವ್ಯಾಖ್ಯಾನ ಮತ್ತು ಅದನ್ನು ಕೃತಿ ರೂಪಕ್ಕೆ ಇಳಿಸಿದುದು ಹೇಗೆಂಬುದನ್ನು ಮುಂದೆ ವಿವರಿಸಲಾಗುವ ಘಟನೆಯಿಂದ ತಿಳಿಯಬಹುದು. ಬನೂ ನದೀರ್ ಗೋತ್ರವು ಶಾಂತಿಯನ್ನು ಕಾಪಾಡಲಾಗುವುದೆಂಬ ತನ್ನ ವಾಗ್ದಾನವನ್ನು ಮುರಿದಾಗ ಅವರನ್ನು ಮದೀನದಿಂದ ಹೊರಗಟ್ಟಲಾಯಿತು. ಮದೀನದ ಮುಸ್ಲಿಮರಿಗೆ, ಅವರು ಮುಸ್ಲಿಮರಾಗುವ ಮೊದಲು ಜನಿಸಿದ ಗಂಡುಮಕ್ಕಳು ಆ ಗೋತ್ರದವರ ವಶದಲ್ಲಿದ್ದರು. ಇಸ್ಲಾಮ್ ಧರ್ಮದ ಆಗಮನಕ್ಕೆ ಮೊದಲಿನ ಅಜ್ಞಾನದ ಕಾಲದಲ್ಲಿ ಮದೀನದ ಔಸ್ ಮತ್ತು ಖಿಝ್‌ರಜ್ ಗೋತ್ರದ ಅರಬಿಗಳು ತಮಗೆ ಗಂಡು ಸಂತಾನವಿಲ್ಲದಿದ್ದರೆ, ತಮ್ಮ ಮುಂದಿನ ಮಗು ಗಂಡಾದರೆ ಯಹೂದಿಯನ್ನಾಗಿ ಮಾಡುವೆವು ಎಂದು ಹರಕೆ ಮಾಡುತ್ತಿದ್ದರು. ಅರಬಿಗಳ ಔಸ್ ಮತ್ತು ಖಿಝ್‌ರಜ್ ಗೋತ್ರದ ಅನೇಕ ಹುಡುಗರನ್ನು ಯಹೂದಿಯರ ಕುಟುಂಬಗಳಿಗೆ ಕೊಡಲಾಗಿತ್ತು. ಬನೂ ನದೀರ್ ಗೋತ್ರದ ಯಹೂದಿಗಳನ್ನು ಅವರ ವಚನ ಭ್ರಷ್ಟತೆಗಾಗಿ ಗಡಿಪಾರು ಮಾಡಿದಾಗ ಮುಸ್ಲಿಮರು ಅವರಿಂದ ತಮ್ಮ ಮಕ್ಕಳನ್ನು ಮರಳಿ ಪಡೆಯಲು ಬಯಸಿದರು. ಆದರೆ ಹಝ್ರತ್ ಪೈಗಂಬರರು(ಸ) "ಧರ್ಮದಲ್ಲಿ ಯಾವುದೇ ರೀತಿಯ ಬಲಾತ್ಕಾರವಿಲ್ಲ" ಎಂಬ ಪವಿತ್ರ ಖುರ್‌ಆನಿನ ಉಪದೇಶಕ್ಕೆ ಅನುಸಾರವಾಗಿ ಅವರನ್ನು ಅದರಿಂದ ತಡೆದರು. "ನಿಮ್ಮಲ್ಲಿ ಯಾರಾದರೂ ತನ್ನ ಮಗನನ್ನು ಯಹೂದಿಗೆ ಕೊಟ್ಟಾಗ ಯಹೂದಿಯರು ಅವನನ್ನು ತಮ್ಮ ಧರ್ಮಕ್ಕೆ ಸೇರಿಸಿರುವರು. ನೀವು ಅವನನ್ನು ಮರಳಿ ಪಡೆದುಕೊಳ್ಳಲಾರಿರಿ. ಅವನು ಬನೂ ನದೀರ್ ಗೋತ್ರದವರೊಂದಿಗೆಯೇ ಹೋಗಲಿ" ಎಂದು ಅವರು ಹೇಳಿದರು.

ಹಝ್ರತ್ ಉಮರ್ (ರಝಿಯಲ್ಲಾಹು ಅನ್‌ಹು) ರವರ ಗುಲಾಮನಿಗೆ ಸಂಬಂಧಿಸಿ ಇನ್ನೊಂದು ಕಥನ ಇದೆ. ಹಝ್ರತ್ ಉಮರ್(ರ) ತನ್ನನ್ನು ಇಸ್ಲಾಮ್ ಧರ್ಮ ಸ್ವೀಕರಿಸಲು ಎಂದೂ ಒತ್ತಾಯ ಮಾಡಲಿಲ್ಲ ಎಂದು ಆ ಗುಲಾಮ ಹೇಳಿರುವನು. ಹಝ್ರತ್ ಉಮರ್(ರ) ಪ್ರೀತಿ ವಾತ್ಸಲ್ಯದಿಂದ ಆ ಗುಲಾಮನೊಡನೆ ಮುಸ್ಲಿಮನಾಗಬೇಕೆಂದು ನಿಶ್ಚಯವಾಗಿಯೂ ಉಪದೇಶಿಸುತ್ತಿದ್ದರು. ಆಗ ಗುಲಾಮ ನಿರಾಕರಿಸಿದಾಗ ಹಝ್ರತ್ ಉಮರ್(ರ) ಹೀಗೆ ಮಾತ್ರ ಹೇಳುತ್ತಿದ್ದರು: "ಧರ್ಮದ ವಿಷಯದಲ್ಲಿ ಯಾವುದೇ ಬಲಾತ್ಕಾರವಿಲ್ಲ." ಹೀಗೆ ಹೇಳಿ ಅವರು ಮೌನವಾಗುತ್ತಿದ್ದರು. ಕೊನೆಗೆ ತಾವು ಮೃತರಾಗುವ ಮೊದಲು ಅವರು ಆ ಗುಲಾಮನನ್ನು ವಿಮೋಚಿಸಿದರು.

ಹೀಗಿರುವಾಗ ಬಲಾತ್ಕಾರ ಮತ್ತು ಶಾಂತಿ ಭಂಗಕ್ಕೆ ಇಸ್ಲಾಮಿನಲ್ಲಿ ಯಾವುದಾದರೂ ಅವಕಾಶವಿದೆ ಎಂದು ಹೇಳಲು ಹೇಗೆ ತಾನೆ ಸಾಧ್ಯ?

ಅಹ್ಮದಿಯಾ ಮುಸ್ಲಿಮ್ ಜಮಾಅತಿನ ಸ್ಥಾಪಕರು ಹೀಗೆ ಹೇಳುತ್ತಾರೆ:

"ಇಸ್ಲಾಮ್ ಧರ್ಮವು ಖಡ್ಗದ ಮೂಲಕ ಪ್ರಚಾರಗೊಂಡಿತು ಎಂದು ನಮ್ಮ ವಿರೋಧಿಗಳು ಹೇಳುವುದು ಯಾವ ಆಧಾರದಿಂದ ಮತ್ತು ಯಾರ ಮೂಲಕ ತಿಳಿದು ಎಂಬುದು ನನಗೆ ತಿಳಿಯದು. ಇಸ್ಲಾಮ್ ಧರ್ಮದಲ್ಲಿ ಯಾವುದೇ ಬಲಾತ್ಕಾರವಿಲ್ಲ ಎಂದು ದೇವನು ಪವಿತ್ರ ಖುರ್‌ಆನ್‌ನಲ್ಲಿ ಹೇಳಿರುವನು. ಹಾಗಿರುವಾಗ ಬಲಪ್ರಯೋಗಿಸಲು ಅಜ್ಞಾಪಿಸಿದುದು ಯಾರು? ಅವರು ಪ್ರಯೋಗಿಸಿದ ಆಯುಧಗಳು ಯಾವುವು? ಮುಸ್ಲಿಮರಾಗಲು ಬಲಾತ್ಕಾರ ಮಾಡಲ್ಪಟ್ಟವರ ನಿಷ್ಠೆ ಮತ್ತು ವಿಶ್ವಾಸ ಯಾವ ಮಟ್ಟದ್ದಾಗಿರಬಹುದು? ಯಾವುದೇ ಪ್ರತಿಫಲೇಚ್ಛೆಯಿಲ್ಲದೆ ಇನ್ನೂರು ಮುನ್ನೂರು ಮಂದಿ ವಿಶ್ವಾಸಿಗಳು ಸಾವಿರಾರು ಸಂಖ್ಯೆಯ ಶತ್ರುಗಳನ್ನು ಎದುರಿಸುವುದಾದರೂ ಹೇಗೆ? ಅವರು ಸಾವಿರಾರು ಸಂಖ್ಯೆಯಲ್ಲಿ ವರ್ಧಿಸಿದಾಗ ಲಕ್ಷಾಂತರ ಸಂಖ್ಯೆಯ ಶತ್ರುಗಳನ್ನು ಸೋಲಿಸಿದರು. ಅವರು ತಮ್ಮ ಧರ್ಮವನ್ನು ಶತ್ರುಗಳಿಂದ ರಕ್ಷಿಸಲು ತಮ್ಮ ತಲೆಗಳನ್ನು ಬಲಿಯರ್ಪಿಸಲ್ಪಡುವ ಕುರಿಗಳ ಹಾಗೆ ಅರ್ಪಿಸಿದರು ಮತ್ತು ತಮ್ಮ ವಿಶ್ವಾಸದ ಸತ್ಯವನ್ನು ತಮ್ಮ ಸ್ವಂತ ರಕ್ತದ ಮೂಲಕ ಸಾಕ್ಷಿಗೊಳಿಸಿದರು. ಅವರು ದೇವನ ಏಕತ್ವವನ್ನು ಸಾರಲಿಕ್ಕೋಸ್ಕರ ನಿರಾಶ್ರಿತರಂತೆ ಎಲ್ಲಾ ವಿಧ ಕಷ್ಟಗಳನ್ನು ಸಹಿಸಿ ಆಫ್ರಿಕದ ಮರುಭೂಮಿಗಳಲ್ಲಿಯೂ ಇತರ ಭೂಖಂಡಗಳಲ್ಲಿಯೂ ಧರ್ಮಪ್ರಚಾರ ಮಾಡಿದರು. ಅವರು ಕಷ್ಟಗಳನ್ನು ಸಹಿಸಿ ಚೀನವನ್ನು ಸಹ ತಲುಪಿದರು - ಆಕ್ರಮಣಗಾರರಾಗಿ ಅಲ್ಲ; ಚೀನದ ಜನರನ್ನು ಇಸ್ಲಾಮಿನ ಕಡೆಗೆ ಕರೆಯುವ ಧರ್ಮಪ್ರಚಾರಕರಾದ ನಿರಾಶ್ರಿತರಾಗಿ. ನೀವು ಪ್ರಾಮಾಣಿಕವಾಗಿ ಹೇಳಿರಿ. ಇವುಗಳೆಲ್ಲಾ ಬಲಾತ್ಕಾರದಿಂದ ಮುಸ್ಲಿಮರಾಗಿ ಪರಿವರ್ತಿತರಾದವರ, ನಾಲಗೆಯಲ್ಲಿ ಮಾತ್ರ ವಿಶ್ವಾಸವಿದ್ದು ಹೃದಯದಲ್ಲಿ ಅವಿಶ್ವಾಸವಿದ್ದ ಕಪಟಿಗಳ ಕೆಲಸಗಳೇ? ಅಲ್ಲ, ಈ ಕೆಲಸಗಳೆಲ್ಲಾ ಮಾಡಿದವರು ಧರ್ಮದ ಪ್ರಕಾಶ ತುಂಬಿದ ಹೃದಯವನ್ನು ಹೊಂದಿದವರು. ಅವರ ಹೃದಯಗಳಲ್ಲಿ ಏಕದೇವನ ಹೊರತು ಬೇರೆ ಯಾರೂ ಇರಲಿಲ್ಲ."

(ಪೈಗಾಮೆ ಸುಲ್‌ಹ್: ರೂಹಾನಿ ಖಝಾಯಿನ್ ಸಂಪುಟ 23 ಪುಟ 468-469)

## ವಿಶ್ವಾಸ ಮತ್ತು ಆತ್ಮಸಾಕ್ಷಿಯ ಸ್ವಾತಂತ್ರ್ಯ

ವಿಶ್ವಾಸ ಮತ್ತು ಆತ್ಮಸಾಕ್ಷಿಯ ಸ್ವಾತಂತ್ರ್ಯಗಳ ಕುರಿತು ಪರಂಪರೆಯಿಂದ ದೊರೆತ ಜ್ಞಾನ ಸಂಗ್ರಹಗಳಲ್ಲಿ ಅನೇಕ ಘಟನೆಗಳು ವಿವರಿಸಲ್ಪಟ್ಟಿವೆ. ಉದಾಹರಣೆಗಾಗಿ ಒಂದು ಘಟನೆಯನ್ನು ಮಾತ್ರ ನಿಮ್ಮ ಮುಂದಿಡುತ್ತೇನೆ.

ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಪ್ರಜೆಗಳಾಗಿದ್ದರೂ ಕೆಲವು ವಿರೋಧಿ ಗುಂಪುಗಳು ತಮ್ಮದೇ ವಿಶ್ವಾಸವನ್ನು ಅನುಸರಿಸಲು ಬಯಸಿದ್ದರು. ಪ್ರತಿಯೊಬ್ಬನಿಗೆ ಯಾವುದೇ ನಂಬಿಕೆಯನ್ನು ಹೊಂದಲು ಸ್ವಾತಂತ್ರ್ಯವಿರಬೇಕೆಂದು ಪೈಗಂಬರರು(ಸ) ಅಗತ್ಯಪಡಿಸಿದ್ದರು. ಆದರೆ ಈ

ವಿರೋಧಿಗಳು ಈ ತತ್ವವನ್ನು ಅಂಗೀಕರಿಸಿರಲಿಲ್ಲ ಮತ್ತು ಹಿಂದೆ ಮುಸ್ಲಿಮರ ವಿರುದ್ಧ ಬಲಾತ್ಕಾರ ಪ್ರಯೋಗಿಸಿದ್ದರು. ಆದುದರಿಂದ ತಮ್ಮ ಬಗ್ಗೆ ಯಾವ ತೀರ್ಮಾನ ಕೈಗೊಳ್ಳಲಾಗುವುದು ಎಂಬುದರ ಕುರಿತು ಅವರು ಆತಂಕಿತರಾಗಿದ್ದರು.

ವಿರೋಧಿಗಳು ಸೋಲಿಸಲ್ಪಟ್ಟಾಗ ಹಝ್ರತ್ ಪೈಗಂಬರರು(ಸ) ಅವರ ಅವಮಾನವನ್ನು ದೂರೀಕರಿಸಲು ನಿರ್ಧರಿಸಿ ಹೀಗೆ ಹೇಳಿದರು: "ಯಾವ ತತ್ವದ ಅಂಗೀಕಾರಕ್ಕಾಗಿ ನಾನು ನಿಮ್ಮ ವಿರುದ್ಧ ಹೋರಾಡಿದೆನೋ ಆ ತತ್ವವನ್ನು, ನೀವು ಅದನ್ನು ವಿರೋಧಿಸಿದ ಕಾರಣದಿಂದ ಕೈಬಿಡಲಾರೆನು. ನಿಮ್ಮ ಕ್ರೂರ ಮನೋಭಾವದ ಕಾರಣದಿಂದ ನೀವು ತಪ್ಪಾದ ರೀತಿಯಲ್ಲಿ ವರ್ತಿಸಿದಿರಿ. ಆದರೆ ನಿಮ್ಮ ಹಕ್ಕುಗಳು ರಕ್ಷಿಸಲ್ಪಡುವುವು. ನೀವು ಹೋಗಿರಿ, ನಿಮ್ಮ ಮೇಲೆ ದೋಷಾರೂಪವೇನೂ ಇಲ್ಲ. ಧರ್ಮದ ವಿಷಯದಲ್ಲಿ ನಿಮ್ಮಲ್ಲಿ ಪ್ರತಿಯೊಬ್ಬನೂ ಸ್ವತಂತ್ರನಾಗಿರುವನು. ನೀವು ನಮ್ಮ ಝಿಮ್ಮಿ (ಮುಸ್ಲಿಮ್ ದೇಶದಲ್ಲಿ ವಾಸಿಸುವ ಅಮುಸ್ಲಿಮ್)ಗಳಾಗಿರುವಿರಿ. ನಿಮ್ಮ ಸುರಕ್ಷೆಯ ಪೂರ್ಣ ಹೊಣೆಗಾರಿಕೆ ಅಲ್ಲಾಹನಿಗೂ ಅವನ ಸಂದೇಶ ವಾಹಕನಿಗೂ ಇದೆ."

(ನಿಸ್‌ಬಲ್ ರೈಹ ಫೀ ತಖ್‌ರೀಜ್ ಆಹಾದೀಸ್ ಅಲ್ ಹದಾಯ ಸಂಪುಟ 4, ಪುಟ 381- ಈಜಿಪ್ಟ್‌ನಲ್ಲಿ ಪ್ರಕಟಿತವಾದ ಗ್ರಂಥ)

ಪವಿತ್ರ ಖುರ್‌ಆನ್‌ನಲ್ಲಿ ಅಲ್ಲಾಹನು ಹೀಗೆ ಹೇಳುತ್ತಾನೆ:

"ಎಲೈ ಸತ್ಯವಿಶ್ವಾಸಿಗಳೇ, ನೀವು ನ್ಯಾಯೋಚಿತವಾಗಿ ಸಾಕ್ಷ್ಯವಹಿಸುವವರಾಗಿದ್ದುಕೊಂಡು, ಅಲ್ಲಾಹನ ಮಾರ್ಗದಲ್ಲಿ ಸ್ಥಿರಚಿತ್ತರಾಗಿರಿ. ಒಂದು ಜನಾಂಗದವರ ಶತ್ರುತ್ವ ಅವರೊಡನೆ ಅನ್ಯಾಯವಾಗಿ ವರ್ತಿಸಲು ನಿಮ್ಮನ್ನು ಪ್ರೇರೇಪಿಸದಿರಲಿ. (ಸದಾ) ನೀವು ನ್ಯಾಯಯುತವಾಗಿ ವರ್ತಿಸಿರಿ. ಅದು ದೇವಭಕ್ತಿಗೆ ಅತಿ ಸಮೀಪವಾದುದು. ನೀವು ಅಲ್ಲಾಹನ ಭಯಭಕ್ತಿಯಿರಿಸಿಕೊಳ್ಳಿರಿ. ನಿಸ್ಸಂಶಯವಾಗಿಯೂ ಅಲ್ಲಾಹನು ನೀವು ಮಾಡುವುದನ್ನೆಲ್ಲ ಬಲ್ಲವನಾಗಿದ್ದಾನೆ." (5:9)

ಪವಿತ್ರ ಖುರ್‌ಆನಿನ ಈ ಉಪದೇಶವನ್ನು ಕೃತಿರೂಪಕ್ಕೆ ತಂದುದು ಹೇಗೆಂದು ನೋಡೋಣ. ಅದರ ನಂತರ ಇಸ್ಲಾಮ್ ಶಾಂತಿ, ಸೌಹಾರ್ದ, ರಾಜಿ ಸಂಧಾನ ಮತ್ತು ನ್ಯಾಯದ ಧರ್ಮವಲ್ಲವೆಂದು ಹೇಳಲು ಹೇಗೆ ತಾನೆ ಸಾಧ್ಯ?

ಹಝ್ರತ್ ಪೈಗಂಬರರ(ಸ) ನುಡಿಮುತ್ತುಗಳ ಸಂಗ್ರಹದಲ್ಲಿ ಹೀಗೆ ವರದಿಯಾಗಿದೆ:

"ಹಝ್ರತ್ ಪೈಗಂಬರ(ಸ) ಒಬ್ಬ ಶಿಷ್ಯರಾಗಿದ್ದ ಮುಹರಯ್ಯಸ(ರ.) ಎಂಬವರು ಖೈಬರ್ ಎಂಬ ಸ್ಥಳದಲ್ಲಿ ಕೊಲ್ಲಲ್ಪಟ್ಟು ಹುತಾತ್ಮರಾಗಿದ್ದರು. ಅವರ ಫಲಾನುಭವಿಗಳು ಕೊಲೆಗಾರನಿಗೆ ಮರಣದಂಡನೆ ವಿಧಿಸಲು ಪೈಗಂಬರರನ್ನು(ಸ) ಕೇಳಿಕೊಂಡರು. ಆಗ ಪೈಗಂಬರರು(ಸ) ಕೇಳಿದರು: 'ನೀವು ಆಣೆಹಾಕಿ ಕೊಲೆಗಾರನು ಯಾರೆಂದು ಹೇಳಬಲ್ಲಿರೋ?' ಅವರು ಹೇಳಿದರು: 'ಅಲ್ಲಾಹನ ಪ್ರವಾದಿಯವರೇ, ಕೊಲೆ ನಡೆಯುವಾಗ ಅಲ್ಲಿ ನಾವಿರಲಿಲ್ಲ. ಹೀಗಿರುವಾಗ ನಾವು ಆಣೆ ಹಾಕಿ ಹೇಗೆ ಹೇಳಬಲ್ಲೆವು?' ಪೈಗಂಬರರು(ಸ) ಹೇಳಿದರು: 'ಸರಿಯಾದ ಸಾಕ್ಷ್ಯಾಧಾರವಿಲ್ಲದೆ ಮರಣದಂಡನೆ ವಿಧಿಸಲಾಗದು. ಒಂದು ಸಾಧ್ಯತೆ ಇದೆ. ನೀವು ಸಂಶಯಪಡುವ ಖೈಬರಿನ ಯಹೂದಿಯರು ಶಾಸನಬದ್ಧವಾಗಿ ಐವತ್ತು ಸಲ ಪ್ರಮಾಣ ಮಾಡಿ, ಕೊಲೆಗಾರ ಯಾರೆಂದು ನಮಗೆ ತಿಳಿಯದು ಎಂದು ಹೇಳಬೇಕು. ಮುಹಯ್ಯಸ(ರ) ಅವರ ಫಲಾನುಭವಿಗಳು ಹೇಳಿದರು: 'ಯಹೂದಿಯರನ್ನು ಯಾರು ನಂಬುತ್ತಾರೆ. ಅವರು ಸುಳ್ಳು ಪ್ರಮಾಣ ಮಾಡುವರು.' ಆಗ ಪೈಗಂಬರರು(ಸ) ಹೇಳಿದರು: 'ಇದಕ್ಕೆ ಹೊರತಾಗಿ ಯಾವುದೇ ಪಾರ್ಟಿ ಸವಾಲು ಅನುಮತಿಸಲ್ಪಡಲಿಕ್ಕಿಲ್ಲ. ಏಕೆಂದರೆ ಶಾಸನದ ದೃಷ್ಟಿ ಕೋನದಲ್ಲಿ ಯಾರ ಬಗ್ಗೆಯೂ ಪಕ್ಷಪಾತ ಸಲ್ಲದು.'

ಅನಂತರ ಹಝ್ರತ್ ಪೈಗಂಬರರು(ಸ) ಮುಹಯ್ಯಸ(ರ) ಅವರ ಫಲಾನುಭವಿಗಳಿಗೆ ಪರಿಹಾರ ಧನ ಕೊಟ್ಟರು."

(ತಜ್‌ರೀದ್ ಅಲ್‌ಬುಖಾರಿ - ಫಸ್‌ಲಿಲ್ ಜಿಹಾದ್, ಭಾಗ 2 ಪ್ರಕಾಶಕರು : ಫಿರೋಝ್‌ಸನ್ಸ್ ಲಾಹೋರ್)

ನಾನು ಮೇಲೆ ಉಲ್ಲೇಖಿಸಿದ ಪವಿತ್ರ ಖುರ್‌ಆನ್ ವಚನಗಳಿಂದ ಒಂದು ವಿಷಯ ಸ್ಪಷ್ಟವಾಗುತ್ತದೆ :

ಇಸ್ಲಾಮ್ ಧರ್ಮದ ಉಪದೇಶಗಳ ಪ್ರಕಾರ ವಿಶ್ವಾಸಗಳಿಗೆ ಸಂಬಂಧಿಸಿ ಯಾವುದೇ ಬಲಾತ್ಕಾರ ಸಲ್ಲದು. ಯಾವ ವಿಶ್ವಾಸವನ್ನು ಅವಲಂಬಿಸಬೇಕೆಂಬ ಸ್ವಾತಂತ್ರ್ಯವನ್ನು ಸರ್ವಶಕ್ತನಾದ ದೇವನು ಪ್ರತಿಯೊಬ್ಬನ ಆತ್ಮ ಸಾಕ್ಷಿಗೆ ದಯಪಾಲಿಸಿರುವನು. ನಾನು ಈ ಮೊದಲು ವಿವರಿಸಿದ ಗುಲಾಮನ ಉದಾಹರಣೆ ಪರಾಂಬರಿಸಿರಿ. ಒಬ್ಬ ಗುಲಾಮನು ಸಹ ಇಸ್ಲಾಂ ಧರ್ಮಕ್ಕೆ ಪರಿವರ್ತನೆಗೊಳ್ಳಲು ಬಲಾತ್ಕಾರಿಸಲ್ಪಡಲಿಲ್ಲ. ಪವಿತ್ರ ಖುರ್‌ಆನ್ ಆತ್ಮ ಸಾಕ್ಷಿಯ ಸ್ವಾತಂತ್ರ್ಯದ ಕುರಿತು ಅನೇಕ ವಚನಗಳಲ್ಲಿ ವಿವರಿಸಿದೆ. ಅವುಗಳನ್ನೆಲ್ಲಾ ಉಲ್ಲೇಖಿಸಲು ಇಲ್ಲಿ ಸಾಧ್ಯವಿಲ್ಲ.

ಸಂಕ್ಷಿಪ್ತವಾಗಿ ಹೇಳುವುದಾದರೆ, ಇಸ್ಲಾಮಿನ ಉಪದೇಶಗಳು ಸ್ಪಷ್ಟ ಮತ್ತು ಅಸಂದಿಗ್ಧವಾಗಿರುವಾಗ ಒಂದು ಪ್ರಶ್ನೆ ಉದಿಸುತ್ತದೆ. ಹಝ್ರತ್ ಮುಹಮ್ಮದ್ ಪೈಗಂಬರ್(ಸ) ಮತ್ತು ಅವರ ಶಿಷ್ಯರು ಒಂದು ಕೈಯಲ್ಲಿ ಪವಿತ್ರ ಖುರ್‌ಆನನ್ನು ಮತ್ತು ಇನ್ನೊಂದು ಕೈಯಲ್ಲಿ ಖಡ್ಗವನ್ನು ಹಿಡಿದಿರಲಿಲ್ಲವಾದರೆ ಮತ್ತು ಲೋಕದಲ್ಲಿ ಶಾಂತಿಯನ್ನು ಕದಡಿಲ್ಲವಾದರೆ ಈ ಪವಿತ್ರ ಯುದ್ಧಗಳೆಂದರೆ ಏನು? ಎಲ್ಲರ ಬಾಯಲ್ಲಿರುವ ಹಾಗೂ ಅದರ ಕಾರಣದಿಂದ ಪ್ರತಿಯೊಬ್ಬ ಮುಸ್ಲಿಮನು ಲೋಕದಲ್ಲಿ ಅಶಾಂತಿಯನ್ನು ಹಬ್ಬಿಸುವುದಕ್ಕಾಗಿ ನಿಂದಿಸಲ್ಪಡುವ ಈ ಜಿಹಾದ್ ಎಂದರೇನು? ಆಶ್ಚರ್ಯಕರವಾದ ಸಂಗತಿಯೇನೆಂದರೆ ಈ ಯುದ್ಧಗಳು ಪೈಗಂಬರರ(ಸ) ಕಾಲದಲ್ಲಿಯೇ ಆರಂಭಗೊಂಡಿತೆಂದು ನಂಬಲಾಗುತ್ತದೆ. ಪರಿಪೂರ್ಣ ನ್ಯಾಯದ ದೃಷ್ಟಿಯಲ್ಲಿ ಆ ಕಾಲದ ಪರಿಸ್ಥಿತಿಯನ್ನು

ಪರೀಕ್ಷಿಸಬೇಕಾದುದು ಅತ್ಯಾವಶ್ಯಕವಾಗಿದೆ. ಏಕೆಂದರೆ ಆ ಕಾಲಘಟ್ಟವನ್ನು ಪರಿಶೀಲಿಸದೆ ಆ ಬಗ್ಗೆ ನ್ಯಾಯಪೂರ್ಣವಾದ ತೀರ್ಪು ನೀಡುವುದು ಅಸಾಧ್ಯವಾಗಿದೆ. ಇದಕ್ಕೆ ಸಂಬಂಧಿಸಿ ಅಹ್ಮದಿಯಾ ಮುಸ್ಲಿಮ್ ಜಮಾಅತಿನ ಸ್ಥಾಪಕರು ಹೇಳಿದ ಮಾತುಗಳನ್ನು ನಿಮ್ಮ ಮುಂದೆ ಇರಿಸುತ್ತೇನೆ:

"ನಮ್ಮ ಪ್ರವಾದಿ(ಸ) ಮಕ್ಕದಲ್ಲಿ ಬಹಳ ನೋವನ್ನು ಅನುಭವಿಸಿದರು. ಅವರು ಅವಿಶ್ವಾಸಿಗಳಿಂದ ಹದಿಮೂರು ವರ್ಷಗಳ ಕಾಲ ಮಕ್ಕದಲ್ಲಿ ಅನುಭವಿಸಿದ ದೌರ್ಜನ್ಯ ಮತ್ತು ವಿವಿಧ ರೀತಿಯ ಕ್ರೌರ್ಯಗಳನ್ನು ನಮ್ಮ ಮನಸ್ಸಿನಲ್ಲಿ ಚಿತ್ರಿಸಿದಾಗ ನಮಗೆ ದುಃಖ ಉಮ್ಮಳಿಸಿ ಅಳು ಬರುತ್ತದೆ. ಆದರೆ ಅವರು ಖಡ್ಗವೆತ್ತಲಿಲ್ಲ. ವಿರೋಧಿಗಳ ಒರಟು ಮಾತುಗಳಿಗೆ ಒರಟಾಗಿ ಉತ್ತರಿಸಲಿಲ್ಲ. ಅವರ ಅನೇಕ ಶಿಷ್ಯರು ಮತ್ತು ಪ್ರಿಯ ಸ್ನೇಹಿತರು ಬಹಳ ಕ್ರೂರವಾಗಿ ವಧಿಸಲ್ಪಟ್ಟರು. ಎಲ್ಲಾ ವಿಧ ಹಿಂಸಾಚಾರಗಳಿಗೆ ಅವರನ್ನು ಗುರಿಮಾಡಲಾಯಿತು. ಕೆಲವರಿಗೆ ವಿಷ ನೀಡಲಾಯಿತು. ಅವರನ್ನು ಕೊಲ್ಲುವ ಅನೇಕ ಷಡ್ಯಂತರಗಳನ್ನು ಹೂಡಲಾದರೂ ಆ ವಿಷಯದಲ್ಲಿ ಶತ್ರುಗಳಿಗೆ ಜಯ ಸಿಗಲಿಲ್ಲ. ವಿರೋಧಿಗಳ ಕೃತ್ಯಗಳ ದೈವಿಕ ಲೆಕ್ಕಾಚಾರ ಸಮೀಪಿಸಿದಾಗ ಮಕ್ಕದ ಶತ್ರುಗಳ ನಾಯಕರು ಒಗ್ಗೂಡಿ ಹಝ್ರತ್ ಪೈಗಂಬರರನ್ನು(ಸ) ಕೊಲ್ಲಬೇಕೆಂದು ಒಮ್ಮತದಿಂದ ತೀರ್ಮಾನಿಸಿದರು. ಆ ಸಮಯದಲ್ಲಿ ತನಗೆ ಪ್ರಿಯರೂ ಸತ್ಯವಂತರೂ ಪ್ರಾಮಾಣಿಕರೂ ಆದ ದಾಸರ ರಕ್ಷಕನಾದ ದೇವನು ಈ ಸಂಗತಿಯನ್ನು ಹಝ್ರತ್ ಪೈಗಂಬರಿಗೆ(ಸ) ತಿಳಿಸಿದನು. ಆ ನಗರದಲ್ಲಿ ಕೆಡುಕಿನ ಹೊರತು ಇನ್ನೇನೂ ಬಾಕಿಯಾಗಿ ಉಳಿದಿಲ್ಲ ಮತ್ತು ನಗರವಾಸಿಗಳು ಹಝ್ರತ್ ಪೈಗಂಬರರನ್ನು(ಸ) ಕೊಲೆ ಮಾಡಲು ಸನ್ನದ್ಧರಾಗಿರುವುದರಿಂದ ನಗರವನ್ನು ಬಿಟ್ಟು ಕೂಡಲೆ ಹೋಗಬೇಕೆಂದು ತಿಳಿಸಲಾಯಿತು. ಆಗ ದೇವಾಜ್ಞೆಗೆ ಅನುಸಾರವಾಗಿ ಅವರು ಮದೀನಕ್ಕೆ ವಲಸೆ ಹೋದರು. ವಲಸೆ ಹೋಗುವಾಗಲೂ ಅವರನ್ನು ಬೆನ್ನಟ್ಟಲಾಯಿತು. ಶತ್ರುಗಳು ಅವರನ್ನು ಮತ್ತು ಇಸ್ಲಾಮನ್ನು ನಾಶಮಾಡಲು ಬಯಸಿದರು. ಶತ್ರುಗಳ ಹಿಂಸಾಚಾರ ಮಿತಿಮೀರಿದಾಗ ಮತ್ತು ನಿಷ್ಕಳಂಕ ಜನರನ್ನು ಕೊಲೆಮಾಡಿದ ಕಾರಣದಿಂದ ಶತ್ರುಗಳು ಶಿಕ್ಷೆ ನೀಡಲ್ಪಡಲು ಅರ್ಹರಾದರು. ಆಗ ಆತ್ಮ ಸಂರಕ್ಷಣೆಗಾಗಿ ಯುದ್ಧ ಮಾಡಲು ಅಲ್ಲಾಹನಿಂದ ಅನುಮತಿ ದೊರಕಿತು. ಶತ್ರುಗಳು ಅನೇಕ ನಿರಪರಾಧಿಗಳನ್ನು ಕೊಲೆ ಮಾಡಿ ಅವರ ಸಂಪತ್ತನ್ನು ಲೂಟಿ ಮಾಡಿದ ಕಾರಣದಿಂದ ಈ ರೀತಿ ಅವರೊಡನೆ ವರ್ತಿಸಲು ಅನುಮತಿ ಲಭಿಸಿತು. ಆದರೆ ಮಕ್ಕವನ್ನು ಜಯಿಸಿದ ಕಾಲದಲ್ಲಿ ನಮ್ಮ ಪ್ರವಾದಿ(ಸ) ಅವರೆಲ್ಲರನ್ನೂ ಕ್ಷಮಿಸಿದರು. ಹಝ್ರತ್ ಪೈಗಂಬರರು(ಸ) ಮತ್ತು ಅವರ ಶಿಷ್ಯರು ಧರ್ಮ ಪ್ರಚಾರಕ್ಕಾಗಿ ಯುದ್ಧ ಮಾಡಿದರೆಂದಾಗಲಿ ಇತರರನ್ನು ಬಲಾತ್ಕಾರದಿಂದ ಮುಸ್ಲಿಮರನ್ನಾಗಿ ಪರಿವರ್ತಿಸಲು ಯುದ್ಧ ಮಾಡಿದರೆಂದಾಗಲಿ ಭಾವಿಸುವುದು ಬಹಳ ದೊಡ್ಡ ತಪ್ಪು ಮತ್ತು ಕ್ರೂರತೆಯಾಗಿದೆ." (ಮಸೀಹ್ ಹಿಂದೂಸ್ಥಾನ್ ಮೇಂ ಪುಟ 7-8).

ಬೆನ್ನಟ್ಟುವವರೂ ಕ್ರೂರಿಗಳೂ ದೌರ್ಜನ್ಯಗಾರರೂ ಆಗಿರುವ ಶತ್ರುಗಳ ವಿರುದ್ಧ ಯುದ್ಧ ಮಾಡಲು ದೇವನಿಂದ ಅನುಮತಿ ದೊರೆತರೂ ಯುದ್ಧ ಮಾಡುವಾಗ ಯಾವುದೇ ಮಿತಿಮೀರಿದ ವರ್ತನೆಯನ್ನು ಮಾಡಬಾರದೆಂದು ಕಟ್ಟುನಿಟ್ಟಿನ ನಿರ್ಬಂಧವನ್ನು ದೇವಾಜ್ಞೆ ಮೂಲಕ ಹೇರಲಾಯಿತು. ಪವಿತ್ರ ಖುರ್‌ಆನ್ ಹೀಗೆ ಹೇಳಿದೆ:

"ಹಿಂಸಾಚಾರ ಇಲ್ಲದಂತಾಗಿ ಧರ್ಮ (ಸ್ವೀಕಾರ) ಅಲ್ಲಾಹನಿಗೋಸ್ಕರವಾಗುವ ವರೆಗೆ ನೀವು ಅವರೊಡನೆ ಯುದ್ಧ ಮಾಡಿರಿ. ಆದರೆ ಅವರು ವಿರಮಿಸಿದರೆ, (ಅರಿತುಕೊಳ್ಳಿರಿ) ದುಷ್ಕರ್ಮಿಗಳಲ್ಲದವರ ಮೇಲೆ ಆಕ್ರಮಣ ಸಲ್ಲದು." (2:194)

ಯುದ್ಧ ಮಾಡಲು ನೀಡಲಾದ ಆಜ್ಞೆಯು ಆತ್ಮರಕ್ಷಣೆಗಾಗಿ ನೀಡಿದ ಅನುಮತಿಯಾಗಿದ್ದು ಕೆಡುಕಿನ ನಿವಾರಣೆ ಅದರ ಉದ್ದೇಶವಾಗಿದೆ. ಯುದ್ಧ ಮಾಡುವ ಶತ್ರುಗಳು ಯುದ್ಧದಿಂದ ದೂರ ಸರಿದರೆ ಅವರ ವಿರುದ್ಧ ಯುದ್ಧ ಮುಂದುವರಿಸಬಾರದೆಂದು ಪವಿತ್ರ ಖುರ್‌ಆನಿನ ಆಜ್ಞೆಯಲ್ಲಿ ಹೇಳಲಾಗಿದೆ. ಏಕೆಂದರೆ ಯುದ್ಧಕ್ಕೆ ನೀಡಲಾದ ಅನುಮತಿಯ ಉದ್ದೇಶವು ಶಾಂತಿಯ ಸ್ಥಾಪನೆಯಾಗಿದೆ. ಹೀಗೆ ಯುದ್ಧಮಾಡಲು ಕೊಟ್ಟ ಅನುಮತಿಯಲ್ಲಿ ಕೂಡ ಆತ್ಮ ರಕ್ಷಣೆಯ ಮತ್ತು ಶಾಂತಿ ಸ್ಥಾಪಿಸುವ ಸುಂದರ ತತ್ವವನ್ನು ನಮಗೆ ದಯಪಾಲಿಸಲಾಗಿದೆ.

## ಯುದ್ಧಗಳಿಗೆ ಸಂಬಂಧಿಸಿದ ಇಸ್ಲಾಮಿಕ ನಿಯಮಗಳು

ಹಝ್ರತ್ ಪೈಗಂಬರರರು(ಸ) ಯುದ್ಧ ಮಾಡುವಾಗ ಪಾಲಿಸಬೇಕೆಂದು ಆಗ್ರಪಡಿಸಿದ ನಿಯಮಗಳು ಹೀಗಿವೆ :

- ❖ ಯಾವ ಮಹಿಳೆಯನ್ನೂ ಕೊಲ್ಲಬಾರದು.
- ❖ ಯಾವ ಮಕ್ಕಳನ್ನೂ ಕೊಲ್ಲಬಾರದು.
- ❖ ವೃದ್ಧರನ್ನು ತಡೆದಿಡಬಾರದು.
- ❖ ನಿರಾಶ್ರಿತರಿಗೂ ಸನ್ಯಾಸಿಗಳಿಗೂ ವಿರಕ್ತರಿಗೂ ಏನನ್ನೂ ಹೇಳಬಾರದು.
- ❖ ಪ್ರಾಣಿಗಳನ್ನು ಕೊಲ್ಲಬಾರದು.
- ❖ ಮರ ಕಡಿಯಬಾರದು.
- ❖ ಶತ್ರುಗಳ ನಡವಳಿಕೆ ತದ್ವಿರುದ್ಧವಾಗಿದ್ದರೂ ನೀವು ಯಾರ ಮೂಗನ್ನೂ ಕಿವಿಯನ್ನೂ ಕೊಯ್ಯಬಾರದು.

ಯುದ್ಧದಲ್ಲಿ ಜಯಗಳಿಸಿದ ನಂತರ ಹಝ್ರತ್ ಪೈಗಂಬರರು(ಸ) ಹೀಗೆ ಘೋಷಿಸುತ್ತಿದ್ದರು:

- ❖ ಗಾಯಾಳುಗಳಲ್ಲಿ ಯಾರನ್ನೂ ಕೊಲ್ಲಬಾರದು.

❖ ಓಡಿ ಹೋಗುವವರನ್ನು ಅನಾವಶ್ಯಕವಾಗಿ ಬೆನ್ನಟ್ಟಬಾರದು.

ಯುದ್ಧದಲ್ಲಿ ಸೆರೆಗೊಳಗಾದವರೊಂದಿಗೆ ದಯೆಯಿಂದ ವರ್ತಿಸಬೇಕೆಂದು ಸಹ ಅವರು ಒತ್ತಾಯಿಸುತ್ತಿದ್ದರು.

ಬದ್‌ರ್ ಯುದ್ಧದ ನಂತರ ಸೆರೆಹಿಡಿಯಲ್ಪಟ್ಟವರು ಹೀಗೆ ಹೇಳಿದುದಾಗಿ ವರದಿಯಾಗಿದೆ:

"ದೇವರಾಣೆ, ನಮ್ಮನ್ನು ಸವಾರಿ ಮಾಡುವಂತೆ ಮಾಡಿ ಮುಸ್ಲಿಮರು ನಡೆಯುತ್ತಾ ಹೋದರು. ನಮಗೆ ಆಹಾರ ನೀಡಿ ಅವರು ಹಸಿವೆಯಿಂದ ಇದ್ದರು. ನಮಗೆ ನೀರು ಕುಡಿಸಿ ಅವರು ಬಾಯಾರಿಕೆ ಅನುಭವಿಸಿದರು."

(ಬುಖಾರಿ, ಮುಸ್ಲಿಮ್, ತಿರ್‌ಮಿದಿ, ಅಬೂದಾವೂದ್)

ಇಸ್ಲಾಮನ್ನು ಯುದ್ಧಪ್ರಿಯ, ಗುಂಡಿಕ್ಕಿ ಕೊಲ್ಲುವುದರಲ್ಲಿ ಅತ್ಯಾಸಕ್ತಿ ಇರುವ ಮತ್ತು ಉಗ್ರವಾದಿ ಧರ್ಮವೆಂದು ಕರೆಯುವ ಜನರು ಯುದ್ಧಪ್ರಿಯ ಮನೋಭಾವ ಹೊಂದಿದ ಒಂದು ಧರ್ಮವು ಇಂತಹ ಉಪದೇಶ ನೀಡಲು ಸಾಧ್ಯವೇ ಎಂಬುದನ್ನು ಯೋಚಿಸಬೇಕು. ಕೆಲವು ಜನರ ಮತ್ತು ಸಂಸ್ಥೆಗಳ ಕೃತ್ಯಗಳನ್ನು ಇಸ್ಲಾಮಿನ ಮಡಿಲಿಗೆ ಚಿಮ್ಮಿಸಿ ಅದನ್ನೇ ಇಸ್ಲಾಮ್ ಎಂದು ಕರೆಯಬೇಡಿರಿ.

ಮನುಷ್ಯರು ತಾವು ಬಹಳ ಪ್ರಗತಿ ಹೊಂದಿದ್ದೇವೆ, ಬಹಳ ಸಂಗತಿಗಳನ್ನು ಮನವರಿಕೆ ಮಾಡಿದ್ದೇವೆ ಎಂದು ಭಾವಿಸುವ ಈಗಿನ ಕಾಲದಲ್ಲಿ ತಮ್ಮನ್ನೇ ಪ್ರಶ್ನಿಸಬೇಕಾದ ಸಂಗತಿ ಇದಾಗಿದೆ: ಆಕಾಶದಿಂದ ಬಾಂಬುಗಳ ಸುರಿಮಳೆ ಸುರಿಸಲ್ಪಡುವಾಗ ಮತ್ತು ಜನರು ವಾಸಿಸುವ ಸ್ಥಳಗಳಿಗೆ ಕ್ಷಿಪಣಿಗಳನ್ನು ಎಸೆಯುತ್ತಿರುವಾಗ ಮೇಲೆ ವಿವರಿಸಿದಂಥ ಉನ್ನತ ಮೌಲ್ಯಗಳು ಪಾಲಿಸಲ್ಪಡುತ್ತವೆಯೋ? ಅವ್ಯವಸ್ಥಿತವಾಗಿ ಸುರಿಸಲ್ಪಡುವ ಬಾಂಬುಗಳಿಂದ ಎಷ್ಟು ನಿರಪರಾಧಿ ಮನುಷ್ಯರ ರಕ್ತವು ಸುರಿಸಲ್ಪಡುತ್ತದೆ ಎಂಬುದನ್ನು ಮತ್ತು ಅಲ್ಲಲ್ಲಿ ಜೀವನಾಶ ಮಾಡುವುದನ್ನು ಗಣನೆಗೆ ತೆಗೆದುಕೊಳ್ಳಿರಿ. ಅರಾಜಕತೆ ಬಾಧಿಸಿರುವ ಪ್ರದೇಶಗಳಲ್ಲಿ ವೃದ್ಧರ, ಮಹಿಳೆಯರ, ಮಕ್ಕಳ ಶವಗಳ ಸ್ಮಶಾನಯಾತ್ರೆ ನಿತ್ಯ ದೃಶ್ಯಗಳಾಗಿವೆ. ಅಂತಹ ಸಮಾಚಾರಗಳನ್ನು ನಾವು ಸದಾ ಕೇಳುತ್ತಿದ್ದೇವೆ.

ಕೊನೆಯದಾಗಿ, ಇಸ್ಲಾಮಿನ ಸುಂದರ ಉಪದೇಶಗಳ ಹಾಗೂ ಶಾಂತಿಗಾಗಿ ಅದು ಮಾಡಿದ ಪ್ರಯತ್ನಗಳ ಮತ್ತು ವಿವಿಧ ಜನಾಂಗಗಳ ಜನರನ್ನು ಒಂದು ಭ್ರಾತೃತ್ವದಲ್ಲಿ ಒಗ್ಗೂಡಿಸಿದ ಕುರಿತು ಒಬ್ಬ ಕ್ರೈಸ್ತ ಚರಿತ್ರೆಗಾರರಾದ ಜೋರ್ಜ್ ಝ್ಯದಾನ್ ಹೇಳಿದ ಮಾತುಗಳನ್ನು ಉಲ್ಲೇಖಿಸಿ ಈ ವಿಷಯವನ್ನು ಮುಕ್ತಾಯಗೊಳಿಸುತ್ತೇನೆ:

"ಮುಸ್ಲಿಮರ ವಿದ್ಯಾಭ್ಯಾಸದ ಶೀಘ್ರ ಬೆಳವಣಿಗೆಯ ಮೂಲ ಕಾರಣವು ಇದಾಗಿದೆ: ಇಸ್ಲಾಮ್ ಧರ್ಮದ ಖಲೀಫರು ಎಲ್ಲಾ ಧರ್ಮಗಳಿಗೆ ಮತ್ತು ಜನಾಂಗಗಳಿಗೆ ಸೇರಿದ ವಿದ್ವಾಂಸರಿಗೆ ಬಹಳ ಮಹತ್ವ ನೀಡಿದ್ದರು ಹಾಗೂ ಅವರಿಗೆ ಅನೇಕ ಪಾರಿತೋಷಕ ಮತ್ತು ದಾನದತ್ತಿಗಳನ್ನು ಯಾವಾಗಲೂ ನೀಡುತ್ತಾ ಇದ್ದರು. ಆ ವಿದ್ವಾಂಸರ ಧರ್ಮ, ಜನಾಂಗ, ಜಾತಿ, ವಿಶ್ವಾಸಗಳ ಬಗ್ಗೆ ಅವರಿಗೆ ಯಾವುದೇ ಪರಿವೆ ಇರಲಿಲ್ಲ. ಕ್ರೈಸ್ತರು, ಯಹೂದಿಯರು, ಸಾಬಿ ಮತದವರು, ಇಂದ್ರಜಾಲಿಕರು, ಭವಿಷ್ಯ ಹೇಳುವವರು ಮತ್ತು ಇತರ ಎಲ್ಲಾ ಗುಂಪುಗಳಿಗೆ ಸೇರಿದವರು ಅವರಲ್ಲಿದ್ದರು. ಖಲೀಫರು ಅವರೊಂದಿಗೆ ಅತ್ಯಂತ ಗೌರವದಿಂದ ವರ್ತಿಸುತ್ತಾ ಇದ್ದರು. ಮುಸ್ಲಿಮ್ ಗಣ್ಯರು ಮತ್ತು ರಾಜ್ಯ ಪ್ರಮುಖರು ಹೊಂದಿದ ಹಕ್ಕುಗಳಿಗೆ ಸಮಾನವಾದ ಹಕ್ಕುಗಳನ್ನು ಅಮುಸ್ಲಿಮರಾದ ಈ ಜನರು ಸಹ ಹೊಂದಿದ್ದರು."

(ತಾರೀಖ್ ತಮದ್ದುನುಲ್ ಇಸ್ಲಾಮಿ - ಸಂಪುಟ 3, ಪುಟ 194)

ಇವುಗಳನ್ನೆಲ್ಲಾ ಅರಿತುಕೊಂಡ ನಂತರ ಸಹ ಇಸ್ಲಾಮ್ ಶಾಂತಿಯ ಧರ್ಮವಲ್ಲವೆಂದು ಯಾರಾದರೂ ಹೇಳುವುದಾದರೆ ಅದು ಅತ್ಯಂತ ಅನ್ಯಾಯದ ಮಾತಾಗುವುದು.

ಸೀಮಿತವಾದ ಕಾಲಾವಧಿಯಲ್ಲಿ ನಾನು ನಿಮಗೆ ತಿಳಿಸಿಕೊಟ್ಟ ಸಂಗತಿಗಳು ಇಸ್ಲಾಮ್ ಶಾಂತಿಯ ಕುರಿತು ನೀಡಿದ ಉಪದೇಶಗಳ ಕೆಲವು ಮುಖಗಳನ್ನು ತೋರಿಸಿ ಕೊಟ್ಟಿರಬಹುದೆಂದು ನಾನು ಭಾವಿಸುತ್ತೇನೆ.

ನೀವು ನನ್ನ ಭಾಷಣವನ್ನು ಆಸಕ್ತಿಯಿಂದಲೂ ಗೌರವ ಭಾವದಿಂದಲೂ ಆಲಿಸಿದುದಕ್ಕಾಗಿ ನಾನು ನಿಮಗೆ ಕೃತಜ್ಞನಾಗಿದ್ದೇನೆ. ★

**(The Review of Religions - May 2004.)**

ಭಾಷಾಂತರ: **M. ಉಬೈದುಲ್ಲಾ**

# "Love For All, Hatred For None."

# "ಎಲ್ಲರೊಡನೆಯೂ ಪ್ರೀತಿ, ಯಾರೊಡನೆಯೂ ದ್ವೇಷವಿಲ್ಲ."

# ಸಮಾನತೆ ಮತ್ತು ಸಹೃದಯತೆ

ಇಂದು ಲೋಕವು ಅಶಾಂತಿ ಮತ್ತು ಆತಂಕದಿಂದ ಪೀಡಿತವಾಗಿದೆ. ಇದಕ್ಕೆ ಮೊದಲನೆಯ ಕಾರಣ ಜಾತಿಗಳ ಮಧ್ಯೆ ಇರುವ ತಾರತಮತೆ, ವರ್ಣ ಮತ್ತು ಕುಲಗಳ ಮಧ್ಯೆ ಇರುವ ವ್ಯತ್ಯಾಸಗಳಾಗಿವೆ. ಕೆಲವೆಡೆಗಳಲ್ಲಿ ಬಿಳಿ ಮತ್ತು ಕಪ್ಪು ವರ್ಗದ ಮಧ್ಯೆ ಜಗಳಗಳಾಗುತ್ತಿವೆ. ಬೇರೆ ಕಡೆಗಳಲ್ಲಿ ಬಂಡವಾಳಶಾಹಿಗಳ ಮತ್ತು ಕೆಲಸಗಾರರ ಮಧ್ಯೆ ಜಗಳವಿದೆ. ಕೆಲವೆಡೆ ತಮ್ಮ ಕುಲಶ್ರೇಷ್ಠತೆಯ ಅಹಂಭಾವವಿದೆ. ಬೇರೆ ಕೆಲವೆಡೆ ಉನ್ನತ ಸ್ಥಾನದ ದರ್ಪವಿದೆ. ಆ ದರ್ಪವು ತಮ್ಮ ಹಾಗಿರುವ ಮನುಷ್ಯರನ್ನು ಹೀನಭಾವನೆಯಿಂದ ಕಾಣುತ್ತದೆ.

ಅಶಾಂತಿ ಮತ್ತು ಗಲಭೆ ಗೊಂದಲಗಳ ಇನ್ನೊಂದು ಕಾರಣವು ಒಂದು ಧರ್ಮದ ಅನುಯಾಯಿಗಳಲ್ಲಿ ಕೆಲವರು ಬೇರೆ ಧರ್ಮದವರ ಧಾರ್ಮಿಕ ಭಾವನೆಗಳಿಗೆ ಗೌರವ ನೀಡದಿರುವುದು ಮತ್ತು ಬೇರೆ ಧರ್ಮದವರ ನಾಯಕ, ಪ್ರವಾದಿ, ಋಷಿ, ಮುನಿ ಮೊದಲಾದವರನ್ನು ಆದರ ಭಾವದಿಂದ ಕಾಣದಿರುವುದಾಗಿದೆ. ಕೆಲವು ಸಾರಿ ಕೆಲವು ಕಿಡಿಗೇಡಿಗಳು ಬೇರೆ ಧರ್ಮದ ಧಾರ್ಮಿಕ ನಾಯಕರನ್ನು ಅಪಮಾನಿಸುವುದು ಮತ್ತು ಹೀನೈಸುವುದು ಬಹಳ ಅಭಿಮಾನಾರ್ಹ ವಿಷಯ ಎಂದು ಭಾವಿಸುತ್ತಾರೆ. ಇದರಿಂದ ಎದುರು ವಿಭಾಗದ ಜನರು ಪ್ರಚೋದಿತರಾಗುತ್ತಾರೆ. ಅವರು ತಮ್ಮ ಪ್ರಜ್ಞೆಯನ್ನು ಕಳೆದುಕೊಂಡು ಗಲಭೆ ದೊಂಬಿಗಳಿಗೆ ಮುಂದಾಗುತ್ತಾರೆ. ಇದರ ಫಲವಾಗಿ ನಿರಪರಾಧಿಗಳಾದ ಜನರು ತಮ್ಮ ಪ್ರಾಣ, ಸಂಪತ್ತು ಮತ್ತು ಗೌರವವನ್ನು ಕಳೆದುಕೊಳ್ಳುತ್ತಾರೆ.

ಆತ್ಮಸಾಕ್ಷಿಯ ಮತ್ತು ಧರ್ಮದ ಸ್ವಾತಂತ್ರ್ಯ ಪ್ರತಿಯೊಬ್ಬ ಮನುಷ್ಯನ ಮೂಲಭೂತ ಹಕ್ಕಾಗಿದೆ. ವಿಶ್ವಾಸ ಮತ್ತು ಧೋರಣೆಯಲ್ಲಿ ಭಿನ್ನತೆ ಇರಬಹುದಾಗಿದೆ. ಆದರೆ ಖೇದಕರವಾದ ಸಂಗತಿಯೇನೆಂದರೆ ಈ ಭಿನ್ನತೆಯನ್ನು ಶಾಂತಿ ಭಂಗಕ್ಕೆ ಮಾರ್ಗವನ್ನಾಗಿ ಮಾಡಲಾಗುತ್ತಿದೆ. ಆತ್ಮಸಾಕ್ಷಿ ಸ್ವಾತಂತ್ರ್ಯ ಮತ್ತು ಧಾರ್ಮಿಕ ಸ್ವಾತಂತ್ರ್ಯವನ್ನು ತುಳಿದು ಹಾಕಲು ಪ್ರಯತ್ನ ನಡೆಸಲಾಗುತ್ತಿದೆ. ಇದು ಬಹುಸಂಖ್ಯಾತರಾಗಿರುವ ಕಾರಣದಿಂದ ಅಥವಾ ಶಕ್ತಿಯ ಕಾರಣದಿಂದ ಮಾಡಲಾಗುತ್ತಿದೆ. ಒಟ್ಟಾರೆ ಹೇಳುವುದಾದರೆ, ಲೋಕದ ಯಾವ ಪ್ರದೇಶದಲ್ಲಿಯೂ ಶಾಂತಿ ಸಮಾಧಾನದ ಹೆಸರಾಗಲೀ ಕುರುಹಾಗಲೀ ಇಲ್ಲ. ಪೌರ್ವಾತ್ಯ ದೇಶಗಳಲ್ಲಿಯೂ ಇಲ್ಲ. ಅಭಿವೃದ್ಧಿ ಗಳಿಸಿದ ಪಾಶ್ಚಿಮಾತ್ಯ ದೇಶಗಳಲ್ಲಿಯೂ ಇಲ್ಲ. ಇಸ್ಲಾಮೀ ದೇಶಗಳ ಆತಂಕಭರಿತ ಪರಿಸ್ಥಿತಿ ಎಲ್ಲರಿಗೂ ತಿಳಿದಿದೆ. ಇಸ್ಲಾಮಿನ ಶಾಂತಿ ಪ್ರಿಯ ಸಮಾನತೆ ಮತ್ತು ಸಹೃದಯತೆಯ ಉಪದೇಶಗಳು ಎಲ್ಲಿ ಆರಂಭವಾಯಿತೋ ಆ ಪರಿಶುದ್ಧ ಭೂಭಾಗ ಸಹ ಇಂದು ಸುರಕ್ಷಿತವಾಗಿಲ್ಲ. ನಮ್ಮ ಪ್ರಿಯ ನೇತಾರ ಹಝ್‌ರತ್ ಮುಹಮ್ಮದ್ ಪೈಗಂಬರರು (ಸಲ್ಲಲ್ಲಾಹು ಅಲೈಹಿ ವಸಲ್ಲಮ್) ಮಾತಿನ ಮೂಲಕ ಉಪದೇಶ ನೀಡುವುದಕ್ಕೆ ತನ್ನ ಕೆಲಸವನ್ನು ಸೀಮಿತಗೊಳಿಸದೆ ಅವರು ಎಂತಹ ಪರಿಶುದ್ಧ ಸಮುದಾಯವನ್ನು ಸ್ಥಾಪಿಸಿ ತೋರಿಸಿದರೆಂದರೆ ಅದರಲ್ಲಿ ಬಣ್ಣ, ಕುಲ, ದೇಶ, ಜನಾಂಗ, ಜಾತಿ, ಗೋತ್ರ ಮೊದಲಾದುವುಗಳಿಗೆ ಸಂಬಂಧಿಸಿ ಯಾವುದೇ ಭೇದಭಾವನೆ ಇರಲಿಲ್ಲ. ಪ್ರತಿಯೊಬ್ಬ ಹಕ್ಕುದಾರನಿಗೆ ಅವನ ಹಕ್ಕು ನೀಡಲಾಗುತ್ತಿತ್ತು. ಬಲಹೀನರನ್ನು, ಅನಾಥರನ್ನು, ವಿಧವೆಯರನ್ನು ಸಂರಕ್ಷಿಸಲಾಗುತ್ತಿತ್ತು. ಬೇರೆ ಧರ್ಮಗಳ ಅನುಯಾಯಿಗಳೊಂದಿಗೆ ಆದರ್ಶದಾಯಕ ಸಹೃದಯತೆ ತೋರಿಸಲಾಗುತ್ತಿತ್ತು. ಹಝ್‌ರತ್ ಪೈಗಂಬರರು(ಸ) ಶಕ್ತಿಹೀನರಾಗಿದ್ದಾಗಲೂ ಜಯಶಾಲಿಯಾದಾಗಲೂ ದೇವನ ಸೃಷ್ಟಿಗಳ ಹಕ್ಕುಗಳನ್ನು ಸಂರಕ್ಷಿಸಿದರು ಮತ್ತು ಅವರನ್ನು ಎಲ್ಲಾ ವಿಧ ಕಷ್ಟಗಳಿಂದ ಮುಕ್ತರನ್ನಾಗಿ ಮಾಡಿ ಸಮಾಧಾನ ನೀಡಿದರು.

ಹಝ್‌ರತ್ ಮುಹಮ್ಮದ್ ಪೈಗಂಬರರು(ಸ) ಹಜ್ಜತುಲ್‌ವಿದಾ ಸಂದರ್ಭದಲ್ಲಿ ಮಾಡಿದ ಖುತ್‌ಬ (ಪ್ರವಚನ) ಇಸ್ಲಾಮೀ ಸಮಾನತೆಯ ಅತ್ಯಂತ ಶ್ರೇಷ್ಠ ಪ್ರತಿಪಾದನೆಯಾಗಿದೆ. ಅವರು ಹೇಳಿದರು: "ನಿಮ್ಮ ರಕ್ತ, ನಿಮ್ಮ ಸಂಪತ್ತು, ನಿಮ್ಮ ಗೌರವವು ಈ ಹಜ್ಜ್ ದಿನ, ಈ ತಿಂಗಳು, ಈ ನಗರ ಗೌರವಾರ್ಹವಾಗಿರುವ ಹಾಗೆಯೇ ಗೌರವಿಸಲ್ಪಡಲು ಕಡ್ಡಾಯಗೊಳಿಸಲ್ಪಟ್ಟಿವೆ" (ಬುಖಾರಿ). ಅನಂತರ ಹೇಳಿದರು: "ಯಾವ ಅರಬಿಗೂ ಅರಬಿಯೇತರನ ಮೇಲೆ ಶ್ರೇಷ್ಠತೆ ಇಲ್ಲ. ಯಾವ ಅರಬಿಯೇತರನಿಗೂ ಅರಬಿಯ ಮೇಲೆ ಶ್ರೇಷ್ಠತೆ ಇಲ್ಲ. ಭಕ್ತಿಗೆ ಸಂಬಂಧಿಸಿ ಹೊರತು" (ಬುಖಾರಿ).

ಸಮುದಾಯದ ವ್ಯಕ್ತಿಗಳ ಮಧ್ಯೆ ಪರಿಪೂರ್ಣ ಸಮಾನತೆಯನ್ನು ಅವರು ಸ್ಥಾಪಿಸಿದರು. ಸಾಮಾಜಿಕ ವ್ಯವಹಾರಗಳಿಗೆ ಸಂಬಂಧಿಸಿ ಅವರು ತನ್ನನ್ನು ಇತರರಿಗಿಂತ ಪ್ರತ್ಯೇಕವಾಗಿರುವವನು ಎಂದು ಭಾವಿಸುತ್ತಿರಲಿಲ್ಲ. ಒಂದು ಘಟನೆಯು ಪ್ರಸಿದ್ಧವಾಗಿದೆ. ಬದರ್ ಯುದ್ಧದ ಕಾಲದಲ್ಲಿ ಸಾಲುಗಳನ್ನು ಸರಿಪಡಿಸುವಾಗ ಒಬ್ಬ ಶಿಷ್ಯನ ಶರೀರದ ಬಟ್ಟೆ ಧರಿಸದ ನಗ್ನ ಭಾಗಕ್ಕೆ ಅವರ ಬೆತ್ತವು ತಾಗಿತು. ಆ ವ್ಯಕ್ತಿ ಪ್ರತೀಕಾರ ಮಾಡಲು ಬಯಸಿದಾಗ ಅವರು ತನ್ನ ಬೆನ್ನನ್ನು ನಗ್ನಗೊಳಿಸಿ ಹೇಳಿದರು: "ನೀವು ನಿಮ್ಮ ಪ್ರತೀಕಾರ ಮಾಡಿರಿ."

ಹಝ್‌ರತ್ ಮುಹಮ್ಮದ್ ಪೈಗಂಬರರು(ಸ) ಒಂದು ಸಂದರ್ಭದಲ್ಲಿ ಹೀಗೆ ಹೇಳಿದರು: "ಹಿಂದಿನ ಕಾಲದ ಸಮುದಾಯಗಳು ನಾಶವಾದುದು ಹೇಗೆಂದರೆ, ಅವರ ಬಲಿಷ್ಠ ಜನರು ಅಪರಾಧ ಮಾಡಿದರೆ ಅವರನ್ನು ಶಿಕ್ಷಿಸದೆ ಬಿಟ್ಟುಬಿಡಲಾಗುತ್ತಿತ್ತು. ಬಲಹೀನರು ಅಪರಾಧ ಮಾಡಿದರೆ ಶಿಕ್ಷಿಸಲಾಗುತ್ತಿತ್ತು." ಮಖ್‌ಝೂಮ್ ಗೋತ್ರದ ಫಾತಿಮ ಎಂಬ ಹೆಸರಿನ

ಮಹಿಳೆಯು ಕಳವು ಮಾಡಿದ್ದಳು. ಅವಳು ಸಾಮಾನ್ಯ ವರ್ಗದವಳಾಗಿರಲಿಲ್ಲ. ಅವಳ ಕೈ ಕಡಿಯಬಾರದೆಂದು ಶಿಷ್ಯರು ಯೋಚಿಸಿದರು. ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಬಳಿಗೆ ಆ ಮಹಿಳೆಗಾಗಿ ಶಿಫಾರಸು ಮಾಡಲು ಉಸಾಮ (ರಝಿಯಲ್ಲಾಹು ಅನ್‌ಹು) ರವರನ್ನು ಅವರು ಕಳುಹಿಸಿದರು. ಆಗ ಹಝ್ರತ್ ಪೈಗಂಬರ್(ಸ) ಹೇಳಿದರು: "ಏನು ನೀವು ಅಲ್ಲಾಹನು ನಿಗದಿಪಡಿಸಿದ ಶಿಕ್ಷೆಯ ಕುರಿತು ಶಿಫಾರಸು ಮಾಡಲು ಬಂದಿರುವಿರೋ? ಈಕೆ ಫಾತಿಮ ಮಖ್‌ಝೂಮಿಯಾ ಆಗಿದ್ದಾಳೆ. ಅಲ್ಲಾಹನಾಣೆ, ಮುಹಮ್ಮದ್‌ನ ಮಗಳು ಫಾತಿಮ ಸಹ ಕಳ್ಳತನ ಮಾಡಿದ್ದರೆ ನಾನು ಅವಳ ಕೈಯನ್ನು ಕಡಿಸುತ್ತಿದ್ದೆನು." (ಬುಖಾರಿ)

ಹಿಜರಿ ಎಂಟನೆಯ ವರ್ಷದಲ್ಲಿ ನಡೆದ ಮೌತ ಯುದ್ಧದ ಸೇನಾಧಿಪತಿಯಾಗಿ ಝೈದ್ ಬಿನ್ ಹಾರಿಸ್(ರ) ನಿಶ್ಚಯಿಸಲ್ಪಟ್ಟಿದ್ದರು. ಆ ಯುದ್ಧದಲ್ಲಿ ಅವರು ಹುತಾತ್ಮರಾದರು. ಹಿಜರಿ ಹನ್ನೊಂದನೆಯ ವರ್ಷದಲ್ಲಿ ಹಝ್ರತ್ ಪೈಗಂಬರರು(ಸ) ಹಝ್ರತ್ ಝೈದ್‌ರವರ (ರ) ಮಗನಾದ ಹಝ್ರತ್ ಉಸಾಮರವರನ್ನು(ರ) ಸೇನಾಧಿಪತಿಯಾಗಿ ಮಾಡಿ ಸೈನ್ಯವನ್ನು ಸಿರಿಯಾ ದೇಶಕ್ಕೆ ಕಳುಹಿಸಿದರು. ಹಝ್ರತ್ ಝೈದ್(ರ) ವಿಮೋಚಿತ ಗುಲಾಮರಾಗಿದ್ದರು. ಹೀಗೆ ಪೈಗಂಬರರು ವಿಮೋಚಿತ ಗುಲಾಮರಿಗೂ ವಿಮೋಚಿತ ಗುಲಾಮರ ಮಗನಿಗೂ ಉನ್ನತ ಹುದ್ದೆ ನೀಡಿ ಮಾನವ ಸಮಾನತೆಯ ಮತ್ತು ನ್ಯಾಯದ ಅತ್ಯುತ್ತಮ ಮಾದರಿಯನ್ನು ಲೋಕದ ಮುಂದೆ ಇರಿಸಿದರು. ಸಮಾನತೆಯ ಇನ್ನೊಂದು ಉದಾಹರಣೆ ಕಾನೂನಿನ ದೃಷ್ಟಿಯಲ್ಲಿ ಮುಸ್ಲಿಮರೂ ಮುಸ್ಲಿಮೇತರರೂ ಸಮಾನರು ಎಂಬ ತತ್ವವಾಗಿದೆ. ಇಸ್ಲಾಮಿನ ಚರಿತ್ರೆ ಅಂತಹ ಘಟನೆಗಳಿಂದ ತುಂಬಿವೆ. ಇಂದಿನ ಲೋಕ ಆ ಘಟನೆಗಳ ಕುರಿತು ಚಿಂತಿಸಿ ಕೃತಿಗಿಳಿಸುತ್ತಿದ್ದರೆ ಎಷ್ಟು ಚೆನ್ನಾಗಿತ್ತು!

ಐದು ಸಾರಿ ಸಾಮೂಹಿಕವಾಗಿ ನಮಾಝ್ ಮಾಡುವ ವಿಧಾನವು ನ್ಯಾಯ ಮತ್ತು ಸಮತೆಯ ಪಾಠವನ್ನು ಕೃತಿಗಿಳಿಸುವ ತರಬೇತಿಯನ್ನು ನೀಡುತ್ತದೆ. ಆಗ ಮಾಲಿಕ ಮತ್ತು ನೌಕರ, ಬಡವ ಮತ್ತು ಶ್ರೀಮಂತ ಬಲಶಾಲಿ ಮತ್ತು ಬಲಹೀನ, ದೊಡ್ಡವ ಮತ್ತು ಚಿಕ್ಕವ ಒಂದೇ ಸಾಲಿನಲ್ಲಿ ನಿಲ್ಲುತ್ತಾರೆ. ಯಾರ ಬಗ್ಗೆಯೂ ತಾರತಮತೆ ಇಲ್ಲ. ಒಬ್ಬ ನೌಕರ ಮೊದಲು ಬಂದರೆ ಅವನು ಮೊದಲನೆಯ ಸಾಲಿನಲ್ಲಿ ಸ್ಥಳ ಪಡೆಯುತ್ತಾನೆ. ಒಬ್ಬ ಮಾಲಿಕ ಅನಂತರ ಬಂದರೆ ಅವನು ಎರಡನೆಯ ಅಥವಾ ಕೊನೆಯ ಸಾಲಿನಲ್ಲಿ ಸ್ಥಳ ಪಡೆಯುತ್ತಾನೆ. ನಮಾಝ್ ನಂತರ ಹಜ್ಜ್‌ನಲ್ಲಿಯೂ ಇದೇ ಪಾಠವನ್ನು ಕಲಿಸಲಾಗುತ್ತದೆ. ಒಂದೇ ರೀತಿಯ ಪೋಷಾಕು ಧರಿಸಿ ಒಂದೇ ರೀತಿಯ ಶಬ್ದ ಉಚ್ಚರಿಸಿ ಮುಸ್ಲಿಮರು ಸಮಾನತೆಯನ್ನು ಕೃತಿಗಿಳಿಸಿದ ಮಾದರಿಯನ್ನು ತೋರಿಸುತ್ತಾರೆ.

ಸಮಾನತೆಯೊಂದಿಗೆ ಧಾರ್ಮಿಕ ಸೌಹಾರ್ದವು ಈಗಿನ ಕಾಲದ ಮುಖ್ಯ ಆವಶ್ಯಕತೆಗಳಲ್ಲಿ ಒಂದಾಗಿದೆ. ಧಾರ್ಮಿಕ ಸೌಹಾರ್ದ ಮತ್ತು ಆತ್ಮಸಾಕ್ಷಿಯ ಸ್ವಾತಂತ್ರ್ಯದ ಕುರಿತು ಅತ್ಯಂತ ಭವ್ಯ, ಜಾಣ್ಮೆಯಿಂದ ಕೂಡಿದ ಮತ್ತು ಶ್ರೇಷ್ಠ ಉಪದೇಶಗಳನ್ನು ಇಸ್ಲಾಮ್ ಲೋಕದ ಮುಂದಿರಿಸಿದೆ. ಇಸ್ಲಾಮಿನ ನಿಲುವು ಅದರ ಆರಂಭದ ಕಾಲದಿಂದಲೇ ಹೀಗಿದೆ: ಧರ್ಮದ ವಿಷಯದಲ್ಲಿ ಪ್ರತಿಯೊಬ್ಬ ಸ್ವತಂತ್ರನಾಗಿದ್ದಾನೆ. ಪ್ರತಿಯೊಬ್ಬನಿಗೆ ಆತ್ಮಸಾಕ್ಷಿಯ ಸ್ವಾತಂತ್ರ್ಯವಿದೆ. ಇಸ್ಲಾಮಿ ಸರಕಾರದ ಅಧೀನದಲ್ಲಿರುವವರು ಇಸ್ಲಾಮ್ ಧರ್ಮವನ್ನು ಸ್ವೀಕರಿಸಬೇಕೆಂದು ಅದು ಖಂಡಿತವಾಗಿಯೂ ಒತ್ತಡ ಹಾಕುವುದಿಲ್ಲ. ಪವಿತ್ರ ಖುರ್‌ಆನಿನಲ್ಲಿ ಅಲ್ಲಾಹನು "ಲಾ ಇಕ್ರಾಹ ಫಿದ್ದೀನ್" ಎಂದು ಹೇಳಿದ್ದಾನೆ. (ಅಲ್‌ಬಖರ : 257) ಎಂದರೆ ಧರ್ಮದ ವಿಷಯದಲ್ಲಿ ಸಂಪೂರ್ಣ ಸ್ವಾತಂತ್ರ್ಯವಿದೆ. ಯಾವ ಬಲಾತ್ಕಾರವೂ ಮಾಡಲ್ಪಡಲಿಕ್ಕಿಲ್ಲ. ನಿಮಗೆ ಇಷ್ಟವಿರುವ ಮಾರ್ಗವನ್ನು ಅವಲಂಬಿಸಿರಿ.

ಪವಿತ್ರ ಖುರ್‌ಆನಿನ ಇನ್ನೊಂದು ವಚನ ಹೀಗಿದೆ: "ಇನ್ನ ಹಾಧಿಹೀ ತಧ್‌ಕಿರತುನ್ ಫಮನ್ ಶಾಅತ್ತಖಧ ಇಲಾ ರಬ್ಬಿಹೀ ಸಬೀಲಾ." (ಅಲ್‌ಮುಝ್ಝಮ್ಮಿಲ್ : 20) ಅಂದರೆ, ಇದೊಂದು ಉಪದೇಶವಾಗಿದೆ. ಯಾರು ಇಚ್ಛಿಸುತ್ತಾನೋ ಅವನು ತನ್ನ ಪ್ರಭುವಿನ ಕಡೆಗೆ ತಲುಪುವ ದಾರಿಯನ್ನು ಅನುಸರಿಸಲಿ.

ಪವಿತ್ರ ಖುರ್‌ಆನಿನ ಇನ್ನೊಂದು ವಚನ ಹೀಗಿದೆ: "ವ ಖುಲಿಲ್ ಹಖ್ಖು ಮಿರ್ರಬ್ಬಿಕುಮ್. ಫಮನ್ ಶಾಅ ಫಲ್‌ಯೂಮಿನ್ ವ ಮನ್ ಶಾಅ ಫಲ್‌ಯಕ್‌ಫುರ್." (ಅಲ್ ಕಹ್‌ಫ್:30) ಅಂದರೆ, ಈ ಸತ್ಯ (ಖುರ್‌ಆನ್) ನಿಮ್ಮ ಪ್ರಭುವಿನಿಂದ ಬಂದುದಾಗಿದೆ. ಯಾರು ಇಚ್ಛಿಸುತ್ತಾನೋ ಅವನು ನಂಬಲಿ. ಯಾರು ಇಚ್ಛಿಸುತ್ತಾನೋ ಅವನು ನಿರಾಕರಿಸಲಿ.

ಬೇರೆ ಹಲವು ವಚನಗಳಿವೆ. ಇಸ್ಲಾಮ್ ಪರಿಪೂರ್ಣ ಧಾರ್ಮಿಕ ಸ್ವಾತಂತ್ರ್ಯ ನೀಡುತ್ತದೆ ಎಂದು ಈ ವಚನಗಳೆಲ್ಲಾ ಸ್ಪಷ್ಟಪಡಿಸುತ್ತವೆ.

ಇಸ್ಲಾಮಿನ ಪಾಠಗಳು ಕೇವಲ ತಾತ್ವಿಕ ಸ್ವರೂಪದ್ದಲ್ಲ. ಅವುಗಳನ್ನು ಪ್ರತಿಯೊಂದು ಕಾಲದಲ್ಲಿಯೂ ಕೃತಿಗಿಳಿಸಲಾಯಿತು. ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಮತ್ತು ಅವರ ಶಿಷ್ಯರ ಸುವರ್ಣ ಕಾಲದಲ್ಲಿ ಮತ್ತು ಅನಂತರ ಇಸ್ಲಾಮಿ ಚರಿತ್ರೆಯ ಕಾಲಘಟ್ಟದಲ್ಲಿ ಮುಸ್ಲಿಮೇತರರೊಂದಿಗೆ ಸೌಹಾರ್ದ ಮತ್ತು ಅವರಿಗೆ ನೀಡಿದ ಧಾರ್ಮಿಕ ಸ್ವಾತಂತ್ರ್ಯದ ಕುರಿತು ಅನೇಕಾನೇಕ ಉದಾಹರಣೆಗಳು ಸಿಗುತ್ತವೆ. ಮದೀನಕ್ಕೆ ವಲಸೆ ಹೋದ ನಂತರ ಹಝ್ರತ್ ಮುಹಮ್ಮದ್ ಪೈಗಂಬರರು(ಸ) ಯಹೂದಿಯರೊಂದಿಗೆ ಮಾಡಿದ ಒಡಂಬಡಿಕೆಯ ಅಸ್ತಿಭಾರವು ಧಾರ್ಮಿಕ ಸೌಹಾರ್ದವಾಗಿತ್ತು. ಅವರು ಅನೇಕ ಬುಡಕಟ್ಟು ಗುಂಪುಗಳೊಂದಿಗೆ ಒಡಂಬಡಿಕೆ ಮಾಡಿದ್ದರು ಮತ್ತು ಶರ್ತಗಳನ್ನು ಬಹಳ ಚೆನ್ನಾಗಿ ಈಡೇರಿಸಿದ್ದರು.

ಧಾರ್ಮಿಕ ಸೌಹಾರ್ದಕ್ಕೆ ಸಂಬಂಧಿಸಿ ಮಹತ್ತರವಾದ ಒಂದು ಉದಾಹರಣೆ ಯಮನ್‌ನಿಂದ ಆಗಮಿಸಿದ ಕ್ರೈಸ್ತಮತೀಯರ ಪ್ರತಿನಿಧಿ ಸಂಘದೊಂದಿಗೆ ಹಝ್ರತ್ ಮುಹಮ್ಮದ್ ಪೈಗಂಬರರು(ಸ) ವರ್ತಿಸಿದ ರೀತಿಯಾಗಿದೆ. ಪ್ರತಿನಿಧಿಗಳು ಕೆಲವು ವಿಷಯಗಳ ಕುರಿತು ಚರ್ಚಿಸಲು ಮದೀನಕ್ಕೆ ಬಂದಿದ್ದರು. ಮಸ್‌ಜಿದ್‌ನಲ್ಲಿ ಅವರೊಂದಿಗೆ ಚರ್ಚೆ ಮುಂದುವರಿಯಿತು. ಚರ್ಚೆಯ ಮಧ್ಯದಲ್ಲಿ ಅವರು ಆರಾಧನೆ ಮಾಡಲು ಬಿಡುವನ್ನು ಕೋರಿದರು. ಅವರು ಬೇರೆ ಸ್ಥಳಕ್ಕೆ ಹೋಗಿ ಆರಾಧನೆ ಮಾಡಲು ಇಚ್ಛಿಸಿದರು. ಆಗ ಹಝ್ರತ್ ಪೈಗಂಬರ್(ಸ) ಹೇಳಿದರು: "ಇದು ಸಹ ದೇವ ಮಂದಿರವಾಗಿದೆ. ಆರಾಧನೆಗಾಗಿ ಇದನ್ನು ನಿರ್ಮಿಸಲಾಗಿದೆ. ಹೊರಗೆ ನೀವು ಹೋಗಬೇಕಾದ ಆವಶ್ಯಕತೆಯಿಲ್ಲ. ಇಲ್ಲಿ ಮಸ್‌ಜಿದ್‌ನ ಒಂದು ಮೂಲೆಯಲ್ಲಿ ನಿಮ್ಮ ರೀತಿಯಲ್ಲಿ ಆರಾಧನೆ ಮಾಡಿರಿ." ಹಾಗೆ ಅವರು ತಮ್ಮ ರೀತಿಯಲ್ಲಿ ಮಸ್‌ಜಿದ್‌ನೊಳಗೆ ಆರಾಧನೆ ಮಾಡಿದರು.

ಹಝ್ರತ್ ಪೈಗಂಬರರ(ಸ) ಕಾಲದ ನಂತರ ಖಲೀಫರ ಕಾಲದಲ್ಲಿ ಹಝ್ರತ್ ಅಬೂಬಕರ್(ರ) ಸೈನ್ಯವನ್ನು ಯಾವುದಾದರೂ ಉದ್ದೇಶಕ್ಕಾಗಿ ಕಳುಹಿಸುವಾಗ ಸೇನಾ ನಾಯಕರಿಗೆ ಹೀಗೆ ಹೇಳುತ್ತಿದ್ದರು: "ಮುಸ್ಲಿಮೇತರರ ಆರಾಧನಾಲಯಗಳ ಮತ್ತು ಅವರ ಧಾರ್ಮಿಕ ಹಿರಿಯರ ಗೌರವವನ್ನು ಲಕ್ಷ್ಯದಲ್ಲಿ ಇರಿಸಿರಿ." ಅನಂತರ ಹಝ್ರತ್ ಉಮರ್ ಫಾರೂಖ್(ರ) ಅವರ ಖಿಲಾಫತ್ ಕಾಲದಲ್ಲಿ ವ್ಯವಸ್ಥಿತವಾದ ಇಸ್ಲಾಮೀ ಸರಕಾರ ಸ್ಥಾಪಿತವಾಯಿತು. ಅವರು ಸಹ ಪ್ರವಾದಿವರ್ಯರ ಹೆಜ್ಜೆ ಗುರುತುಗಳನ್ನು ಅನುಸರಿಸಿ ನಡೆದು ಧಾರ್ಮಿಕ ಸೌಹಾರ್ದದ ಎಂತಹ ಉತ್ತಮ ಮಾದರಿಯನ್ನು ಬಹಿರಂಗಪಡಿಸಿದರೆಂದರೆ ಮುಸ್ಲಿಮೇತರ ಸಂಶೋಧಕರು ಸಹ ಅದನ್ನು ಮೆಚ್ಚುಗೆಯ ದೃಷ್ಟಿಯಲ್ಲಿ ಕಂಡಿದ್ದಾರೆ. ಅವರು ತಮ್ಮ ರಾಜ್ಯದಲ್ಲಿ ಎಲ್ಲಾ ವಿಧ ಧಾರ್ಮಿಕ ಸ್ವಾತಂತ್ರ್ಯ ನೀಡಿದ್ದರು. ಅನೇಕ ಮುಸ್ಲಿಮೇತರು ಮುಸ್ಲಿಮ್ ಸರಕಾರದ ಹುದ್ದೆಗಳನ್ನು ಹೊಂದಿದ್ದರು. ಅವರು ಎಲ್ಲಾ ವಿಧ ರಿಯಾಯತಿ ನೀಡಿದ್ದರು. ಅವರು ಕ್ರೈಸ್ತದ ಮತ್ತು ಯಹೂದಿಯರ ಕುರಿತು ಎಷ್ಟು ಕಾಳಜಿ ಹೊಂದಿದ್ದರು ಎಂದರೆ ಒಮ್ಮೆ ಕ್ರೈಸ್ತರ ಒಂದು ಪ್ರತಿನಿಧಿ ಸಂಘ ಅವರ ಬಳಿಗೆ ಬಂದಾಗ ಅವರು ಕಾತರದಿಂದ ಹೀಗೆ ಕೇಳಿದರು: "ನಿಮ್ಮ ಪ್ರದೇಶದಲ್ಲಿ ಮುಸ್ಲಿಮರು ಆಡಳಿತಗಾರರಾಗಿರುವ ಕಾರಣದಿಂದ ನಿಮಗೆ ಕಿರುಕುಳವನ್ನು ಕೊಡುವುದಿಲ್ಲವಷ್ಟೆ?" ಆಗ ಆ ಕ್ರೈಸ್ತರು ಬಹಳ ಸಂತೋಷದಿಂದ ಹೇಳಿದರು: "ಬಹಳ ಶಿಷ್ಟ ಸ್ವಭಾವ ಹೊರತು ನಾವು ಮುಸ್ಲಿಮರಲ್ಲಿ ಇನ್ನೇನನ್ನೂ ಕಾಣಲಿಲ್ಲ".

ಒಟ್ಟಾರೆ, ಧಾರ್ಮಿಕ ಸೌಹಾರ್ದದ ಅಪ್ರತಿಮ ಉದಾಹರಣೆಗಳ ಕುರಿತು ಸ್ವಕೀಯರು ಮಾತ್ರವಲ್ಲ ಪರಕೀಯರೂ ಬಹಳ ಮೆಚ್ಚುಗೆ ಸೂಚಿಸಿದ್ದಾರೆ.

ಧಾರ್ಮಿಕ ಸೌಹಾರ್ದದ ಈ ಮಾದರಿಗಳು ಇಸ್ಲಾಮಿನ ಪ್ರಥಮ ನಾಲ್ಕು ಖಲೀಫರ ಕಾಲಕ್ಕೆ ಮಾತ್ರ ಸೀಮಿತವಾಗಿರಲಿಲ್ಲ. ಇದು ಮುಂದಿನ ಕಾಲದಲ್ಲಿಯೂ ಮುಂದುವರಿಯಿತು. ಔರಂಗಝೇಬ್ ಚಕ್ರವರ್ತಿಯ ಕಾಲದಲ್ಲಿಯೂ ಧಾರ್ಮಿಕ ಸೌಹಾರ್ದದ ದೃಶ್ಯಗಳು ಕಂಡು ಬರುತ್ತವೆ.

ಲೋಕದಲ್ಲಿ ಇಂದು ಶಾಂತಿಯು ಸ್ಥಾಪಿಸಲ್ಪಡಬೇಕಾದರೆ ಪ್ರತಿಯೊಂದು ಧರ್ಮದ ಅನುಯಾಯಿಗಳು - ಮುಸ್ಲಿಮ್, ಹಿಂದೂ, ಸಿಖ್, ಕ್ರೈಸ್ತರೆಲ್ಲರೂ ಹದಿನಾಲ್ಕು ನೂರು ವರ್ಷಗಳ ಹಿಂದೆ ಇಸ್ಲಾಮ್ ಧರ್ಮ ಲೋಕದ ಮುಂದಿರಿಸಿದ ಸಮಾನತೆ ಮತ್ತು ಸೌಹಾರ್ದದ ತತ್ವಗಳನ್ನು ಅನುಸರಿಸಿ ನಡೆಯಬೇಕು.

ಇಸ್ಲಾಮ್ ಒಂದು ಜಾಗತಿಕ ಧರ್ಮವಾಗಿದೆ. ಅಲ್ಲಾಹನು ಹಝ್ರತ್ ಮುಹಮ್ಮದ್ ಪೈಗಂಬರನ್ನು(ಸ) ಸಕಲ ಜನರಿಗಾಗಿ ಕಳುಹಿಸಿದನು. ಅವರ ಸಂದೇಶ ಯಾವುದೇ ವಿಶಿಷ್ಟ ಜನಾಂಗ, ಕುಲ ಅಥವಾ ವರ್ಣದವರಿಗಾಗಿರಲಿಲ್ಲ. ಬ್ರಿಟನಿನ ವಿಖ್ಯಾತ ಲೇಖಕ ಜಾರ್ಜ್ ಬರ್ನಾರ್ಡ್ ಶಾ ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಕುರಿತು ಹೀಗೆ ಹೇಳಿದರು:

"He must be called the saviour of the humanity." ಅಂದರೆ, "ಅವರನ್ನು ಮನುಷ್ಯತ್ವದ ರಕ್ಷಕನೆಂದು ಕರೆಯಬೇಕು."

ಇಂದಿನ ನಾಗರಿಕ, ಸುಸಂಸ್ಕೃತ ಮತ್ತು ಅಭಿವೃದ್ಧಿ ಗಳಿಸಿದ ಲೋಕವು ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಅನುಗ್ರಹೀತ ಸ್ವಭಾವಗುಣಗಳನ್ನು ಮತ್ತು ಉತ್ತಮ ಜೀವಿತ ಮಾದರಿಯನ್ನು ಅವಲಂಬಿಸುವುದಾದರೆ ಲೋಕದ ಎಲ್ಲಾ ಸಮಸ್ಯೆಗಳು - ನಾಗರಿಕತೆ, ಸಾಮಾಜಿಕ, ರಾಜಕೀಯ ಮತ್ತು ಸರಕಾರ ಇವುಗಳಿಗೆ ಸಂಬಂಧಿಸಿದ ಎಲ್ಲಾ ಸಮಸ್ಯೆಗಳು ಪರಿಹರಿಸಲ್ಪಡುವುವು.

ಈ ಕಾಲಘಟ್ಟದಲ್ಲಿ ಶಾಂತಿಯನ್ನು ಸ್ಥಾಪಿಸಿ ಅದನ್ನು ಕಾಪಾಡಲು ಎಲ್ಲಾ ಮನುಷ್ಯರಿಗೆ ಕಡ್ಡಾಯವಾಗಿರುವ ಮತ್ತು ವಿಶಿಷ್ಟವಾಗಿ ಮುಸ್ಲಿಮರಿಗೆ ಕಡ್ಡಾಯವಾಗಿರುವ ಸಂಗತಿ ಏನೆಂದರೆ ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಉತ್ತಮವಾದ ಜೀವಿತದ ಮಾದರಿಯನ್ನು ಅನುಸರಿಸಿ ಅವರು ಸಮಾನತೆ, ನ್ಯಾಯ, ಉತ್ತಮ ವರ್ತನೆ, ಧಾರ್ಮಿಕ ಸೌಹಾರ್ದ ಮೊದಲಾದುವುಗಳ ಕುರಿತು ರೂಪಿಸಿದ ತತ್ವಗಳನ್ನು ಪಾಲಿಸಿ ನಡೆಯಬೇಕು. ಧಾರ್ಮಿಕ ಪಂಗಡಗಳ ಮಧ್ಯೆ ಇರುವ ದ್ವೇಷ ಮತ್ತು ಸಂಘರ್ಷವನ್ನು ದೂರೀಕರಿಸಲು ಸಹಾಯಕವಾದ ಪ್ರತೀಕ್ಷೆಯ ಕಿರಣ ಇದೊಂದೇ ಆಗಿದೆ. ಇದು ಲೋಕಕ್ಕೆ ಸಮಾಧಾನದ ವಾತಾವರಣವನ್ನು ಒದಗಿಸಬಲ್ಲುದು. ಇದರ ಹೊರತು ಬೇರೆ ಯಾವ ಮಾರ್ಗವೂ ಕಾಣಿಸುವುದಿಲ್ಲ.

ಖೇದಕರವಾದ ಸಂಗತಿ ಏನೆಂದರೆ ಕೆಲವು ಬೆರಳೆಣಿಕೆಯ ರಾಜಕೀಯ ಮತ್ತು ಧಾರ್ಮಿಕ ಧುರೀಣರು ಧರ್ಮವನ್ನು ತಮ್ಮ ಉದ್ದೇಶ ಲಕ್ಷ್ಯದ

ಉಪಕರಣವನ್ನಾಗಿ ಮಾಡಿಕೊಂಡು ತಪ್ಪು ತಪ್ಪಾದ ಮತ್ತು ವಿಕೃತವಾದ ಹೇಳಿಕೆಗಳನ್ನು ನೀಡುತ್ತಾರೆ ಮತ್ತು ಪತ್ರಿಕೆಗಳಲ್ಲಿ ಪ್ರಕಟಿಸಿ ಜನ ಸಾಮಾನ್ಯರಲ್ಲಿ ವಿರೋಧವನ್ನು ಪ್ರಚೋದಿಸುತ್ತಾರೆ ಹಾಗೂ ಆ ಮೂಲಕ ಅಶಾಂತಿ ಮತ್ತು ಗಲಭೆ ಗೊಂದಲಕ್ಕೆ ತಳಹದಿ ಹಾಕಲಾಗುತ್ತದೆ. ಹೃದಯಗಳಲ್ಲಿ ದ್ವೇಷಾಸೂಯೆಗಳ ಬೆಂಕಿ ಜ್ವಲಿಸುತ್ತದೆ. ಆಯಾಕಾಲದ ಸರಕಾರ ಅನಾವಶ್ಯಕವಾಗಿ ಆತಂಕಕ್ಕೆ ಗುರಿಯಾಗುತ್ತದೆ.

ನಮ್ಮ ಪ್ರಿಯ ದೇಶವಾದ ಭಾರತದ ಕೆಲವು ಮುಸ್ಲಿಮ್ ಮತ ಪಂಡಿತರು "ತಹಫ್ಫುಝೆ ಖತ್‌ಮೆ ನುಬುವ್ವತ್" (ಪ್ರವಾದಿತ್ವ ಸಮಾಪ್ತಿಯ ರಕ್ಷಣೆ) ಎಂಬ ಹೆಸರಿನಲ್ಲಿ ಪವಿತ್ರ ಖುರ್‌ಆನಿನ ಪಾಠಗಳಿಗೆ ವಿರುದ್ಧವಾಗಿ ಅಹ್ಮದೀ ಮುಸ್ಲಿಮರ ವಿರುದ್ಧ ವೃತ್ತ ಪತ್ರಿಕೆಗಳಲ್ಲಿ ಬೈಗಳಿಂದ ತುಂಬಿದ ಯಾವುದಾದರೊಂದು ಹೇಳಿಕೆ ಪ್ರಕಟಿಸಿ, "ನಾವು ಇಸ್ಲಾಮಿಗಾಗಿ ಸೇವೆ ಮಾಡಿದೆವು" ಎಂದು ಭಾವಿಸುತ್ತಾರೆ. ಹಝ್ರತ್ ಮುಹಮ್ಮದ್ ಪೈಗಂಬರರ[ಸ] ಸಮಾನತೆ ಮತ್ತು ಸಹೃದಯತೆಯ ಉಪದೇಶಗಳನ್ನು ಈ ಜನರು ಏಕೆ ಕಡೆಗಣಿಸುತ್ತಾರೆ. ಏನು, ಇಸ್ಲಾಮ್ ಯಾರ ಹೃದಯವನ್ನಾದರೂ ನೋಯಿಸುವ ಅನುಮತಿ ನೀಡುತ್ತದೆಯೋ? ನಮ್ಮ ನೆರೆಹೊರೆಯ ದೇಶವಾದ ಪಾಕಿಸ್ತಾನ ಇಸ್ಲಾಮೀ ದೇಶವೆಂದು ವಾದಿಸುತ್ತದೆ. ಅಲ್ಲಿನ ಗಲಭೆ ಗೊಂದಲಗಳು ಅಲ್ಲಿನ ಮತಪಂಡಿತರ ಹೇಳಿಕೆಗಳ ಕಾರಣದಿಂದ ನಡೆಯುತ್ತವೆ. ಅಲ್ಲಾಹನ ಭವನವೆಂದು ಕರೆಯಲ್ಪಡುವ ಮಸ್‌ಜಿದ್‌ಗಳು ಯುದ್ಧದ ಮೈದಾನಗಳಾಗಿವೆ. ನಮಾಝ್ ಮಾಡುತ್ತಿರುವಾಗ ಕೊಲ್ಲಲ್ಪಟ್ಟ ಜನರ ಶವಗಳಿಂದ ಮಸ್‌ಜಿದ್‌ಗಳು ತುಂಬಲ್ಪಡುತ್ತವೆ. ಪಾಕಿಸ್ತಾನಿ ಸೈನ್ಯ ಗಡಿಗಳ ರಕ್ಷಣೆಗಿಂತ ಹೆಚ್ಚಿನ ಸಮಯ ಆಂತರಿಕ ರಕ್ಷಣೆಗಾಗಿ ಮತ್ತು ಮಸ್‌ಜಿದ್‌ಗಳ ರಕ್ಷಣೆಗಾಗಿ ವಿನಿಯೋಗಿಸುತ್ತದೆ. ಜನಸಾಮಾನ್ಯರು ಯಾವಾಗಲೂ ಮುಗ್ಧರೂ ನಿರಪರಾಧಿಗಳೂ ಆಗಿರುತ್ತಾರೆ. ಇಸ್ಲಾಮೀ ಉಪದೇಶಗಳ ಪ್ರಕಾರ ವಿಗ್ರಹಗಳನ್ನು ಕೂಡ ನಿಂದಿಸಬಾರದು. ಇಸ್ಲಾಮ್ ಎಲ್ಲಾ ಧರ್ಮಗಳ ನಂಬಿಕೆಗಳನ್ನು, ಗುರುಗಳನ್ನು ಮತ್ತು ಗ್ರಂಥಗಳನ್ನು ಗೌರವಭಾವದಿಂದ ಕಾಣುತ್ತದೆ. ದೇವನಿಗಿಂತ ಈ ಮತಪಂಡಿತರಿಗೆ ಬೇರೆಯವರ ಧರ್ಮದ ಕುರಿತು ಚಿಂತೆ ಏಕೆಂದು ಅರ್ಥವಾಗುವುದಿಲ್ಲ. ಯಾವಾಗಲೂ ಸತ್ಯಕ್ಕೆ ಜಯ ಸಿಗುವುದು ಎಂಬುದು ದೇವನ ಎಂದೂ ಬದಲಾಗದ ನಿಯಮವಾಗಿದೆ. ಯಾರಿಗೆ ದೇವನ ಕುರಿತು ದೃಢ ನಂಬಿಕೆ ಇದೆಯೋ ಅವನು ಧರ್ಮದ ರಕ್ಷಣೆಯ ವಾದ ಮಾಡಲಾರನು. ಅವನು ತನ್ನ ಬಗ್ಗೆ ಚಿಂತಿಸಿ ಸಮುದಾಯದ ಶಾಂತಿ ಮತ್ತು ಸುರಕ್ಷೆಯ ಕುರಿತು ಪ್ರಾರ್ಥಿಸುತ್ತಾ ಇರುವನು. ಅವನು ಹಾನಿಕರವಾದ ಹೇಳಿಕೆಗಳನ್ನು ನೀಡಲಾರನು. ಇಂದಿನ ಕಾಲದಲ್ಲಿ ನಡೆಯುವ ಗಲಭೆ ಗೊಂದಲಗಳು ರಾಜಕೀಯ ಮತ್ತು ಧಾರ್ಮಿಕ ಧುರೀಣರ, ಜವಾಬ್ದಾರಿಯಿಲ್ಲದ ಕೊಳಕನ್ನು ಉಗುಳುವಂತಹ ಹೇಳಿಕೆಗಳ ಕಾರಣದಿಂದ ಉಂಟಾಗುತ್ತವೆ.

ಇಸ್ಲಾಮಿನ ಗಣ್ಯ ವಿದ್ವಾಂಸರು ಇಸ್ಲಾಮಿನ ಶಾಂತಿಭರಿತ ಉಪದೇಶಗಳನ್ನು ಅನುಸರಿಸಿ ತಮ್ಮ ಲೇಖನಿಗಳನ್ನೂ ನಾಲಿಗೆಗಳನ್ನೂ ಹಿಡಿತದಲ್ಲಿರಿಸಿದರೆ ಇನ್‌ಶಾ ಅಲ್ಲಾಹ್ (ಅಲ್ಲಾಹನು ಇಚ್ಛಿಸಿದರೆ) ಮುಸ್ಲಿಮರಲ್ಲಿ ಐಕ್ಯತೆ ಉಂಟಾಗುವುದು. ನಾವು ನಮ್ಮ ಕೆಲಸಗಳನ್ನು ಸರಿಪಡಿಸಲು ಯೋಚಿಸುವುದಾದರೆ ಸರ್ವಶಕ್ತನಾದ ದೇವನು ನಮಗೆ ಸಹಾಯ ಮಾಡುವನು. ಅವನು ಸರಿಯಾದ ಗಮ್ಯ ಸ್ಥಾನಕ್ಕೆ ನಮ್ಮನ್ನು ಕೊಂಡೊಯ್ಯುವನು. ಮತಪಂಡಿತರ ತೀರ್ಪುಗಳ ಎದುರು ಪ್ರಾರ್ಥನೆಗಳು ಪ್ರಭಾವ ತೋರಿಸುವುವು. ಮುಸ್ಲಿಮರಲ್ಲಿ ಐಕ್ಯತೆ ಉಂಟುಮಾಡಲು ದೇವ ಸನ್ನಿಧಿಯಲ್ಲಿ ಅಳುತ್ತಾ ಪ್ರಾರ್ಥಿಸುವ ಒಂದೇ ಮಾರ್ಗ ಉಳಿದಿದೆ. ಈ ಅಳುತ್ತಾ ಮಾಡುವ ಪ್ರಾರ್ಥನೆಯಿಂದ ಇಸ್ಲಾಮಿನ ಸರಿಯಾದ ಉಪದೇಶಗಳು ನಮಗೆ ಮನವರಿಕೆಯಾಗುವುದು. ಎಲ್ಲಾ ಧರ್ಮಗಳ ನಾಯಕರೊಂದಿಗೆ ನಾವು ಸುಂದರ ಸೌಹಾರ್ದದ ಸಂಬಂಧ ಹೊಂದುವೆವು. ಲೋಕಕ್ಕೆ ಇಸ್ಲಾಮೀ ಸಮತ್ವ ಮತ್ತು ಧಾರ್ಮಿಕ ಸೌಹಾರ್ದದ ಪಾಠವು ತಿಳಿಯುವುದು. ಆಗ ಲೋಕದ ಎಲ್ಲಾ ಜನಾಂಗದವರು ಹಝ್ರತ್ ಮುಹಮ್ಮದ್ ಪೈಗಂಬರರಿಗೆ[ಸ] ದೇವನ ಆಶೀರ್ವಾದ ಬೇಡುವರು ಮತ್ತು ಅವರಿಗಾಗಿ ಶಾಂತಿಯನ್ನು ಕೋರುವರು. ಅಲ್ಲಾಹನು ಹಾಗೆಯೇ ಈಡೇರಿಸಿ ಕೊಡಲಿ, ಆಮೀನ್.

"ಇನ್ಸಾನಿಯತ್ ಝಿಂದಾಬಾದ್."

"ಮಾನವೀಯತೆ ಚಿರಕಾಲ ಬಾಳಲಿ."

- ಹಝ್ರತ್ ಖಲೀಫತುಲ್ ಮಸೀಹ್ III

ಖಿಲಾಫತ್ ವ್ಯವಸ್ಥೆ ಚಿರಕಾಲ ಬಾಳಲಿ

ವಸೀಯತ್ ವ್ಯವಸ್ಥೆ ಚಿರಕಾಲ ಬಾಳಲಿ.

"ಖಿಲಾಫತ್ ವ್ಯವಸ್ಥೆಗೂ ವಸೀಯತ್ ವ್ಯವಸ್ಥೆಗೂ ಬಹಳ ಗಾಢವಾದ ಸಂಬಂಧವಿದೆ."

- ಹಝ್ರತ್ ಖಲೀಫತುಲ್ ಮಸೀಹ್ V

"ವಸೀಯತ್ ವ್ಯವಸ್ಥೆಯಲ್ಲಿ ಸೇರಿದವರು ಎಲ್ಲೆಲ್ಲ ಭಯಭಕ್ತಿಯಲ್ಲಿ ಪ್ರಗತಿ ಹೊಂದುತ್ತಾರೋ ಅಲ್ಲೆಲ್ಲ ಜಮಾಅತ್ ಬಲಗೊಳ್ಳಲು ಕಾರಣವಾಗುತ್ತದೆ."

- ಹಝ್ರತ್ ಖಲೀಫತುಲ್ ಮಸೀಹ್ V

# ಇಸ್ಲಾಮ್ ಧರ್ಮದಲ್ಲಿ ವಿವಾಹ ವಿಚ್ಛೇದನ ನಿಯಮ

✠ ಮೌಲಾನ ಬಿ. ಅಬ್ದುಲ್ಲಾಹ್ H.A.

ಇಂದು ಮುಸ್ಲಿಮರು ಇಸ್ಲಾಮೀ ಉಪದೇಶಗಳೆಂದು ಅನುಸರಿಸುತ್ತಿರುವ ಸಂಪ್ರದಾಯಗಳೂ ಆಚಾರಗಳೂ ಯಥಾರ್ಥದಲ್ಲಿ ಇಸ್ಲಾಮಿಕವೆಂದಾಗಲಿ, ಸರಕಾರವು ಮುಸ್ಲಿಂ ನಿಯಮಗಳೆಂದು ಅಂಗೀಕರಿಸಿದುವೆಲ್ಲ ಇಸ್ಲಾಮಿನ ಅಧ್ಯಾಪನಗಳ ಸಾರವೆಂದಾಗಲಿ ಭಾವಿಸುವುದು ಸರಿಯಲ್ಲ. ವಿವಾಹ ವಿಚ್ಛೇದನ, ವಾರೀಸು ಹಕ್ಕು ಮುಂತಾದ ಹಲವು ವಿಚಾರಗಳಲ್ಲಿ ವಿಭಿನ್ನವಾದ ಹಲವು ಕಟ್ಟಳೆಗಳನ್ನು ವಿವಿಧ ಮುಸ್ಲಿಂ ಪಂಗಡಗಳು ಅಂಗೀಕರಿಸಿವೆ. ಆ ನಿಯಮಗಳೆಲ್ಲ ಇಸ್ಲಾಮಿಕವಾಗಲಾರವೆಂಬುದು ಸುಸ್ಪಷ್ಟ. ಈ ಬಗ್ಗೆ ವಿವರಿಸಿ ಲೇಖನವನ್ನು ದೀರ್ಘ ಮಾಡಲು ನಾನಿಲ್ಲಿ ಬಯಸುವುದಿಲ್ಲ.

ಪ್ರತಿಯೊಂದು ಧರ್ಮದ ಅನುಯಾಯಿಗಳು ಕಾಲಾಂತರದಲ್ಲಿ ವಿಭಿನ್ನ ಅಭಿಪ್ರಾಯ ಹೊಂದಿದ ಪಂಗಡಗಳಾಗಿ ಬೇರ್ಪಟ್ಟು, ಧರ್ಮದ ನಿರ್ದೇಶಗಳಿಗೆ ಅವರು ಹಲವಿಧ ವ್ಯಾಖ್ಯಾನಗಳನ್ನು ನೀಡಿ, ಕೊನೆಗೆ ಅವರು ಅದರ ನಿಜವಾದ ಅಧ್ಯಾಪನಗಳಿಂದ ಅಗಲಿ ಹೋಗುವುದು ಸ್ವಾಭಾವಿಕವೂ ಧಾರ್ಮಿಕ ಚರಿತ್ರೆಯಿಂದ ಮನದಟ್ಟಾಗುವ ಸತ್ಯ ವಿಚಾರವೂ ಆಗಿದೆ. ಈ ಪರಿವರ್ತನ ಸ್ವಭಾವಕ್ಕೆ ಮುಸ್ಲಿಮರು ಸಹ ಹೊರತಲ್ಲ. ಆದ್ದರಿಂದ, ಅವರ ಇಂದಿನ ಆಚಾರಾನುಷ್ಠಾನಗಳೆಲ್ಲ ಇಸ್ಲಾಮಿಕವೆಂದು ತಿಳಿದುಕೊಳ್ಳುವುದು ಸರಿಯಾಗಲಾರದು. ಆದರೆ ಇಸ್ಲಾಮಿಕ ನಿಯಮದ ಮೂಲಾಧಾರವಾದ ಪವಿತ್ರ ಖುರ್‌ಆನ್, ಒಂದೇ ಒದು ಕಾಗುಣಿತವಾಗಲಿ ವ್ಯತ್ಯಾಸವಾಗದ ರೀತಿಯಲ್ಲಿ ಸುರಕ್ಷಿತವಾಗಿರುವುದೆಂದೂ ಮುಹಮ್ಮದ್ ಪೈಗಂಬರರ (ಸಲ್ಲಲ್ಲಾಹು ಅಲೈಹಿ ವಸಲ್ಲಂ) ಉಪದೇಶಗಳೂ ನಿರ್ದೇಶಗಳೂ ವಿಶ್ವಾಸ ಯೋಗ್ಯವೂ ಪ್ರಬಲವೂ ಆದ ರೀತಿಯಲ್ಲಿ ದಾಖಲಿಸಲ್ಪಟ್ಟಿವೆ ಎಂಬುದೂ ಇಸ್ಲಾಂ ಧರ್ಮದ ಒಂದು ವೈಶಿಷ್ಟ್ಯವಾಗಿದೆ. ಆದುದರಿಂದ, ನಿಜವಾದ ಇಸ್ಲಾಮೀ ನಿಯಮ ನಿರ್ದೇಶನಗಳೇನೆಂದೂ ಮುಸ್ಲಿಮರು ಇಂದು ಆಚರಿಸಿಕೊಂಡು ಬರುತ್ತಿರುವ ಸಂಪ್ರದಾಯಗಳಲ್ಲೂ ಮುಸ್ಲಿಂ ನಿಯಮಗಳೆಂದು ಸರಕಾರ ಅಂಗೀಕರಿಸಿರುವ ನಿಯಮಗಳಲ್ಲೂ ಇಸ್ಲಾಮಿಕವಲ್ಲದ ಅಂಶಗಳು ಯಾವುದೆಂದೂ ಅನ್ವೇಷಣ ಬುದ್ಧಿಯುಳ್ಳವರಿಗೆ ಸುಲಭದಲ್ಲಿ ಮನಗಾಣಲು ಸಾಧ್ಯವಾಗಬಹುದು.

ಪ್ರಕೃತ, ನಾವು ಪ್ರಥಮವಾಗಿ ಚಿಂತಿಸಬೇಕಾದುದೇನೆಂದರೆ, ವಿವಾಹ ವಿಚ್ಛೇದನ ಯಾವ ರೀತಿಯಲ್ಲಾದರೂ ಸಮರ್ಥನೀಯವೇ ಎಂದು. ಈ ವಿಷಯದ ಬಗ್ಗೆ ವಿಸ್ತರಿಸಿ ಹೇಳುವ ಬದಲು ಬಹಳ ಚುಟುಕಾಗಿ ಹೇಳಬಹುದು. ವಿವಾಹ ವಿಚ್ಛೇದನ ಯಾವ ವಿಧದಲ್ಲೂ ಸಮರ್ಥನೀಯವಲ್ಲವೆಂದು ಉಪದೇಶಿಸುವ ಧರ್ಮಗಳಲ್ಲಿ ಇಸ್ಲಾಂ ಸೇರುವುದಿಲ್ಲ. ಪತಿ-ಪತ್ನಿಯರು ಸಾಧ್ಯವಾದಷ್ಟು ದಾಂಪತ್ಯ ಸಂಬಂಧವನ್ನು ಮುಂದುವರಿಸಿಕೊಂಡು ಹೋಗಬೇಕೆಂದೂ ಆ ಸಂಬಂಧ ಮುರಿಯದಂತೆ ಇಬ್ಬರೂ ಜಾಗ್ರತೆ ವಹಿಸಬೇಕೆಂದೂ ಇಸ್ಲಾಂ ಬಲವಾಗಿ ಉಪದೇಶಿಸುವುದಾದರೂ, ಇಬ್ಬರಿಗೂ ತಮ್ಮ ದಾಂಪತ್ಯ ಜೀವನವನ್ನು ಸುಗಮವಾಗಿ ಮುಂದುವರಿಸಿಕೊಂಡು ಹೋಗಲು ಅಸಾಧ್ಯವೆಂದು ಕಾಣವಾಗ ವಿವಾಹ ವಿಚ್ಛೇದ ಮಾಡಬಹುದೆಂದೂ ಅದು ಅನುಮತಿಯನ್ನೀಯುತ್ತದೆ. ಗಂಡ-ಹೆಂಡತಿ ಅನ್ಯೋನ್ಯ ಕಲಹವನ್ನುಂಟುಮಾಡಿ ದಾಂಪತ್ಯ ಸಂಬಂಧವನ್ನು ಶಿಥಿಲೀಕರಿಸಿ ಹೆಸರಿಗೆ ಮಾತ್ರ ದಂಪತಿಗಳಾಗಿ ಜೀವಿಸುವುದಕ್ಕಿಂತ ತಮ್ಮ ಜೀವಿತವನ್ನು ಮನುಷ್ಯ ಜೀವಿತವನ್ನಾಗಿ ಮಾಡಲು ಅವರು ಪರಸ್ಪರ ಬೇರ್ಪಡುವುದು ಗುಣಕರವೂ ಪ್ರಾಯೋಗಿಕವೂ ಆಗಿದೆಯೆಂಬುದು ಸುಗ್ರಾಹ್ಯ. ಕೆಲವೊಮ್ಮೆ ಪತಿಗಿರುವ ನಿವಾರಿಸಲಾಗದಂತಹ ಕೆಲವು ದೋಷಗಳ ಕಾರಣ ಪತ್ನಿಗೆ ಆತನೊಂದಿಗೆ ಜೀವನ ನಡೆಸುವುದು ದುಸ್ಸಾಧ್ಯ ಮತ್ತು ನರಕೀಯವಾಗಬಹುದು. ಇದೇ ಪ್ರಕಾರವೇ, ಪತ್ನಿಗಿರುವ ಹೋಗಲಾಡಿಸದಂತಹ ದೋಷಗಳ ಕಾರಣದಿಂದ ಪತಿಗೆ ಅವಳನ್ನು ತನ್ನ ಸಹಧರ್ಮಿಣಿಯಂತೆ ನಡೆಸಿಕೊಂಡು ಹೋಗುವುದು ದುಸ್ತರವೂ ದುಃಖದಾಯಕವೂ ಆಗಬಹುದು. ಹೀಗಿರುವ ಸಂದರ್ಭದಲ್ಲಿ ಸಹ ವಿವಾಹ ವಿಚ್ಛೇದನ ಮಾಡದೆ ದಂಪತಿಗಳು ನರಕ ಜೀವನವನ್ನು ಮುಂದುವರಿಸಿಕೊಂಡು ಹೋಗಬೇಕೆಂದು ಇಸ್ಲಾಂ ವಿಧಿಸುವುದಿಲ್ಲ. ಇಂತಹ ಅನಿವಾರ್ಯ ಘಟ್ಟದಲ್ಲಿ ವಿವಾಹ ವಿಚ್ಛೇದನಕ್ಕೆ ಇಸ್ಲಾಂ ಅನುಮತಿ ನೀಡಿರುವುದು ಅತ್ಯಂತ ವಿವೇಕ ಪೂರ್ಣವೆಂದು, ಚಿಂತಿಸುವವರಿಗೆ ಸುಲಭದಲ್ಲಿ ಮನವರಿಕೆಯಾಗಬಹುದು. ದಾಂಪತ್ಯ ಜೀವಿತದಲ್ಲಿ ಕೆಲವೊಮ್ಮೆ ಇಂತಹ ವೈಷಮ್ಯಗಳು ಎದುರಾಗುವುದರಿಂದ, ಅವುಗಳಿಗೆ ಪರಿಹಾರ ಮಾರ್ಗ ಇಲ್ಲದಿರುವ ಪಕ್ಷದಲ್ಲಿ ದಾಂಪತ್ಯ ಜೀವನ ಅತ್ಯಂತ ದುಃಖದಾಯಕ ಆಗಬಹುದಾದರಿಂದಾಗಿಯೇ, ಅನಿವಾರ್ಯ ಘಟ್ಟದಲ್ಲಿ ವಿವಾಹ ವಿಚ್ಛೇದ ಸಮ್ಮತನೀಯವೆಂದು ಇಸ್ಲಾಂ ಬೋಧಿಸಿದೆ.

ಸಂಕ್ಷಿಪ್ತವಾಗಿ, ವೈವಾಹಿಕ ಸಂಬಂಧದ ಕುರಿತು ಇಸ್ಲಾಂ ಹೇಳುವುದೇನೆಂದರೆ, ಆ ಸಂಬಂಧವನ್ನು ಮುಂದುವರಿಸಿಕೊಂಡು ಹೋಗಲು ನಿರ್ವಾಹವಿಲ್ಲದಿರುವಾಗ ಬೇರ್ಪಡಿಸಲು ಸಾಧ್ಯವಾಗುವ ಒಂದು ಕರಾರು (Contract) ಎಂದಾಗಿದೆ. ಈ ನಿರ್ದೇಶ ಅತ್ಯಂತ ಪ್ರಾಯೋಗಿಕವೂ ಅನುಷ್ಠಾನ ಯೋಗ್ಯವೂ ಆಗಿದೆಯೆಂಬುದಕ್ಕೆ ಲೋಕಾನುಭವ ಸಾಕ್ಷ್ಯವಹಿಸುತ್ತದೆ. ವಿವಾಹ ಸಂಬಂಧ ಒಂದು ಒಪ್ಪಂದ ಅಲ್ಲ, ಅವಿಚ್ಛಿನ್ನವಾದ ಒಂದು ಮತಸಂಸ್ಕಾರ ಅಥವಾ 'ಸಾಕ್ರಮೆಂಟ್' (Sacrament) ಎಂದು ನಂಬುವ ಹಲವು ಮತಸ್ಥರು ಸಹ ವಿವಾಹ

ವಿಚ್ಛೇದ ಆವಶ್ಯಕವೆಂದು ಒಪ್ಪಿಕೊಂಡು ನಿಯಮ ನಿರ್ಮಾಣ ಮೂಲಕ ಅದನ್ನು ರೂಢಿಗೊಳಿಸಲು ಶ್ರಮಿಸುತ್ತಾರೆ. ಕ್ರೈಸ್ತ ಧರ್ಮ ತತ್ವ ಪ್ರಕಾರ ವಿವಾಹವು ಅವಿಚ್ಛೇದ್ಯವಾದ ಒಂದು ಧರ್ಮ ಸಂಸ್ಕಾರವಾಗಿದೆ. ಆದರೆ ಇಂದು ಯುರೋಪು ಮತ್ತು ಅಮೇರಿಕ ಕಾನೂನು ಮೂಲಕ ವಿವಾಹ ವಿಚ್ಛೇದನವನ್ನು ನಿಯಮಬದ್ಧಗೊಳಿಸಿ ಜ್ಯಾರಿಗೆ ತಂದಿದೆ. ಹಿಂದೂಗಳಿಗೆ ಸಹ ಶಾಸ್ತ್ರೋಕ್ತವಾದ ವಿವಾಹ, ಪರಿಚ್ಛೇದನಗೊಳಿಸಲಾರದಂತಹ ಒಂದು ಸಂಬಂಧವಾಗಿದೆ. ಆದರೆ ಇಂದು ಅವರು ವಿವಾಹ ವಿಚ್ಛೇದನವನ್ನು ನಿಯಮಬದ್ಧಗೊಳಿಸಲು ಕಾನೂನಿನ ಮೊರೆಹೊಗುತ್ತಾರೆ. ಸ್ವಾಮಿ ದಯಾನಂದ ಸರಸ್ವತಿ ವಿವಾಹ ವಿಚ್ಛೇದನ ವೇದ ಪ್ರಕಾರ ನಿಷಿದ್ಧವೆಂದು ಬೋಧಿಸಿದ್ದರೂ ಅವರ ಅನುಯಾಯಿಗಳಾದ ಆರ್ಯ ಸಮಾಜಿಗಳು ಕಾನೂನು ಮೂಲಕ ವಿವಾಹ ವಿಚ್ಛೇದನವನ್ನು ಪಡೆಯಲು ಪ್ರಯತ್ನಿಸುತ್ತಾರೆ. ಹೀಗಿರುವ ಪರಿಶ್ರಮಗಳಿಗೆಲ್ಲ ಕಾರಣ, ಕೆಲವು ಬಾರಿ ದಾಂಪತ್ಯ ಜೀವನವನ್ನು ಮುಂದುವರಿಸಿಕೊಂಡು ಹೋಗುವುದು ಅಸಾಧ್ಯವಾಗುವುದರಿಂದ, ಆ ಸಂಬಂಧದಿಂದ ದಂಪತಿಗಳು ವಿಮುಕ್ತರಾಗದ ಪಕ್ಷದಲ್ಲಿ ಅವರು ದುಃಖ-ದುರಂತಗಳಿಗೂ ಕಷ್ಟ-ನಷ್ಟಗಳಿಗೂ ಈಡಾಗುತ್ತಾರೆಂಬ ಅನುಭವವೇ ಆಗಿದೆ.

ಪತಿ-ಪತ್ನಿಗೆ ಸರಸ-ಸಾಮರಸ್ಯದ ದಾಂಪತ್ಯ ಜೀವನವನ್ನು ಮುಂದುವರಿಸಿಕೊಂಡು ಹೋಗಲು ದುಸ್ಸಹವಾದ ಘಟ್ಟದಲ್ಲಿ ವಿವಾಹ ವಿಚ್ಛೇದ ಮಾಡಿಕೊಳ್ಳಬಹುದೆಂದು ಒಂದು ಕಡೆಯಲ್ಲಿ ಇಸ್ಲಾಂ ಒಪ್ಪುವುದಾದರೆ, ಇನ್ನೊಂದು ಕಡೆಯಲ್ಲಿ, ದಂಪತಿಗಳು ಮರಣದ ವರೆಗೆ ಪರಸ್ಪರ ಪ್ರೀತಿಯಿಂದ ವರ್ತಿಸಿ ತಮ್ಮ ಸಂಬಂಧವನ್ನು ನಿರ್ಬಾಧೆಯಿಂದ ಮುಂದುವರಿಸಿಕೊಂಡು ಹೋಗಲು ಶ್ರಮಿಸಿಬೇಕೆಂದು ಬಹಳ ಬಲವಾಗಿ ಉಪದೇಶಿಸುತ್ತದೆ. ದಾಂಪತ್ಯ ಜೀವಿತವನ್ನು ಸರಸದಿಂದ ನಡೆಸಿಕೊಂಡು ಹೋಗಲು ಅಸಾಧ್ಯವಾಗಿ ಪರಿಣಮಿಸುವ ಸಂದರ್ಭದಲ್ಲಿ ಕೂಡ ವಿವಾಹ ವಿಚ್ಛೇದನ ಮಾಡಬಾರದೆಂದು ಇಸ್ಲಾಂ ವಿಧಿಸುವ ಪಕ್ಷದಲ್ಲಿ, ಅದು ಇಸ್ಲಾಂ ಧರ್ಮದ ಪರಿಪೂರ್ಣತಾವಾದಕ್ಕೂ ಅದರ ಸಾರ್ವಲೌಕಿಕ ದೌತ್ಯಕ್ಕೂ ಕಳಂಕಕರವಾಗುವುದು. ಅದೇ ಪ್ರಕಾರವೇ, ಕ್ಷುಲ್ಲಕ ಕಾರಣಗಳಿಗೆ ಯಥೇಷ್ಟ ವಿವಾಹ ವಿಚ್ಛೇದ ಮಾಡಿಕೊಳ್ಳಲು ಇಸ್ಲಾಂ ಸಮ್ಮತಿ ನೀಡುವುದಾದರೆ ಅದು ಇಸ್ಲಾಮಿನ ಮಹನೀಯವೂ ಸುಗಮವೂ ಆದ ತತ್ವಗಳಿಗೆ ಹಾನಿಕರವಾಗುವುದು. ಕೆಲವು ಅನಿವಾರ್ಯ ಘಟ್ಟಗಳಲ್ಲಿ ವಿವಾಹ ವಿಚ್ಛೇದ ಮಾಡಬಹುದೆಂದು ಇಸ್ಲಾಂ ಒಪ್ಪುವುದಾದರೆ ಈ ಒಪ್ಪಿಗೆ ಪುರುಷರಿಗಿರುವಂತೆಯೇ ಸ್ತ್ರೀಯರಿಗೂ ಇದೆಯೆಂದು ಅದು ಬೋಧಿಸುತ್ತದೆ. ಈ ನಿಜಾಂಶವನ್ನು ಪವಿತ್ರ ಖುರ್‌ಆನಿನಿಂದಲೂ ಪ್ರವಾದಿ ವಚನಗಳಿಂದಲೂ ಮನಗಾಣಬಹುದು. ಆದರೆ ಗಂಡಂದಿರಿಗೆ ಹೆಚ್ಚಿನ ಅಧಿಕಾರವೂ ಸ್ವಾತಂತ್ರ್ಯವೂ ಇರುವುದರಿಂದ ಅವರೇ ಹೆಂಡಂದಿರಿಗಿಂತ ಹೆಚ್ಚಾಗಿ ವಿವಾಹ ಸಂಬಂಧವನ್ನು ಮುರಿಯಲು ಪ್ರೇರಿತರಾಗುತ್ತಾರೆ. ಆದ್ದರಿಂದಲೇ ಗಂಡಂದಿರಿಗೆ ದಾಂಪತ್ಯ ಸಂಬಂಧವನ್ನು ಸುಲಭದಲ್ಲಿ ವಿಚ್ಛೇದಿಸಲು ಸಾಧ್ಯವಾಗದಂತೆ ಹಲವು ಪ್ರತಿಬಂಧಕಗಳನ್ನು ಇಸ್ಲಾಂ ಧರ್ಮ ವಿಧಿಸಿದೆ.

**ಒಂದನೆಯದಾಗಿ,** ಪತ್ನಿಯೊಂದಿಗೆ ಸ್ನೇಹದಿಂದಲೂ ಉದಾರ ಭಾವದಿಂದಲೂ ವರ್ತಿಸಲಿಕ್ಕೆ ಇಸ್ಲಾಂ ಆಜ್ಞಾಪಿಸುತ್ತದೆ. ಪವಿತ್ರ ಖುರ್‌ಆನ್ ಹೀಗೆ ಹೇಳುತ್ತದೆ :

ಸ್ತ್ರೀಯರ ಮೇಲೆ ಪುರುಷರಿಗೆ ಹಕ್ಕುಗಳಿರುವಂತೆಯೇ ನ್ಯಾಯೋಚಿತವಾಗಿ ಸ್ತ್ರೀಯರಿಗೂ ಪುರುಷರ ಮೇಲೆ ಹಕ್ಕುಗಳಿವೆ.
(2:229)

"ನೀವು ಮಡದಿಯರನ್ನು ಒಳ್ಳೆಯ ರೀತಿಯಲ್ಲಿ ಇರಿಸಿಕೊಳ್ಳಿರಿ; ಅಥವಾ ನ್ಯಾಯೋಚಿತವಾಗಿ ಬಿಡುಗಡೆ ಮಾಡಿರಿ; ಅತಿಕ್ರಮದಿಂದ ವರ್ತಿಸಲಿಕ್ಕಾಗಿ ತಪ್ಪಾದ ರೀತಿಯಲ್ಲಿ ಅವರನ್ನು ನಿಮ್ಮೊಂದಿಗೆ ಇರಿಸಿಕೊಳ್ಳಬೇಡಿರಿ. ಹಾಗೆ ಮಾಡುವವನು ತನಗೇ ಕೇಡನ್ನುಂಟು ಮಾಡುತ್ತಾನೆ. ಅಲ್ಲಾಹನ ಆಜ್ಞೆಗಳನ್ನು ನೀವು ಪರಿಹಾಸ್ಯಕ್ಕೆ ಈಡು ಮಾಡಬೇಡಿರಿ." (2:232)

"ನೀವು ಪತ್ನಿಯರೊಡನೆ ಒಳ್ಳೆಯ ರೀತಿಯಲ್ಲೂ ಔದಾರ್ಯ ದಿಂದಲೂ ವರ್ತಿಸಿರಿ; ನೀವು ಅವರನ್ನು ಇಷ್ಟಪಡುವುದಿಲ್ಲವಾದರೆ, (ನೆನಪಿಡಿರಿ) ಅಲ್ಲಾಹನು ಧಾರಾಳ ಒಳಿತನ್ನು ಇಟ್ಟಿರುವ ಒಂದು ವಸ್ತುವನ್ನು ನೀವು ಮೆಚ್ಚುವುದಿಲ್ಲವೆಂದಾಗಲೂಬಹುದು." (4:20)

ಈ ಮೇಲಿನ ಖುರ್‌ಆನ್ ವಾಕ್ಯಗಳಿಂದ ತಿಳಿದು ಬರುವುದೇನೆಂದರೆ, ಹೆಂಡಂದಿರೊಡನೆ ಗಂಡಂದಿರು ಔದಾರ್ಯದಿಂದ ವರ್ತಿಸಬೇಕೆಂದೂ ಅವರ ಹಕ್ಕುಗಳನ್ನು ಅವರಿಗೆ ನೀಡಬೇಕೆಂದೂ ಅವರನ್ನು ಪರಿತ್ಯಜಿಸುವುದಾದರೆ ನ್ಯಾಯವಾದ ರೀತಿಯಲ್ಲಿ ಹಾಗೆ ಮಾಡಬೇಕೆಂದೂ ಅವರನ್ನು ಪೀಡಿಸಲಿಕ್ಕೂ ಕಾಡಿಸಲಿಕ್ಕೂ ಬೇಕಾಗಿ ಮಾತ್ರ ಹೆಸರಿಗೆ ಹೆಂಡಂದಿರಾಗಿ ಇರಿಸಿಕೊಳ್ಳಬಾರದೆಂದೂ, ಯಾವ ಕಾರಣದಿಂದಾದರೂ ಅವರ ಮೇಲೆ ವಿರಕ್ತಿಭಾವ ಉಂಟಾದರೆ ಅವರನ್ನು ತಕ್ಷಣ ಬಿಟ್ಟುಬಿಡದೆ ಸಾಧ್ಯವಾದಷ್ಟು ಅವರೊಡನೆ ಸಹಕರಿಸಿ ವರ್ತಿಸಬೇಕೆಂದೂ, ಹೀಗೆ ಮಾಡುವುದು ದೇವಾನುಗ್ರಹಕ್ಕೆ ಹೇತುವಾಗುವುದೆಂದೂ ಆಗಿದೆ. ಪವಿತ್ರ ಖುರ್‌ಆನ್ ಹೀಗೆ ಹಲವೆಡೆಗಳಲ್ಲಿ ಉಪದೇಶಿಸಿದೆ. ಮಾತ್ರವಲ್ಲ, ಪ್ರವಾದಿ ಮುಹಮ್ಮದ್(ಸಲ್ಲಲ್ಲಾಹು ಅಲೈಹಿ ವಸಲ್ಲಂ) ಸಹ ಈ ವಿಷಯದಲ್ಲಿ ಬಲವಾಗಿ ಉಪದೇಶಿಸಿದ್ದಾರೆ. ಮುಹಮ್ಮದ್ ಪೈಗಂಬರ್(ಸ) ಹೀಗೆ ನುಡಿದಿದ್ದಾರೆ:

"ಸ್ತ್ರೀಯರೊಡನೆ ಒಳ್ಳೆಯ ರೀತಿಯಲ್ಲಿ ವರ್ತಿಸಬೇಕೆಂಬ ಉಪದೇಶವನ್ನು ನೀವು ಸ್ವೀಕರಿಸಿರಿ." (ಬುಖಾರಿ)

"ನಿಮ್ಮ ಪೈಕಿ ತನ್ನ ಪತ್ನಿಯೊಂದಿಗೆ ಒಳ್ಳೆಯ ರೀತಿಯಲ್ಲಿ ವರ್ತಿಸುವವನೇ ನಿಮ್ಮಲ್ಲಿ ಉತ್ತಮನು." (ತಿರ್ಮಿದಿ)

ಮುಹಮ್ಮದ್ ಪೈಗಂಬರರು(ಸ) ಹೀಗೆ ಅನೇಕ ಸಂದರ್ಭಗಳಲ್ಲಿ ಉಪದೇಶಿಸಿದ್ದು ಮಾತ್ರವಲ್ಲ, ಮರಣಶಯ್ಯೆಯಲ್ಲಿರುವಾಗ ಸಹ, "ಸ್ತ್ರೀಯರೊಡನೆ ನೀವು ಒಳ್ಳೆಯ ರೀತಿಯಲ್ಲಿ ವರ್ತಿಸಬೇಕೆಂದು ನಾನಿದೋ

ನಿಮಗೆ ಉಪದೇಶಿಸುತ್ತೇನೆ" ಎಂದು ನುಡಿದರು. ಈ ಪ್ರಕಾರದ ವಚನಗಳಿಂದ ಪೈಗಂಬರರು ತನ್ನ ಅನುಯಾಯಿಗಳಿಗೆ, ಪತ್ನಿಯರಿಗೆ ಹಾನಿ ಉಂಟುಮಾಡಬಾರದೆಂದೂ ಕ್ಷುಲ್ಲಕ ವಿಷಯಗಳಿಗಾಗಿ ಅವರನ್ನು ತ್ಯಜಿಸಬಾರದೆಂದೂ ಉಪದೇಶಿಸಿದ್ದಾರೆ. ಮಾತ್ರವಲ್ಲ, ಪತ್ನಿ ಪತಿಗೆ ಅವಿಧೇಯತೆ ತೋರಿಸಿದರೆ ಅಥವಾ ಇಬ್ಬರಿಗೂ ಪರಸ್ಪರ ಸರಸ ಸಹವಾಸ ಮಾಡಲು ಸಾಧ್ಯವಿಲ್ಲವೆಂದು ಕಂಡುಬರುವುದಾದರೆ ಕೂಡ ತಕ್ಷಣ ಪತಿಯು ಪತ್ನಿಯನ್ನು ಬಿಟ್ಟುಬಿಡಬಾರದೆಂದೂ ಅವರ ಮಧ್ಯೆ ಸರಸ ಮತ್ತು ಸಾಮರಸ್ಯ ಉಂಟುಮಾಡಲು ಎರಡು ಕಡೆಗಳಿಂದಲೂ ಮಧ್ಯಸ್ಥರನ್ನು ನೇಮಿಸಿ ಯುಕ್ತವಾಗಿ ವರ್ತಿಸಬೇಕೆಂದೂ ಪವಿತ್ರ ಖುರ್‌ಆನ್ ಬೋಧಿಸುತ್ತದೆ. (4:35,36)

ಮುಹಮ್ಮದ್ ಪೈಗಂಬರರು(ಸ) ವಿವಾಹ ವಿಚ್ಛೇದದ ಕುರಿತು ಹೀಗೆ ಹೇಳಿದ್ದಾರೆ: "ವಿವಾಹ ವಿಚ್ಛೇದ ಮಾಡಬಹುದಾದರೂ ಅದು ಅಲ್ಲಾಹನಿಗೆ ಅತ್ಯಂತ ಅಪ್ರಿಯವಾದುದು." (ಅಬೂ ದಾವೂದ್)

ಹೀಗೆ ಗಂಡಂದಿರು ಹೆಂಡಂದಿರೊಡನೆ ಒಳ್ಳೆಯ ರೀತಿಯಲ್ಲಿ ವರ್ತಿಸಬೇಕೆಂದೂ ಸಾಧ್ಯವಾದಷ್ಟರ ಮಟ್ಟಿಗೆ ದಾಂಪತ್ಯ ಸಂಬಂಧವನ್ನು ಬೇರ್ಪಡಿಸದಿರಬೇಕೆಂದೂ ಇರುವ ಇಸ್ಲಾಮಿನ ಉಪದೇಶ ಯಥೇಷ್ಟ ವಿವಾಹ ವಿಚ್ಛೇದನ ಮಾಡದಿರಲಿಕ್ಕಾಗಿ ಪ್ರಧಾನವಾದ ತಡೆಯಾಗಿದೆ.

**ಎರಡನೆಯದಾಗಿ,** ದಾಂಪತ್ಯ ಸಂಬಂಧವನ್ನು ಸುಲಭದಲ್ಲಿ ಮುರಿಯದಿರಲು ಇಸ್ಲಾಂ ಏರ್ಪಡಿಸಿದ ಮತ್ತೊಂದು ತಡೆಯೇನೆಂದರೆ, ಪತಿಯು ಪತ್ನಿಗೆ 'ಮಹರ್' ಎಂಬ ವಿವಾಹಧನ ನೀಡಬೇಕಾದುದು ಕಡ್ಡಾಯವೆಂದು ಮಾಡಿರುವ ನಿಯಮವಾಗಿದೆ. ಈ ಮೊತ್ತ ಇಷ್ಟೇ ಎಂದು ಇಸ್ಲಾಂ ನಿರ್ದಿಷ್ಟಪಡಿಸಲಿಲ್ಲವಾದರೂ ಪತಿ ತನ್ನ ಸ್ಥಾನಮಾನಕ್ಕನುಸಾರವಾಗಿ ತಕ್ಕುದಾದ ಒಂದು ಮೊತ್ತವನ್ನು ಪತ್ನಿಗೆ ನೀಡಬೇಕಾದುದು ಅವಶ್ಯವಾಗಿದೆ. ಈ ಮೊತ್ತವನ್ನು ಕೂಡಲೇ ಕೊಡಬೇಕೆಂಬ ನಿರ್ಬಂಧವಿಲ್ಲವಾದರೂ ಅದನ್ನು ಕೊಡದಿರಲಿಕ್ಕೆ ಪತಿಗೆ ನಿರ್ವಾಹವಿಲ್ಲ. ಪತ್ನಿಯಾದರೋ ಇಂತಹ ಯಾವ ಹಣವನ್ನಾಗಲಿ ಪತಿಗೆ ಕೊಡಲಿಕ್ಕೆ ಬಾಧ್ಯಳಲ್ಲ. ಆದ್ದರಿಂದ ಗಂಡ ಹೆಂಡತಿಯನ್ನು ತ್ಯಜಿಸುವುದಾದರೆ, ಆ ಮೊತ್ತ ಆತನಿಗೆ ನಷ್ಟವಾಗುತ್ತದೆ. ಹೀಗೆ, ಪತಿಯು ಪತ್ನಿಗೆ ವಿವಾಹಧನವಾಗಿ ಒಂದು ಮೊತ್ತವನ್ನು ಕೊಡಬೇಕೆಂದು ಇಸ್ಲಾಂ ವಿಧಿಸಿರುವುದರ ಒಂದು ಉದ್ದಿಶ್ಯವೇನೆಂದರೆ, ಪತಿ ಕ್ಷುಲ್ಲಕ ಸಂಗತಿಗೆ ಪತ್ನಿಯನ್ನು ತಲಾಖ್ ಹೇಳಿ ಬಿಟ್ಟುಬಿಡದಿರಲಿಕ್ಕೇ ಆಗಿದೆ. ಪವಿತ್ರ ಖುರ್‌ಆನ್ ಹೀಗೆ ಹೇಳುತ್ತದೆ:

"ಮಡದಿಯರಿಗೆ ಪಾರಿತೋಷಕವಾಗಿ ಅವರ ವಧು ದಕ್ಷಿಣೆಯನ್ನು ನೀಡಿರಿ." (4:5)

"ನೀವು ಓರ್ವ ಪತ್ನಿಯ ಸ್ಥಾನದಲ್ಲಿ ಇನ್ನೋರ್ವ ಪತ್ನಿಯನ್ನು ವರಿಸಲು ಬಯಸುವುದಾದರೆ,ಅವರಲ್ಲೊಬ್ಬಳಿಗೆ ನೀವು ಬಹಳ ಹೆಚ್ಚು ಸಂಪತ್ತನ್ನು ಕೊಟ್ಟಿದ್ದರೂ ಅದರಿಂದ ಏನನ್ನೂ ನೀವು ವಾಪಾಸು ಪಡೆಯಬಾರದು." (4:21)

"ಅವರಿಗಾಗಿ ನಿಗದಿಪಡಿಸಲಾದ ಪ್ರತಿಫಲವನ್ನು ನೀವು ಅವರಿಗೆ ನೀಡಿರಿ." (4:25)

ಈ ವಾಕ್ಯಗಳಿಂದೆಲ್ಲ ಸ್ಪಷ್ಟವಾಗುವುದೇನೆಂದರೆ, ಗಂಡ ಹೆಂಡತಿಗೆ ತನ್ನ ಸ್ಥಾನಮಾನ ಮತ್ತು ಸಾಮರ್ಥ್ಯವನ್ನನುಸರಿಸಿ ವಿವಾಹ ಧನವಾಗಿ ಒಂದು ಮೊತ್ತವನ್ನು ಕೊಡಬೇಕೆಂದೂ ಹೆಂಡತಿಯನ್ನು ತ್ಯಜಿಸಬೇಕಾದ ಘಟ್ಟದಲ್ಲಿ ಆ ಮೊತ್ತ ಎಷ್ಟು ಹೆಚ್ಚಾಗಿದ್ದರೂ ವಾಪಾಸು ತೆಗೆದುಕೊಳ್ಳಬಾರದೆಂದೂ ಆಗಿದೆ. ಮುಹಮ್ಮದ್ ಪೈಗಂಬರರು(ಸ) ಈ ಬಗ್ಗೆ ಹೀಗೆ ಹೇಳಿದ್ದರು: "ನೀವು ಸ್ತ್ರೀಯನ್ನು ಯಾವ ನಿಬಂಧನೆಯಂತೆ ಪತ್ನಿಯಾಗಿ ವರಿಸುತ್ತೀರೋ,ಅದುವೇ ನೀವು ನಿರ್ವಹಿಸಬೇಕಾದ ನಿಬಂಧನೆಗಳ ಪೈಕಿ ಅತಿ ಪ್ರಧಾನವಾದುದು." (ಬುಖಾರಿ)

ಗಂಡ ಹೆಂಡತಿಗೆ ವಧುದಕ್ಷಿಣೆಯಾಗಿ ತಕ್ಕುದಾದ ಒಂದು ಮೊತ್ತವನ್ನು ನೀಡಬೇಕೆಂಬ ಇಸ್ಲಾಮಿನ ಈ ಆಜ್ಞೆ, ಅವನಿಗೆ ಇಚ್ಛಾನುಸಾರ ಪತ್ನಿಯನ್ನು ಬಿಟ್ಟು ಬಿಡುವುದಕ್ಕೆ ಒಂದು ಪ್ರತಿಬಂಧಕವಾಗಿದೆ. ನಿಜವಾಗಿ, ವಿವಾಹ ಧನವೆಂಬುದು ಗಂಡ ಹೆಂಡತಿಗೆ ಕಡ್ಡಾಯವಾಗಿ ಕೊಡಬೇಕಾದ ವಧುದಕ್ಷಿಣೆಯಾಗಿದೆ. ಆದರೆ ನಿರ್ಭಾಗ್ಯವಶಾತ್ ಇಂದು ಹಲವೆಡೆಗಳಲ್ಲಿ ಇಸ್ಲಾಮಿನ ಈ ನಿರ್ದೇಶನಕ್ಕೆ ತೀರಾ ವಿರುದ್ಧವಾಗಿ ಗಂಡ ಹೆಂಡತಿಯಿಂದ ವರದಕ್ಷಿಣೆ ಪಡೆಯುತ್ತಾನೆ. ಇಸ್ಲಾಮಿಕವಲ್ಲದ ಈ ಸಂಪ್ರದಾಯ ಅಭಿಮಾನಕ್ಕೂ ನೀತಿಗೂ ಅನುಯೋಜ್ಯವಲ್ಲದ್ದೂ ಸಮುದಾಯದಲ್ಲಿ ಸ್ತ್ರೀಗಿರುವ ಸ್ಥಾನವನ್ನು ಅಧಃಪತನಗೊಳಿಸುವಂಥದ್ದೂ ಅನೇಕ ಯುವತಿಯರು ಗಂಡುಗಳು ಸಿಗದೆ ಕಷ್ಟಪಡುವುದಕ್ಕೆ ಕಾರಣೀಭೂತವೂ ಆಗಿದೆ. ಸ್ತ್ರೀಯಿಂದ ತುಂಬಾ ಧನವನ್ನು ಕಸಿದುಕೊಂಡು ಅವಳನ್ನು ಪತ್ನಿಯಾಗಿ ವರಿಸುವುದು ಖಂಡಿತವಾಗಿಯೂ ಪೌರುಷಕ್ಕೂ ನೀತಿಗೂ ವಿರುದ್ಧವಾದುದು. ದುರದೃಷ್ಟವಶಾತ್ ಇಂದು ಮುಸ್ಲಿಮರು ಇಸ್ಲಾಮಿನ ವಿಧಿಯನುಸಾರ ಸ್ತ್ರೀಗೆ ಕೊಡಬೇಕಾದ ವಧು ದಕ್ಷಿಣೆಯನ್ನು ಕೇವಲ ಒಂದು ವಿನೋದವೆಂದು ಬಗೆದು ಸ್ತ್ರೀಯಿಂದ ದೊಡ್ಡದಾದೊಂದು ಮೊತ್ತವನ್ನು ಕಸಿದುಕೊಂಡು ಅದನ್ನು ವರದಕ್ಷಿಣೆಯೆಂದು ಕರೆಯುತ್ತಾರೆ. ಇಂದು ಮುಸ್ಲಿಮರಲ್ಲಿ ಕಂಡುಬರುವ ಈ ಸಂಪ್ರದಾಯವನ್ನು ಇಸ್ಲಾಮಿಕವೆಂದು ಯಾರಾದರೂ ತಿಳಿಯುವವರಾದರೆ ಅದು ತಪ್ಪೆಂದು ಹೇಳದೆ ಗತ್ಯಂತರವಿಲ್ಲ.

**ಮೂರನೆಯದಾಗಿ,** ಪತಿ-ಪತ್ನಿಯರು ವಿವಾಹ ಸಂಬಂಧದಿಂದ ಬೇರ್ಪಡದೆ ಸರಸದಲ್ಲಿ ಜೀವನ ನಡೆಸಲು ಸಾಧ್ಯವಾಗುವಂತೆ ಇಸ್ಲಾಂ ನಿರ್ದೇಶಿಸಿರುವ ಮತ್ತೊಂದು ಉಪಾಯ, ಗಂಡ ಹೆಂಡತಿಗೆ ತಲಾಖ್ ಹೇಳಿ ವಿವಾಹ ವಿಚ್ಛೇದ ಮಾಡುವುದು ಅವಳು ಮುಟ್ಟಿನ ಕಾಲಾವಧಿ ಕಳೆದು ಶುದ್ಧಿಯಾಗಿ, ಅನಂತರ ಅವಳೊಡನೆ ಸಂಭೋಗ ನಡೆಸದಿರುವ ಸಂದರ್ಭದಲ್ಲಿ ಮಾತ್ರವೇ ಸಾಧ್ಯ ಎಂಬುದಾಗಿದೆ. ಈ

ನಿಯಮವನ್ನುನುಸರಿಸಿ ಒಬ್ಬ ಮುಸ್ಲಿಂ ತನ್ನ ಪತ್ನಿಯ ವಿವಾಹ ವಿಚ್ಛೇದ ಮಾಡುವುದಾದರೆ, ಅದು ಅವಳು ಋತುಕಾಲ ಕಳೆದು ಶುದ್ಧಳಾಗಿ ಅವಳೊಡನೆ ರತಿಕ್ರೀಡೆ ಮಾಡದಿರುವ ಸ್ಥಿತಿಯಲ್ಲಿ ಆಗಬೇಕಾಗಿದೆ. ಪತ್ನಿ ರಜಸ್ವಲೆಯಾಗಿರುವ ಸಮಯದಲ್ಲಿ ಅಥವಾ ಮುಟ್ಟು ಕಳೆದು ಶುದ್ಧಳಾಗಿರುವ ಸಂದರ್ಭದಲ್ಲಿ ಅವಳೊಡನೆ ಸಂಸರ್ಗ ಮಾಡಿದ ಬಳಿಕ ಪತಿ ತಲಾಖ್ ಹೇಳುವುದಾದರೆ ಅದು ಸಿಂಧುವಾಗದು. ಈ ಬಗ್ಗೆ ಖುರ್‌ಆನ್ ಹೀಗೆ ಹೇಳುತ್ತದೆ: "ನೀವು ಮಡದಿಯರನ್ನು ಪರಿತ್ಯಜಿಸುವುದಾದರೆ ಅದಕ್ಕೆ ನಿರ್ಣಯಿಸಲಾದ ಕಾಲದಲ್ಲಿ ಅವರನ್ನು ಬಿಟ್ಟು ಬಿಡಿರಿ. ಆ ನಿಗದಿತ ಕಾಲವನ್ನು ನೀವು ಲೆಕ್ಕ ಹಾಕಿರಿ. ನಿಮ್ಮ ಪ್ರಭುವಾದ ಅಲ್ಲಾಹನ ಭಯ ನಿಮಗಿರಲಿ" (65:2)

ಈ ವಾಕ್ಯದಲ್ಲಿ ಹೇಳಲಾದ ನಿಗದಿತ ಕಾಲ ಯಾವುದೆಂದು ಮುಹಮ್ಮದ್ ಪೈಗಂಬರರು(ಸ) ಸ್ಪಷ್ಟಪಡಿಸಿದ್ದಾರೆ. ಹಝ್ರತ್ ಉಮರ್(ರಝಿಯಲ್ಲಾಹು ಅನ್‌ಹು) ಅವರ ಮಗ ಹಝ್ರತ್ ಅಬ್ದುಲ್ಲಾ(ರ) ತನ್ನ ಪತ್ನಿಯನ್ನು ಋತುಮತಿಯಾದ ಕಾಲದಲ್ಲಿ ತಲಾಖ್ ಹೇಳಿದುದಾಗಿ ಹಝ್ರತ್ ಉಮರ್ ಮೂಲಕ ತಿಳಿದಾಗ ಪೈಗಂಬರರು ಕೋಪಿಷ್ಠರಾಗಿ ಹೀಗೆ ನುಡಿದರು: "ಆತನು ಆಕೆಯನ್ನು ವಾಪಾಸು ಸ್ವೀಕರಿಸಿ ತನ್ನೊಂದಿಗೆ ಇರಿಸಿಕೊಳ್ಳಲಿ; ನಂತರ ಆಕೆ ಶುದ್ಧಳಾಗಿ, ಇನ್ನೊಮ್ಮೆ ಮುಟ್ಟಾಗಿ ಶುದ್ಧಳಾದ ಬಳಿಕ, ಆಕೆಯನ್ನು ತ್ಯಜಿಸಲು ಬಯಸುವುದಾದರೆ ಆಕೆಯೊಡನೆ ಸಂಭೋಗ ಮಾಡದ ಸ್ಥಿತಿಯಲ್ಲಿ ಆತನು ಆಕೆಗೆ ವಿಚ್ಛೇದನ ನೀಡಲಿ. ಅಲ್ಲಾಹನು ವಿಧಿಸಿದ ಪ್ರಕಾರ ತಲಾಖಿಗಿರುವ ನಿಶ್ಚಿತ ಕಾಲ ಇದಾಗಿದೆ." (ಬುಖಾರಿ)

ಅತ್ಯಂತ ವಿಶ್ವಾಸಯೋಗ್ಯವಾದ ಬುಖಾರಿ, ಮುಸ್ಲಿಂ ಎಂಬೀ ಹದೀಸು ಗ್ರಂಥಗಳಲ್ಲಿ ಉಲ್ಲೇಖಿಸಲ್ಪಟ್ಟ ಪ್ರವಾದಿ ವಚನಗಳಿಂದ ಸ್ಪಷ್ಟವಾಗುವುದೇನೆಂದರೆ, ಒಬ್ಬ ಮುಸ್ಲಿಮನಿಗೆ ತನ್ನ ಪತ್ನಿಯನ್ನು ಅವಳು ಋತುಮತಿಯಾಗಿರುವ ಕಾಲದಲ್ಲಾಗಲಿ, ಮುಟ್ಟು ಕಳೆದ ಶುದ್ಧ ಕಾಲದಲ್ಲಿ ಅವಳೊಂದಿಗೆ ಸಂಭೋಗ ನಡೆಸಿದ ಸ್ಥಿತಿಯಲ್ಲಾಗಲಿ, ತಲಾಖ್ ಹೇಳಿ ವಿಚ್ಛೇದಗೊಳಿಸಬಾರದೆಂದಾಗಿದೆ. ಪವಿತ್ರ ಖುರ್‌ಆನ್ ಹೇಳುತ್ತದೆ: "ತಲಾಖ್ ಪಡೆದ ಸ್ತ್ರೀಯರು ಮೂರು ಆರ್ತವಕಾಲ ಕಾಯಬೇಕಾಗಿದೆ" (2:229). ಈ ಖುರ್‌ಆನ್ ವಾಕ್ಯದಿಂದಲೂ ಸ್ತ್ರೀಯು ಮುಟ್ಟು ಕಳೆದು ಶುದ್ಧಳಾಗಿರುವ ಕಾಲದಲ್ಲೇ ವಿವಾಹ ವಿಚ್ಛೇದ ಮಾಡಬಹುದೆಂದು ತಿಳಿದು ಬರುತ್ತದೆ. ಹೀಗೆ ಸ್ತ್ರೀ ಮುಟ್ಟುಕಾಲ ಕಳೆದು ಶುಚಿಯಾದ ಕಾಲದಲ್ಲಿ ತಲಾಖ್ ಹೇಳಲಾಗುವುದಾದರೆ ಮಾತ್ರವೇ ಮೂರು ಋತುಕಾಲ ಕಳೆಯುವ ವರೆಗೆ ಅವಳು ಇನ್ನೊಬ್ಬ ಪತಿಯನ್ನು ವರಿಸಬಾರದೆಂಬ ಪ್ರಸ್ತುತ ಆಜ್ಞೆ ಅರ್ಥವತ್ತಾಗುತ್ತದೆ. ಒಟ್ಟಾರೆ, ಇಸ್ಲಾಮಿ ನಿಯಮವನ್ನನುಸರಿಸಿ, ಮೇಲೆ ವಿವರಿಸಿದ ವಿಧದಲ್ಲಿ ಹೊರತು, ಗಂಡ ಬಯಸುವ ಯಾವ ಸಮಯದಲ್ಲೂ ಹೆಂಡತಿಯೊಡನೆ, "ನಾನು ನಿನ್ನನ್ನು ಪರಿತ್ಯಜಿಸುತ್ತೇನೆ" ಎಂದು ಹೇಳುವುದರಿಂದ ಮಾತ್ರ ವಿವಾಹ ಸಂಬಂಧ ಬೇರ್ಪಡುವುದಿಲ್ಲ. ಹಾಗೆ ಒಮ್ಮೆ ಹೇಳುವುದರಿಂದಾಗುವ ಅಗಲುವಿಕೆ ಇಸ್ಲಾಂ ಧರ್ಮದಲ್ಲಿರುವ ವಿವಾಹ ವಿಚ್ಛೇದನ ನಿಯಮ ಪ್ರಕಾರ ಸಿಂಧುವೆನಿಸುವುದಿಲ್ಲ. ಇಸ್ಲಾಂ ಇಂತಹ ನಿಯಮ ಇರಿಸಿಕೊಂಡಿರುವುದು ದಾಂಪತ್ಯ ಸಂಬಂಧವನ್ನು ಸುಲಭದಲ್ಲಿ ಮುರಿದುಬಿಡಲು ಅಸಾಧ್ಯವಾಗುವಂತೆ ಸುದೃಢಗೊಳಿಸಲಿಕ್ಕಾಗಿದೆ. ಮುಟ್ಟುಕಾಲದಲ್ಲಿ ಪತ್ನಿಯನ್ನು ಭೋಗಿಸಲು ಅನುಕೂಲ ಪರಿಸ್ಥಿತಿ ಇಲ್ಲವಾದುದರಿಂದ ಚಪಲ ಹೃದಯಿಯಾದ ಗಂಡ ಕ್ಷುಲ್ಲಕ ಕಾರಣಕ್ಕಾಗಿ ಅವಳಿಗೆ ತಲಾಖ್ ಕೊಡಲು ಪ್ರೇರಿತನಾಗಬಹುದು. ಆದರೆ ಅವಳು ಮುಟ್ಟು ಕಳೆದು ಶುದ್ಧಳಾಗಿರುವ ಸಂದರ್ಭದಲ್ಲಿ ಅವಳೊಡನೆ ರತಿಕ್ರೀಡೆ ನಡೆಸಲು ಅವನು ಪ್ರೇರಿತನಾಗುವುದರಿಂದ ಆ ಘಟ್ಟದಲ್ಲಿ ಅವನ ಕ್ರೋಧ ಸ್ವಾಭಾವಿಕವಾಗಿಯೇ ಶಾಂತಗೊಂಡು ಅವನು ಅವಳನ್ನು ಪ್ರೀತಿಸಲಿಕ್ಕೆ ತೊಡಗುವುದು ಸಂಭವನೀಯ. ಹಾಗೆ ಅವರು ಪರಸ್ಪರ ಸರಸದಿಂದ ರತಿಕೇಳಿ ನಡೆಸಿದ ನಂತರ ಮತ್ತೂ ಯಾವುದೇ ಕಾರಣವಶಾತ್ ಪರಸ್ಪರ ಅಗಲುವರಾದರೆ, ಸಂಭೋಗ ಉಂಟಾದುದರಿಂದ ವಿವಾಹ ಸಂಬಂಧವನ್ನು ಕಡಿಯುವುದು ನಿಯಮಬದ್ಧವಾಗುವುದಿಲ್ಲ. ಅದಕ್ಕೆ ಅವರು ಮುಂದಿನ ಋತುಕಾಲ ಕಳೆಯುವ ವರೆಗೆ, ಅಥವಾ ಸ್ತ್ರೀ ಗರ್ಭ ಧರಿಸಿದ್ದಾಳೆಯೇ ಎಂದು ತಿಳಿಯುವ ವರೆಗೆ ಕಾದಿರಬೇಕಾಗಿದೆ. ಇಷ್ಟು ಕಾಲದ ನಿರೀಕ್ಷೆಯೊಳಗೆ ಅವನ ಕೋಪ ಸಾಕಷ್ಟು ಶಾಂತಗೊಳ್ಳಲಿಕ್ಕೂ ಅವಳನ್ನು ತೊರೆಯಬೇಕೆಂಬ ಭಾವನೆಯಿಂದ ಅವನು ಹಿಮ್ಮೆಟ್ಟಲಿಕ್ಕೂ, ಹಾಗೆ ಅವರೊಳಗೆ ಅನ್ಯೋನ್ಯ ಇನ್ನೊಮ್ಮೆ ಸರಸವುಂಟಾಗಲಿಕ್ಕೂ ಹೇತುವಾಗಬಹುದು. ಆದ್ದರಿಂದಲೇ, ಸ್ತ್ರೀ ರಜಸ್ವಲೆಯಾಗಿರುವ ಕಾಲದಲ್ಲಾಗಲಿ, ಶುದ್ಧಿಕಾಲದಲ್ಲಿ ಸಂಭೋಗ ನಡೆದ ಸ್ಥಿತಿಯಲ್ಲಾಗಲಿ ಅವಳಿಗೆ ತಲಾಖ್ ಕೊಡಬಾರದೆಂದು ಇಸ್ಲಾಂ ಆದೇಶಿಸುತ್ತದೆ. ಇದು ವಿವಾಹ ವಿಚ್ಛೇದನವನ್ನು ಸಾಕಷ್ಟು ತಡೆಯುವ ಒಂದು ಉಪಾಯವೇ ಆಗಿದೆ.

**ನಾಲ್ಕನೆಯದಾಗಿ,** ವಿವಾಹ ಸಂಬಂಧವನ್ನು ಯಥೇಷ್ಟ ಮುರಿಯದಿರಲಿಕ್ಕೆ ಇಸ್ಲಾಂ ನಿರ್ದೇಶಿಸಿರುವ ನಿಯಮವೇನೆಂದರೆ, ತಲಾಖ್ ಪಡೆದ ಸ್ತ್ರೀ ಮೂರು ತಿಂಗಳ ತನಕ ಇನ್ನೊಬ್ಬ ಗಂಡನನ್ನು ವರಿಸಬಾರದೆಂದಾಗಿದೆ. (ಪವಿತ್ರ ಖುರ್‌ಆನ್- 2:229). ಒಬ್ಬನು ಯಾವುದಾದರೂ ಕಾರಣದಿಂದ ತನ್ನ ಹೆಂಡತಿಗೆ ತಲಾಖ್ ಹೇಳುವುದಾದರೆ ಸಹ 'ಇದ್ದಃ' ಎಂದು ಕರೆಯಲಾಗುವ ಆ ನಿಗದಿತ ಕಾಲ- ಮೂರು ಮಾಸ- ಕಳೆಯುವುದಕ್ಕಿಂತ ಮೊದಲು. ಬೇಕಾದರೆ ಆತನು ಆಕೆಯನ್ನು ಪುನಃ ಸ್ವೀಕರಿಸಬಹುದು. ಆತನು ತಾತ್ಕಾಲಿಕವಾದ ಕೋಪಾವೇಶದಿಂದಾಗಲಿ ಯಾವುದಾದರೂ ಕ್ಷುಲ್ಲಕ ಕಾರಣವನ್ನು ಆಸ್ಪದ ಮಾಡಿಯಾಗಲಿ ಹೆಂಡತಿಗೆ ತಲಾಖ್ ಹೇಳುವುದಾದರೆ, ಆ ಮೂರು ಮುಟ್ಟು ಕಾಲ ಕಳೆಯುವುದರೊಳಗೆ ಆತನು ಶಾಂತಚಿತ್ತನಾಗಲಿಕ್ಕೂ ಮರುಚಿಂತನೆಯ ಫಲವಾಗಿ ಆತನ ಕೋಪ ಉಪಶಮನಗೊಳ್ಳಲಿಕ್ಕೂ, ಹಾಗೆ ಆತನು ಪತ್ನಿಯನ್ನು ವಾಪಾಸು ಸ್ವೀಕರಿಸಲಿಕ್ಕೆ ಪ್ರೇರಿತನಾಗಲಿಕ್ಕೂ,

ಅವಕಾಶವಿದೆಯಷ್ಟೇ. ಮೂರು ಋತುಘಟ್ಟ ಕಳೆದ ನಂತರ ಅವಳನ್ನು ಸ್ವೀಕರಿಸಲು ಆತನು ಇಚ್ಛಿಸುವನಾದರೆ, ಪುನರ್ವಿವಾಹ ಮೂಲಕ ಹಾಗೆ ಮಾಡಬಹುದಾಗಿದೆ. ಹೀಗೆ ಎರಡು ಸಲ ತಲಾಖ್ ಹೇಳಿದರೂ ಕಾಲಾವಧಿಯೊಳಗಾದರೆ ಹೊಸ ವಿವಾಹ ಕರ್ಮವಿಲ್ಲದೆಯೂ, ಕಾಲಾವಧಿಯ ಬಳಿಕವಾದರೆ ಹೊಸ ವಿವಾಹ ಕರ್ಮದ ಮೂಲಕವೂ ಆಕೆಯನ್ನೇ ಪುನಃ ಪತ್ನಿಯಾಗಿ ವರಿಸಬಹುದು. "ತಲಾಖ್ ಎರಡು ಸಲವಾಗಿದೆ; ನಂತರ ಒಂದೋ ನ್ಯಾಯೋಚಿತವಾಗಿ ಅವಳನ್ನು ಇರಿಸಿಕೊಳ್ಳಬೇಕು ಅಥವಾ ಒಳ್ಳೆಯ ರೀತಿಯಲ್ಲಿ ಬಿಡುಗಡೆಮಾಡಬೇಕು" (2:230) ಎಂಬ ಖುರ್‌ಆನ್ ವಾಕ್ಯದಿಂದ ಈ ವಿಚಾರ ಸ್ಪಷ್ಟವಾಗುತ್ತದೆ. "ನೀವು ಸ್ತ್ರೀಯರನ್ನು ತಲಾಖ್ ಹೇಳಿ ಪರಿತ್ಯಜಿಸಿ ಅವರ ಕಾಲಾವಧಿ ಕಳೆದರೆ, ನ್ಯಾಯೋಚಿತವಾಗಿ ಅನ್ಯೋನ್ಯ ಇಷ್ಟಪಡುವ ಪಕ್ಷದಲ್ಲಿ ಅವರು ಅವರ (ಮೊದಲ) ಗಂಡಂದಿರನ್ನೇ ಮದುವೆಯಾಗುವುದರಿಂದ (ಎಲೈ ಸ್ತ್ರೀಯರ ಬಂಧುಗಳೇ) ನೀವು ಅವರನ್ನು ತಡೆಯಬಾರದು" (2:233) ಎಂಬ ಖುರ್‌ಆನ್ ವಾಕ್ಯದಲ್ಲಿ ತಲಾಖ್ ಪಡೆದ ಸ್ತ್ರೀಯರು ಅವರ ಕಾಲಾವಧಿ ಕಳೆದರೆ ತಮ್ಮನ್ನು ತಲಾಖ್ ಹೇಳಿ ಅಗಲಿದ ಗಂಡಂದಿರನ್ನೇ ಮದುವೆ ಮಾಡಿಕೊಳ್ಳಬಹುದೆಂದು ಪ್ರಸ್ತಾವಿಸಲಾದುದು, ಒಂದು ಸಲವಾಗಲಿ ಎರಡು ಸಲವಾಗಲಿ ತಲಾಖ್ ಕೊಟ್ಟು, ಕಾಲಾವಧಿ ಪಡೆದ ಸ್ತ್ರೀಯರನ್ನು ಪುನಃ ವಿವಾಹ ಕರ್ಮ ಮೂಲಕ ಸ್ವೀಕರಿಸುವುದರ ಕುರಿತಾಗಿದೆ. ಪ್ರಸ್ತುತ ಖುರ್‌ಆನ್ ವಚನಕ್ಕೆ ಹಬ್ರುತ್ ಇಬ್ನು ಅಬ್ಬಾಸ್(ರ) ಹೇಳಿರುವ ವ್ಯಾಖ್ಯಾನ ಈ ರೀತಿಯಾಗಿದೆ: "ಮೂರನೆಯ ಬಾರಿ ಒಬ್ಬನು ತನ್ನ ಪತ್ನಿಗೆ ತಲಾಖ್ ಹೇಳಿದರೆ, ನಂತರ ಅವನಿಗೆ ಅವಳನ್ನು ಪುನಃ ಹೆಂಡತಿಯಾಗಿ ಸ್ವೀಕರಿಸಲಾಗದು. ಆದರೆ ಇನ್ನೊಬ್ಬನು ಅವಳನ್ನು ಮದುವೆಯಾಗಿ ಪತ್ನಿಯಾಗಿ ಸ್ವೀಕರಿಸಿದ ಬಳಿಕ ಅವನು ಇಸ್ಲಾಮೀ ನಿಯಮಾನುಸಾರ ಸ್ವಇಚ್ಛೆಯಿಂದ ಅವಳಿಗೆ ತಲಾಖ್ ಹೇಳಿ ಬೇರ್ಪಟ್ಟು ಅವಳ 'ಇದ್ದಃ' ಎಂಬ ಕಾಲಾವಧಿ ಕಳೆದರೆ ಮಾತ್ರ ಮೊದಲಿನ ಗಂಡನಿಗೆ ಬೇಕೆಂದಾದರೆ ಅವಳನ್ನು ವಿವಾಹ ಮಾಡಿಕೊಳ್ಳಬಹುದು." ಆದ್ದರಿಂದಲೇ, ಎರಡು ಸಲ ತಲಾಖ್ ಹೇಳಿದ ಬಳಿಕ ಗಂಡ ಅವಳನ್ನು ನ್ಯಾಯೋಚಿತವಾಗಿ ಪತ್ನಿಯಾಗಿ ಇರಿಸಿಕೊಳ್ಳಬೇಕು ಅಥವಾ ಒಳ್ಳೆಯ ರೀತಿಯಲ್ಲಿ ಅವಳನ್ನು ಬಿಡುಗಡೆ ಮಾಡಬೇಕೆಂದು ಹೇಳಿದುದನ್ನು ಮುಂದುವರಿಸಿ ಪವಿತ್ರ ಖುರ್‌ಆನ್ ಈ ರೀತಿ ಹೇಳಿರುತ್ತದೆ: " ನಂತರ (ಮೂರನೆಯ ಸಲ) ಅವನು ಅವಳ ತಲಾಖ್ ಹೇಳುವುದಾದರೆ, ಆ ನಂತರ ಅವಳು ಅವನಿಗೆ ಹೆಂಡತಿಯಾಗಲಾರಳು, ಅವಳು ಇನ್ನೊಬ್ಬ ಗಂಡನನ್ನು ವರಿಸಿದ ಬಳಿಕ ಹೊರತು" (2:231). ಹೀಗೆ ಒಮ್ಮೆ ತಲಾಖ್ ಹೇಳಿದ ನಂತರ ನಿರ್ದಿಷ್ಟ ಕಾಲಾವಧಿಯೊಳಗಾದರೆ ಪುನರ್ವಿವಾಹದ ವಿನಾ ಮತ್ತು ಕಾಲಾವಧಿ ಕಳೆದರೆ ಪುನರ್ವಿವಾಹ ಮೂಲಕ; ಅದೇ ಪ್ರಕಾರವೇ ಎರಡನೇ ಸಲ ತಲಾಖ್ ಹೇಳಿದರೂ ಕಾಲಾವಧಿಯೊಳಗೆ ವಿವಾಹ ಇಲ್ಲದೆಯೂ ಕಾಲಾವಧಿ ಕಳೆದರೆ ವಿವಾಹ ಮೂಲಕವೂ ಅವಳನ್ನು ಮತ್ತೊಮ್ಮೆ ಪತ್ನಿಯಾಗಿ ಸ್ವೀಕರಿಸಬಹುದೆಂದು ಇಸ್ಲಾಂ ನಿರ್ದೇಶಿಸಿರುವುದು ಪತಿ - ಪತ್ನಿಯರು ಸಾಧ್ಯವಿದ್ದಷ್ಟರ ಮಟ್ಟಿಗೆ ದಾಂಪತ್ಯ ಸಂಬಂಧವನ್ನು ಪಾಲಿಸಿಕೊಂಡುಹೋಗಲಿಕ್ಕೇ ಆಗಿದೆ. ಒಟ್ಟಾರೆ, ಇಸ್ಲಾಮಿನ ಈ ನಿಯಮ ವಿವಾಹ ಸಂಬಂಧವನ್ನು ಕೊನೆಗೊಳಿಸದಿರಕ್ಕಾಗಿ ಅದು ನಿರ್ದೇಶಿಸುವ ಒಂದು ಉಪಾಯವೆಂದೇ ಹೇಳಬಹುದು. ಗಂಡ-ಹೆಂಡಿರು ತಮ್ಮ ಈ ಸಂಬಂಧವನ್ನು ಬೇರ್ಪಡಿಸಿ ಇನ್ನೊಮ್ಮೆ ಅವರು ತಮ್ಮೊಳಗೆ ಒಂದುಗೂಡಲಿಕ್ಕೆ ಒಂದು ಸೀಮೆಯನ್ನು ನಿಶ್ಚಯಿಸದಿದ್ದ ಪಕ್ಷದಲ್ಲಿ ವಿವಾಹ ಸಂಬಂಧವು ಅರ್ಥರಹಿತವೂ ವಿವಾಹ ವಿಚ್ಛೇದನ ವಿನೋದವೂ ಆಗಿ ಮಾರ್ಪಡುವುವು. ಆದುದರಿಂದ, ಎರಡು ಸಲ ತಲಾಖ್ ಹೇಳಿ ಬಿಟ್ಟ ಹೆಂಡತಿಯನ್ನು ತಿರುಗಿ ಸ್ವೀಕರಿಸಬಹುದಾದರೂ, ಮೂರನೆಯ ಬಾರಿ ತಲಾಖ್ ಹೇಳಿದರೆ ನಂತರ ಅವಳನ್ನು ಆ ರೀತಿಯಲ್ಲಿ ತಿರುಗಿ ಪಡೆಯುವ ಹಕ್ಕು ಇಲ್ಲದಾಗುತ್ತದೆಂದು ಇಸ್ಲಾಂ ವಿಧಿಸಿರುತ್ತದೆ. ಆದ್ದರಿಂದಲೇ ಮೂರನೆಯ ಬಾರಿ ತಲಾಖ್ ಪಡೆದ ಸ್ತ್ರೀಯನ್ನು ಪುನಃ ವರಿಸುವುದರ ಕುರಿತು ಪ್ರಸ್ತುತ ಖುರ್‌ಆನ್ ವಚನದಲ್ಲಿ ಪ್ರಸ್ತಾಪಿಸಲ್ಪಟ್ಟಿದೆಯೆಂದು ಹೇಳಲಾಗುತ್ತದೆ.

**ಐದನೆಯದಾಗಿ,** ವಿವಾಹ ಸಂಬಂಧವನ್ನು ಕೊನೆಗೊಳಿಸದಿರಲಿಕ್ಕೆ ಇಸ್ಲಾಂ ನಿರ್ದೇಶಿಸಿರುವ ನಿಯಮವೇನೆಂದರೆ, ಒಬ್ಬನು ತನ್ನ ಪತ್ನಿಯನ್ನು ಒಂದೇ ಸಂದರ್ಭದಲ್ಲಿ ಮೂರು ಬಾರಿ ತಲಾಖ್ ಹೇಳಬಾರದೆಂದಾಗಿದೆ. ಗಂಡನು ಎಷ್ಟು ಅವಿವೇಕಿಯೂ ಕೋಪಿಷ್ಠನೂ ಆಗಿದ್ದರೂ ಅವನಿಗೆ ತನ್ನ ಹೆಂಡತಿಯನ್ನು ಕ್ಷುಲ್ಲಕ ಕಾರಣಕ್ಕಾಗಿ ಬೇರ್ಪಡಿಸಲು ಸಾಧ್ಯವಾಗದಿರಲಿಕ್ಕಾಗಿಯೇ ಒಮ್ಮಲೇ ಮೂರು ತಲಾಖ್ ಸಹ ಹೇಳಬಾರದೆಂದು ಇಸ್ಲಾಂ ವಿಧಿಸುತ್ತದೆ. ತಾತ್ಕಾಲಿಕವಾದ ಉದ್ವೇಗದಿಂದ ಒಬ್ಬನು ಪತ್ನಿಗೆ ತಲಾಖ್ ಹೇಳುವುದಾದರೆ ಕೂಡ ಅವನಿಗೆ ಒಂದು ಸಂದರ್ಭದಲ್ಲಿ ಒಮ್ಮೆ ಮಾತ್ರ ತಲಾಖ್ ಹೇಳಲು ಸಾಧ್ಯ. ಹಾಗೆ ಒಮ್ಮೆ ತಲಾಖ್ ಹೇಳಿದರೆ, ಅವನಿಗೆ ಕಾಲಾವಧಿಯೊಳಗೆ ಬೇರೆ ವಿವಾಹ ಕರ್ಮವಿಲ್ಲದೆಯೂ ಕಾಲಾವಧಿ ಕಳೆದರೆ ಹೊಸ ವಿವಾಹ ಕರ್ಮದ ಮೂಲಕವೂ ಅವಳನ್ನು ಪುನಃ ಪತ್ನಿಯಾಗಿ ಸ್ವೀಕರಿಸಬಹುದು. ಹೀಗೆ ಎರಡು ಸಲ ಆಗಬಹುದೆಂದು ಇಸ್ಲಾಂ ಒಪ್ಪುತ್ತದೆ. ಇಷ್ಟು ಅನುಕೂಲತೆ ಲಭಿಸಿಯೂ ಅವನು ಮೂರನೆಯ ಸಲ ಸಹ ಹೆಂಡತಿಗೆ ತಲಾಖ್ ಹೇಳಿ ಅಗಲುವುದಾದರೆ ಮಾತ್ರ ನಂತರ ಅವನಿಗೆ ಅವಳನ್ನು ಸ್ವೀಕರಿಸಲಿಕ್ಕೆ ಸಾಧ್ಯವಿಲ್ಲ. ಒಂದೇ ಸಂದರ್ಭದಲ್ಲಿ ಮೂರು ಸಲ ತಲಾಖ್ ಹೇಳುವುದು ಇಸ್ಲಾಮಿಕ ಅಧ್ಯಾಪನಗಳಿಗೆ ವಿರುದ್ಧ. ಈ ಸತ್ಯಾಂಶ, "ತಲಾಖ್ ಎರಡು ಸಲವಾಗಿದೆ. ನಂತರ ಒಂದೋ ಅವಳನ್ನು ನ್ಯಾಯೋಚಿತವಾಗಿ ಇರಿಸಿಕೊಳ್ಳಬೇಕು ಅಥವಾ ಔದಾರ್ಯಪೂರ್ವಕ ಬಿಟ್ಟುಬಿಡಬೇಕು" ಎಂಬ ಖುರ್‌ಆನ್ ವಾಕ್ಯದಿಂದ (2:230) ಸ್ಪಷ್ಟವಾಗಿಯೂ, ತಲಾಖ್ ಹೇಳಿದ ಬಳಿಕ ಕಾಲಾವಧಿ ಪಡೆದ ಸ್ತ್ರೀಯನ್ನು ಪುನಃ ವಿವಾಹವಾಗಬಹುದು (2:233) ಹಾಗೂ ಮೂರನೆಯ ತಲಾಖ್ ಹೇಳಿದ ಬಳಿಕ ಅವಳನ್ನು ವಿವಾಹವಾಗಬಾರದು (2:231) ಎಂಬ ಖುರ್‌ಆನ್ ವಚನಗಳಿಂದ ಸೂಚ್ಯವಾಗಿಯೂ ಗ್ರಾಹ್ಯವಾಗುತ್ತದೆ. ಒಂದೇ ಸಂದರ್ಭದಲ್ಲಿ ಮೂರು ತಲಾಖ್ ಹೇಳಬಾರದೆಂದು ಪ್ರವಾದಿ ಮುಹಮ್ಮದ್(ಸ) ಸಹ ಹೇಳಿದ್ದಾರೆ. ಒಂದು ಹದೀಸ್ ಈ ರೀತಿ ಇದೆ: "ಒಬ್ಬನು ತನ್ನ ಪತ್ನಿಗೆ ಒಂದೇ

ಸಂದರ್ಭದಲ್ಲಿ ಮೂರು ಸಲ ತಲಾಖ್ ಹೇಳಿದುದಾಗಿ ಮುಹಮ್ಮದ್ ಪೈಗಂಬರರು(ಸ) ಅರಿತಾಗ ಅವರು ಕೋಪದಿಂದ ಎದ್ದು ನಿಂತುಕೊಂಡು, 'ನಾನು ನಿಮ್ಮ ಮಧ್ಯೆ ಇರುವಾಗಲೇ ಮಹಾಮಹಿಮನಾದ ಅಲ್ಲಾಹನ ಗ್ರಂಥದೊಂದಿಗೆ ಆತನು ವಿನೋದವಾಡುವುದೇ?' ಎಂದು ನುಡಿದರು." (ನಸಾಈ). ಇದರಿಂದ ಒಮ್ಮೆಲೇ ಮೂರು ತಲಾಖ್ ಹೇಳುವುದನ್ನು ಮುಹಮ್ಮದ್ ಪೈಗಂಬರರು(ಸ) ವಿರೋಧಿಸಿರುವರು ಮಾತ್ರವಲ್ಲ, ಅದು ಅಲ್ಲಾಹನ ಗ್ರಂಥವಾದ ಪವಿತ್ರ ಖುರ್‌ಆನಿನ ಉಪದೇಶವನ್ನು ನಿರ್ಲಕ್ಷ್ಯ ಮಾಡಿ ಅದನ್ನು ಆಟಿಕೆಯಾಗಿ ಮಾಡುವ ಒಂದು ವರ್ತನೆ ಕೂಡ ಆಗಿದೆಯೆಂದು ಮನದಟ್ಟಾಗುತ್ತದೆ.

ಒಂದೇ ಸಂದರ್ಭದಲ್ಲಿ ಮೂರು ತಲಾಖ್ ಸಹ ಹೇಳಬಾರದೆಂದೂ, ಹೇಳಿದರೆ ಸಹ ಅದನ್ನು ಒಂದು ತಲಾಖ್ ಮಾತ್ರವೆಂದು ಗಣಿಸಲಾಗುವುದೆಂದೂ ಇಸ್ಲಾಂ ಕಲಿಸುತ್ತದೆ.

ಹದೀಸಿನ ಪಂಡಿತರಾದ ಕೆಲವರೂ ಇಮಾಮಿಯ್ಯ ಪಂಥದವರೂ ಅಹ್ಲುಬೈತಿಗೆ ಸೇರಿದ ಕೆಲವರೂ ಇಮಾಂ ಇಬ್ನು ಹಸ್ಮ್ ಮೊದಲಾದವರೂ, ಒಂದೇ ಕಾಲದಲ್ಲಿ ಒಮ್ಮೆಲೇ ಹೇಳಲ್ಪಡುವ ಮೂರು ತಲಾಖ್ ನಿಯಮ ವಿರುದ್ಧವಾದುದರಿಂದ ಒಂದು ತಲಾಖ್ ಸಹ ಆಗಲಾರದೆಂದು ಹೇಳಿದ್ದಾರೆ. ಹದೀಸಿನ ಪಂಡಿತರಲ್ಲಿ ಹೆಚ್ಚಿನವರೂ ಹಝ್ರತ್ ಮುಹಮ್ಮದಿಬ್ನು ಇಸ್‌ಹಾಖ್,ಅತ್ವಾ, ಇಕ್ರಿಮ ಮುಂತಾದ ತಾಬಿಯಿೂಗಳೂ, ಇಬ್ನು ತೀಮಿಯ್ಯ, ಇಬ್ನು ಖಯ್ಯಿಂ, ಮುಹಮ್ಮದಿಬ್ನು ಇಬ್ರಾಹೀಂ, ಶೌಕಾನಿ ಮೊದಲಾದ ಪಂಡಿತರೂ, ಒಂದೇ ಸಂದರ್ಭದಲ್ಲಿ ಹೇಳುವ ಮೂರು ತಲಾಖ್ ಒಂದು ತಲಾಖ್ ಎಂದೇ ಪರಿಗಣಿಸಲ್ಪಡುವುದೆಂದು ಹೇಳಿದ್ದಾರೆ. ಹಝ್ರತ್ ಇಬ್ನು ಅಬ್ಬಾಸ್‌ರವರ ಅಭಿಪ್ರಾಯ ಸಹ ಇದೇ ಪ್ರಕಾರವಾಗಿತ್ತೆಂದು ಒಂದು ಹೇಳಿಕೆಯಿಂದ ಮನವರಿಕೆಯಾಗುತ್ತದೆ. ಮಾತ್ರವಲ್ಲ, ಅವರು ನಿವೇದಿಸಿದ ಒಂದು ಹದೀಸಿನಲ್ಲಿ, ಒಂದೇ ಸಮಯದಲ್ಲಿ ಹೇಳುವ ಮೂರು ತಲಾಖ್ ಒಂದೆಂದು ಮಾತ್ರ ಎಣಿಸಲಾಗುವುದೆಂದು ಮುಹಮ್ಮದ್ ಪೈಗಂಬರರು(ಸ) ನುಡಿದಿದ್ದಾರೆಂದು ಪ್ರಸ್ತಾಪಿಸಲಾಗಿದೆ.

**ಆರನೆಯದಾಗಿ,** ಇಚ್ಛಾನುಸಾರ ವಿವಾಹ ವಿಚ್ಛೇದಗೊಳಿಸದಿರಲಿಕ್ಕೆ ಇಸ್ಲಾಂ ನಿರ್ದೇಶಿಸಿರುವ ಉಪಾಯ, ಮೂರು ಸಲ ತಲಾಖ್ ಹೇಳಿ ಪರಿತ್ಯಜಿಸಿದ ಪತ್ನಿಯನ್ನು ಪುನಃ ಮೊದಲ ಪತಿ ಸ್ವೀಕರಿಸಬಾರದೆಂಬ ನಿಯಮವಾಗಿದೆ. ಮತ್ತೆ ಅವಳು ಸ್ವೀಕರಿಸಲರ್ಹಳಾಗಬೇಕಾದರೆ, ಬೇರೊಬ್ಬನು ಅವಳನ್ನು ಮದುವೆಯಾಗಿ ಅವನು ಅವಳನ್ನು ಸ್ವಂತ ಇಚ್ಛೆಯಿಂದ ತಲಾಖ್ ಹೇಳಿ ಬಿಡುಗಡೆ ಮಾಡಬೇಕಾಗಿದೆ. ಅಂದರೆ, ಮೊದಲ ಗಂಡ ಅವಳನ್ನು ತನ್ನ ಸಹಧರ್ಮಿಣಿಯನ್ನಾಗಿ ಮಾಡಲು ಸ್ವಇಚ್ಛೆಯಿಂದ ಮದುವೆಯಾಗಿರುವ ಪ್ರಕಾರವೇ, ಅವರು ತಮ್ಮ ದಾಂಪತ್ಯಸಂಬಂಧ ಮುರಿದ ಬಳಿಕ, ಇನ್ನೊಬ್ಬನು ಅವಳನ್ನು ಎಂದೆಂದಿಗೂ ತನ್ನ ಸಹಧರ್ಮಿಣಿ ಮಾಡುವ ಉದ್ದೇಶದಿಂದ ಮದುವೆ ಮಾಡಿಕೊಂಡು, ಅನಂತರ ಇವರಿಗೆ ವಿವಾಹಸಂಬಂಧವನ್ನು ನಿರಾತಂಕವಾಗಿ ಮುಂದುವರಿಸಿಕೊಂಡು ಹೋಗಲು ನಿರ್ವಾಹವಿಲ್ಲದಾಗುವಾಗ ಈ ಎರಡನೆಯ ಗಂಡ ಸ್ವಇಚ್ಛೆಯಿಂದ ಅವಳನ್ನು ಪರಿತ್ಯಜಿಸಿದರೆ ಮಾತ್ರ ಮೊದಲ ಪತಿಗೆ ಬೇಕಾದರೆ ಅವಳನ್ನು ಮದುವೆಯಾಗಿ ತನ್ನ ಹೆಂಡತಿಯನ್ನಾಗಿ ಸ್ವೀಕರಿಸಬಹುದು. ಹೀಗೆ ಇಸ್ಲಾಂ ಒಂದು ನಿಯಮವನ್ನು ನಿರ್ದೇಶಿಸಿರುವುದು, ಗಂಡ ಹೆಂಡತಿಯನ್ನು ಸಾಧ್ಯವಾದಷ್ಟರ ಮಟ್ಟಿಗೆ ವಿವಾಹ ವಿಚ್ಛೇದನ ಮಾಡದಿರಲಿಕ್ಕೇ ಆಗಿದೆ. ಏಕೆಂದರೆ, ಎರಡನೆ ಪತಿ ಅವಳನ್ನು ಪರಿತ್ಯಜಿಸಿದ ನಂತರ ಮೊದಲ ಪತಿಗೆ ಪುನಃ ಅವಳನ್ನು ವಿವಾಹ ಮಾಡಿಕೊಳ್ಳಲು ಸಾಧ್ಯವಾಗುವ ಸಂದರ್ಭ ಬಹಳ ಅಪೂರ್ವವಾಗಿ ಮಾತ್ರ ಲಭಿಸಬಹುದು. ಆದ್ದರಿಂದ, ಮೂರು ತಲಾಖ್ ಸಹ ಹೇಳಿ ಬಿಟ್ಟರೆ, ನಂತರ ಪತ್ನಿಯನ್ನು ಪುನಃ ಸ್ವೀಕರಿಸಲಿಕ್ಕೆ ತನಗೆ ಅಸಾಧ್ಯವಾಗಬಹುದೆಂದು ಪತಿ ಅವಳಿಗೆ ಮೂರು ತಲಾಖ್ ಕೂಡ ಹೇಳಿ ಅಗಲುವುದರ ಬಗ್ಗೆ ಜಾಗ್ರತೆ ವಹಿಸುತ್ತಾನೆ.

ಒಟ್ಟಿನಲ್ಲಿ, ಪತಿ ಇಷ್ಟ ಬಂದಾಗ ತನ್ನ ಪತ್ನಿಯ ತಲಾಖ್ ಹೇಳುವುದರಿಂದ ಅವರ ವಿವಾಹ ಸಂಬಂಧ ಬೇರ್ಪಡುವುದೆಂದೂ ಒಂದೇ ಸಂದರ್ಭದಲ್ಲಿ ಹೇಳುವ ಮೂರು ತಲಾಖ್ ಮೂರಾಗಿಯೇ ಗಣಿಸಲಾಗುವುದೆಂದೂ ಮುಸ್ಲಿಮರು ಸರ್ವಸಾಮಾನ್ಯವಾಗಿ ಅಂಗೀಕರಿಸಿರುವರಾದರೂ ಅದು ಇಸ್ಲಾಮಿನ ಅಧ್ಯಾಪನಕ್ಕೆ ವಿರುದ್ಧವಾದುದರಿಂದ ಇಸ್ಲಾಮಿಕ ನಿಯಮವಾಗುವುದೇ ಇಲ್ಲ.

ಇಸ್ಲಾಮಿನ ಅಧ್ಯಾಪನ ಪ್ರಕಾರ ಯಾರಿಗೂ ತನ್ನ ಪತ್ನಿಯನ್ನು ಯಥೇಷ್ಟ ತಲಾಖ್ ಹೇಳಿ ಬಿಟ್ಟುಬಿಡಲಿಕ್ಕೆ ಆಗದೆಂದೂ ಯೋಗ್ಯ ಕಾರಣದಿಂದ, ಅದು ಸಹ ಕೆಲವು ಪ್ರತ್ಯೇಕ ನಿಬಂಧನೆಗಳಿಗೆ ಒಳಗಾದ ತರದಲ್ಲಿ ಮಾತ್ರವೇ ಹಾಗೆ ಮಾಡಬಹುದೆಂದೂ ಮೇಲಿನ ವಿವರಣೆಯಿಂದ ಸ್ಪಷ್ಟವಾಗುತ್ತದೆ. ಮಾತ್ರವಲ್ಲ, ಯಾರೂ ತಲಾಖ್ ಹೇಳುವುದು ಸ್ವಂತ ಇಷ್ಟಾನುಸಾರವೂ ಪ್ರಜ್ಞಾಸಹಿತವಾಗಿಯೂ ಆಗಿರಬೇಕೆಂದು ಸಹ ಅದರಿಂದ ಮನಗಾಣಬಹುದು. ಆದ್ದರಿಂದ, ಗಂಡ ಹೆಂಡತಿಯೊಡನೆ ನಾನು ನಿನ್ನ ವಿವಾಹಸಂಬಂಧವನ್ನು ಮುರಿದಿದ್ದೇನೆ ಎಂದು ಮೂರು ಬಾರಿ ಒಂದೇ ಸವನೆ ಹೇಳಿದರೆ ಅದರಿಂದ ಆ ದಾಂಪತ್ಯಸಂಬಂಧ ಬೇರ್ಪಡುವುದಿಲ್ಲ. ಹಾಗೆಯೇ ಒಬ್ಬನು ಮದ್ಯದ ಅಮಲಿನಲ್ಲಿ ಹೇಳಿದರೆ ಸಹ ಇಸ್ಲಾಮಿಕ ನಿಯಮ ಪ್ರಕಾರ ಅದು ಸಿಂಧುವಾಗುವುದಿಲ್ಲ. ಒಬ್ಬ ಮುಸ್ಲಿಂ ಮದ್ಯಪಾನ ಮಾಡುವುದು ಯಾವ ರೀತಿ ಇಸ್ಲಾಮಿಕವಲ್ಲವೋ ಅದೇ ರೀತಿ ಮದ್ಯದ ಗುಂಗಿನಲ್ಲಿ ಅವನು ತನ್ನ ಹೆಂಡತಿಗೆ ತಲಾಖ್ ನೀಡಿ ಅಗಲುವುದೂ ಇಸ್ಲಾಮಿಕವಲ್ಲ. ಒಟ್ಟಾರೆ, ಹಾಗೆ ಮತ್ತೇರಿದ ಸಂದರ್ಭದಲ್ಲಿ ಹೇಳುವ ತಲಾಖ್ ಸಿಂಧುವಾಗದು. ತಲಾಖ್ ಹೇಳುವುದು ದಾಂಪತ್ಯ ಜೀವನವನ್ನು ಮುಂದುವರಿಸಿಕೊಂಡು ಹೋಗಲು ನಿರ್ವಾಹವಿಲ್ಲದ ಹಂತದಲ್ಲಿ ಮಾತ್ರವಾಗಿರಬೇಕು ಹಾಗೂ ಮುಟ್ಟಾದ ಕಾಲದಲ್ಲಾಗಲಿ ಸಂಯೋಗ ಉಂಟಾದ ಶುದ್ಧಿ ಕಾಲದಲ್ಲಾಗಲಿ ತಲಾಖ್ ಹೇಳಬಾರದೆಂಬ ಇಸ್ಲಾಮಿನ ಉಪದೇಶದಿಂದಲೇ, ಮದ್ಯದ ಮತ್ತಿನಲ್ಲಿ ಹೇಳುವ ತಲಾಖ್ ಸಿಂಧುವಾಗದೆಂದು ಮನವರಿಕೆಯಾಗುತ್ತದೆ. ಏಕೆಂದರೆ ಮತ್ತೇರಿ ತಲೆಗೆ

ನಿಯಂತ್ರಣವಿಲ್ಲದ ಯಾವನಿಗಾದರೂ ಈ ನಿಬಂಧನೆಗಳನ್ನು ಪಾಲಿಸಲಿಕ್ಕೆ ಸಾಧ್ಯವಿಲ್ಲ. ಮಾತ್ರವಲ್ಲ, ಇಸ್ಲಾಂ ಧರ್ಮದ ಅಧ್ಯಾಪನ ಪ್ರಕಾರ, ಒಬ್ಬನು ಮಾಡಿದ ಕೆಲಸ ಅವನದೆಂದು ಗಣಿಸಲ್ಪಡಬೇಕಾದರೆ ಅದು ಅವನು ಸ್ವತಂತ್ರ ಬುದ್ಧಿಯಿಂದಲೂ ಯಾರ ಒತ್ತಾಯವಾಗಲಿ ಪ್ರೇರಣೆಯಾಗಲಿ ಇಲ್ಲದೆಯೂ ಮಾಡಿರಬೇಕಾಗಿದೆ. ಈ ನಿಯಮ ಪ್ರಕಾರ ಮದ್ಯದ ಅಮಲಿನಲ್ಲಿ ಹೇಳುವ ತಲಾಖ್ ಇಸ್ಲಾಮಿಕ ತಲಾಖ್ ಎಂದು ಗಣಿಸಲ್ಪಡಲಾರದು. ಮಾತ್ರವಲ್ಲ, ಪ್ರವಾದಿ ಮುಹಮ್ಮದ್(ಸ) ಹೀಗೆ ನುಡಿದಿದ್ದಾರೆ: "ಬುದ್ಧಿ ಸ್ಥಿಮಿತದಲ್ಲಿಲ್ಲದವನ ಮತ್ತು ಮತಿಭ್ರಮಿಯ ತಲಾಖ್ ಹೊರತು ಎಲ್ಲಾ ತಲಾಖ್ ಸಿಂಧು" (ತಿರ್ಮದಿ). "ಒತ್ತಾಯ ಪೂರ್ವಕವಾದ ತಲಾಖ್ ನ್ಯಾಯಬದ್ಧವಲ್ಲ" (ಅಬೂ ದಾವೂದ್). ಬುದ್ಧಿ ಸ್ಥಿಮಿತದಲ್ಲಿಲ್ಲದವರು ಹೇಳುವ ತಲಾಖ್ ಸಿಂಧುವಾಗದೆಂದು ಹಝ್ರತ್ ಉಸ್ಮಾನ್, ಹಝ್ರತ್ ಅಲೀ, ಹಝ್ರತ್ ಇಬ್ನು ಅಬ್ಬಾಸ್ ಮೊದಲಾದ ಮಹನೀಯರು ಹೇಳಿರುವರೆಂದು ಇಮಾಂ ಬುಖಾರಿ ತನ್ನ ಹದೀಸ್ ಗ್ರಂಥದಲ್ಲಿ ಉಲ್ಲೇಖಿಸಿದ್ದಾರೆ. ಒಟ್ಟಿನಲ್ಲಿ, ಮದ್ಯದ ಮತ್ತಿನಲ್ಲಿ ಹೇಳುವ ತಲಾಖ್ ಎಂದಿಗೂ ಇಸ್ಲಾಮಿನ ದೃಷ್ಟಿಯಲ್ಲಿ ಧರ್ಮಬದ್ಧವಲ್ಲ.

ಇನ್ನು ತಲಾಖ್ ಹೇಳಿ ಬಿಡುಗಡೆಗೊಳಿಸಿದ ಪತ್ನಿಯನ್ನು ಪುನಃ ಮೊದಲನೆಯ ಪತಿಯೇ ಸ್ವೀಕರಿಸುವುದರ ಕುರಿತು ಇಸ್ಲಾಂ ಕಲಿಸುವುದೇನೆಂದು ನೋಡೋಣ.

ವಿವಾಹ ವಿಚ್ಛೇದನ ಸಂಪೂರ್ಣವಾದ ನಂತರ ಯಾವೊಬ್ಬನಾದರೂ ತನ್ನ ಹೆಂಡತಿಯನ್ನು ಪುನಃ ಪಡೆಯಲು ಬಯಸುವುದಿದ್ದರೆ, ಅವನು ತಲಾಖ್ ಕೊಟ್ಟ ಪತ್ನಿಯನ್ನು ಇನ್ನೊಬ್ಬನಿಗೆ ಮದುವೆ ಮಾಡಿಸಿ ಅವನಿಂದ ತಲಾಖ್ ಹೇಳಿಸಿದ ನಂತರ ಮೊದಲ ಗಂಡನಿಗೆ ಅವಳನ್ನು ಪಡೆಯಲು ಸಾಧ್ಯವೆಂದು ಹೇಳಲ್ಪಡುತ್ತದೆ.

ಒಬ್ಬನು ತಾನು ಬಿಟ್ಟ ಹೆಂಡತಿಯನ್ನು ಪುನಃ ಪಡೆಯಲಿಕ್ಕಾಗಿ ಅವಳನ್ನು ಇನ್ನೊಬ್ಬನಿಗೆ ಮದುವೆ ಮಾಡಿಸಿ ಕೊಡಬೇಕೆಂಬ ನಿಯಮ ಇಸ್ಲಾಂ ಧರ್ಮದಲ್ಲಿಲ್ಲ. ಬದಲಿಗೆ, ಹಾಗೆ ಮಾಡುವುದು ಮಹಾಪಾಪವೂ ಅನ್ಯಾಯವೂ ಎಂದು ಇಸ್ಲಾಂ ಬೋಧಿಸುತ್ತದೆ. ಆದರೆ ನಿರ್ಭಾಗ್ಯವಶಾತ್ ಇಂದು ಮುಸ್ಲಿಮರು ಧರ್ಮವಿರುದ್ಧವಾದ ಈ ನಿಷಿದ್ಧ ಸಂಪ್ರದಾಯವನ್ನು ಇಸ್ಲಾಮಿಕ ವಿಧಿಯೆಂಬ ರೀತಿಯಲ್ಲಿ ಸ್ವೀಕರಿಸಿ ಅದನ್ನು ಮುಸ್ಲಿಂ ಪಂಡಿತರು ಸಮರ್ಥಿಸಿರುವುದರಿಂದ, ಯಾರಾದರೂ ಈ ರೂಢಿಯನ್ನು ಇಸ್ಲಾಮಿಕವೆಂದು ಭಾವಿಸಿದರೆ ಆಶ್ಚರ್ಯಪಡಲಿಕ್ಕಿಲ್ಲ. ಅಮುಸ್ಲಿಮರು ಮಾತ್ರವಲ್ಲ, ಮುಸ್ಲಿಮರು ಸಹ ಸಾಮಾನ್ಯವಾಗಿ ಈ ನಿಕೃಷ್ಟ ಆಚಾರವನ್ನು ಇಸ್ಲಾಮಿನ ಒಂದು ವಿಧಿಯೆಂದು ತಿಳಿದುಕೊಂಡಿದ್ದಾರೆ. ಅದು ಖಂಡಿತವಾಗಿ ನಿರಪರಾಧಿಯಾದ ಹೆಣ್ಣಿನ ಶೋಷಣೆಗೂ ಮಾನಹಾನಿಗೂ ಕಾರಣವಾಗುತ್ತದೆ. ಒಬ್ಬನು ಅವಿವೇಕದಿಂದಾಗಲಿ, ಕ್ರೋಧದಿಂದಾಗಲಿ ತನ್ನ ಹೆಂಡತಿಗೆ ಥಟ್ಟನೆ ಮೂರು ತಲಾಖ್ ಸಹ ಹೇಳಿ ಪರಿತ್ಯಜಿಸಿ, ಮರುಕ್ಷಣದಲ್ಲಿ ಅವಳನ್ನು ತಿರುಗಿ ಪಡೆಯಲು ಬಯಸುವುದಿದ್ದರೆ ಅವಳು ಒಂದು ರಾತ್ರಿಯಾದರೂ ಇನ್ನೊಬ್ಬ ಗಂಡನನ್ನು ವರಿಸಬೇಕೆಂದೂ, ಹಾಗೆ ಆದರೆ ಮಾತ್ರ ಮೊದಲ ಗಂಡನಿಗೆ ಅವಳನ್ನು ಸ್ವೀಕರಿಸಲು ಸಾಧ್ಯವೆಂದೂ ಹೇಳುವುದು ಖಂಡಿತವಾಗಿಯೂ ಅವಳ ಮಾನಹಾನಿಗೆ ಕಾರಣವಾಗುತ್ತದೆಂದು, ಆಲೋಚಿಸುವವರಿಗೆ ಮನವರಿಕೆಯಾಗಬಹುದು. ಇಸ್ಲಾಮಿಗೆ ಮೊದಲು, ಈ ನಿಷಿದ್ಧ ಆಚಾರ ಅರಬ್ ರಾಜ್ಯದಲ್ಲಿ ವಾಡಿಕೆಯಲ್ಲಿತ್ತು. ಪ್ರವಾದಿ ಮುಹಮ್ಮದ್(ಸ) ರವರು ಈ ದುರಾಚಾರವನ್ನು ಕಠಿಣವಾಗಿ ವಿರೋಧಿಸಿ ಕೊನೆಗೊಳಿಸಿದರು. ಆದರೆ ಅಕಟಾ! ಕಾಲಾಂತರದಲ್ಲಿ ಆ ಪುಣ್ಯ ಪುರುಷರ ಅನುಯಾಯಿಗಳೆಂದು ಅಭಿಮಾನಗೊಳ್ಳುವವರು ಧರ್ಮವಿರುದ್ಧವಾದ ಹಲವು ಆಚಾರಾನುಷ್ಠಾನಗಳನ್ನು ಕೈಗೊಳ್ಳುವುದರೊಂದಿಗೆ ನಿಷಿದ್ಧವೂ ನಿಕೃಷ್ಟವೂ ಆದ ಈ ಸಂಪ್ರದಾಯವನ್ನು ಸಹ ಅಂಗೀಕರಿಸಿದರು. ಇದು ಇಸ್ಲಾಂ ಕಠಿಣವಾಗಿ ವಿರೋಧಿಸಿದ್ದೆಂದು ತಿಳಿದಿದ್ದೂ ಧರ್ಮಪಂಡಿತರು ಅದಕ್ಕೆ ಸೈಗೊಡುತ್ತಾರೆ. ಈ ವರ್ತನೆ ದೇವಶಾಪಕ್ಕೆ ಕಾರಣವಾಗುವುದೆಂದು ಮುಹಮ್ಮದ್ ಪೈಗಂಬರರು(ಸ) ಎಚ್ಚರಿಕೆ ನೀಡಿದ್ದಾರೆ. ಒಂದು ನಿವೇದನದಲ್ಲಿ ಹಝ್ರತ್ ಇಬ್ನು ಮಸ್‌ಊದ್(ರ) ಹೀಗೆ ಹೇಳಿದ್ದಾರೆ: "ತ್ಯಜಿಸಲ್ಪಟ್ಟ ಪತ್ನಿಯನ್ನು ಮೊದಲ ಗಂಡನಿಗೆ ವಿವಾಹಕ್ಕೆ ಅರ್ಹಳನ್ನಾಗಿ ಮಾಡಲು ಅವಳನ್ನು ತಾತ್ಕಾಲಿಕವಾಗಿ ಮದುವೆಯಾಗುವವನನ್ನೂ ಅವಳನ್ನು ಯಾರಿಗಾಗಿ ವಿವಾಹಕ್ಕೆ ಅರ್ಹಳನ್ನಾಗಿ ಮಾಡಲಾಗುವುದೋ ಅವನನ್ನೂ (ಮೊದಲ ಗಂಡನನ್ನೂ) ಮುಹಮ್ಮದ್ ಪೈಗಂಬರರು(ಸ) ಶಪಿಸಿದ್ದಾರೆ." (ದಾರಿಮೀ, ತಿರ್ಮದೀ ಇತ್ಯಾದಿ.) ಮತ್ತೊಂದು ವರದಿಯಲ್ಲಿ ಹೀಗೆ ಪ್ರಸ್ತಾಪಿಸಲಾಗಿದೆ: "ಎರವಲು ಪಡೆಯುವ ಹೋತನ ಕುರಿತು ನಾನು ನಿಮಗೆ ಹೇಳಿ ಕೊಡಲೇ? ಎಂದೊಮ್ಮೆ ಪೈಗಂಬರರು(ಸ) ಕೇಳುತ್ತಾ, ಶಿಷ್ಯರೊಡನೆ ಹೀಗೆ ಹೇಳಿದರು: ಅದು ಮುಹಿಲ್ಲ್ (ತ್ಯಜಿಸಲ್ಪಟ್ಟ ಪತ್ನಿಯನ್ನು ತ್ಯಜಿಸಿದ ಗಂಡನಿಗೇ ವಿವಾಹಕ್ಕೆ ಅರ್ಹಳನ್ನಾಗಿ ಮಾಡಲು ಅವಳನ್ನು ತತ್ಕಾಲಕ್ಕೆ ಮದುವೆಯಾಗುವವನು). ಅವನಿಗೂ ಯಾರಿಗೋಸ್ಕರ ಅವನು ಹಾಗೆ ಮದುವೆಯಾಗುತ್ತಾನೋ ಅವನಿಗೂ ಅಲ್ಲಾಹನ ಶಾಪವಿದೆ" (ಇಬ್ನುಮಾಜಃ). ಪೈಗಂಬರರ(ಸ) ಈ ನುಡಿಯಿಂದ ತ್ಯಜಿಸಲ್ಪಟ್ಟ ಪತ್ನಿಯನ್ನು ಮೊದಲ ಗಂಡನಿಗೆ ಪುನಃ ಸ್ವೀಕಾರಾರ್ಹಳನ್ನಾಗಿ ಮಾಡಲು ಒಂದು ಉಪಾಯವಾಗಿ ತತ್ಕಾಲಕ್ಕೆ ಮಾತ್ರ ಇನ್ನೊಬ್ಬನು ಮದುವೆಯಾಗುವುದು ಧರ್ಮವಿರುದ್ಧ ಮಾತ್ರವಲ್ಲ, ಅದು ದೇವ ಶಾಪಕ್ಕೆ ಕಾರಣವಾಗುವ ಒಂದು ಪಾಪಕರ್ಮ ಕೂಡ ಎಂದು ಸ್ಪಷ್ಟವಾಗುತ್ತದೆ. ಆ ರೀತಿ ಮದುವೆಯಾಗುವವನನ್ನು, ಜೊತೆಗೂಡಿಸಲು ಎರವಲು ಪಡೆಯುವ ಹೋತನಿಗೆ ಹೋಲಿಸಿಕೊಂಡು ಮುಹಮ್ಮದ್ ಪೈಗಂಬರರು(ಸ) ಈ ಸಂಪ್ರದಾಯ ಬಹಳ ನಿಕೃಷ್ಟವೂ ಮೃಗೀಯವೂ, ಅದು ಆ ಸ್ತ್ರೀಗೆ ಅತ್ಯಂತ ಮಾನಹಾನಿಯುಂಟುಮಾಡುವಂಥ ಒಂದು ವರ್ತನೆಯೆಂದೂ ಮನಗಾಣಿಸಿ ಕೊಟ್ಟಿದ್ದಾರೆ. ಅಷ್ಟೇ ಅಲ್ಲ, ಈ ದುಷ್ಟ ಆಚಾರ ಇಸ್ಲಾಮಿಗೆ ಮುಂಚೆ ಅಧರ್ಮ ಕಾಲದಲ್ಲಿ ವಾಡಿಕೆಯಲ್ಲಿದ್ದ ಒಂದು ಕ್ರಮವಾಗಿತ್ತೆಂದು ಸಹ ತಿಳಿದುಬರುತ್ತದೆ.

ಇಸ್ಲಾಮಿನ ದೃಷ್ಟಿಯಲ್ಲಿ ವಿವಾಹವೆಂಬುದು ಕಾಲ ನಿರ್ಣಯವಿಲ್ಲದೆಯೇ ಎಂದೆಂದಿಗೂ ಒಬ್ಬಳು ಸ್ತ್ರೀಯನ್ನು

ಸಹಧರ್ಮಿಣಿಯನ್ನಾಗಿ ಮಾಡಲು ಅವಳೊಡನೆ ನಿಯಮಾನುಸಾರ ಉಂಟುಮಾಡುವ ಸಂಬಂಧವಾಗಿದೆ. ಆದ್ದರಿಂದ ಒಂದು ಕ್ಲಪ್ತಕಾಲಕ್ಕಾಗಿ ಮಾಡುವ ವಿವಾಹ ಮತ್ತು ಸ್ತ್ರೀಯನ್ನು ತನ್ನ ಧರ್ಮಪತ್ನಿಯಾಗಿ ಸ್ವೀಕರಿಸುವ ಉದ್ದೇಶ ವಿನಾ ಮಾಡುವ ವಿವಾಹ ಇಸ್ಲಾಮೀ ಅಧ್ಯಾಪನಾನುಸಾರ ವಿವಾಹವಾಗುವುದಿಲ್ಲ. ಶಿಯಾಪಂಥಕ್ಕೆ ಸೇರಿದ ಮುಸ್ಲಿಮರು ಅಂಗೀಕರಿಸಿರುವ 'ಮುತ್‌ಅ' ಅಥವಾ ಕಾಲ ನಿರ್ಣಯದ ವಿವಾಹ ಇಸ್ಲಾಮಿಕವಲ್ಲವೆಂದು ಸುನ್ನೀ ಪಂಥದವರು ಹೇಳುವುದು ಕಾಲನಿರ್ಣಯ ನಿಮಿತ್ತ ಅದು ಯಥಾರ್ಥದಲ್ಲಿ ವಿವಾಹವಲ್ಲದಾಗುವುದರಿಂದಲೇ ಆಗಿದೆ. 'ಮುತ್‌ಅ' ಧರ್ಮ ಬದ್ಧವಲ್ಲವೆಂದಾಗುವಾಗ, ತ್ಯಜಿಸಲ್ಪಟ್ಟ ಹೆಂಡತಿಯನ್ನು ತ್ಯಜಿಸಿದ ಗಂಡನಿಗೇ ಸ್ವೀಕರಿಸಲರ್ಹಳನ್ನಾಗಿಸಲು ಮಾಡಿಸುವ ತಾತ್ಕಾಲಿಕ ವಿವಾಹ ಅದಕ್ಕಿಂತ ಧರ್ಮವಿರುದ್ಧವಾಗುತ್ತದೆ. ಏಕೆಂದರೆ ತಾತ್ಕಾಲಿಕ ವಿವಾಹದಲ್ಲಿ ಕಾಲನಿರ್ಣಯ ಇರುವುದು ಮಾತ್ರವಲ್ಲ, ಈ ಮದುವೆಯ ಉದ್ದೇಶವೇ ಸ್ತ್ರೀಯನ್ನು ಸ್ವಂತ ಧರ್ಮಪತ್ನಿಯಾಗಿ ಸ್ವೀಕರಿಸುವುದು ಕೂಡ ಅಲ್ಲ. ಆದುದರಿಂದ ಈ ವಾಡಿಕೆ ಇಸ್ಲಾಮೀ ನಿಯಮದ ಪ್ರಕಾರ ಮದುವೆಯೇ ಅಲ್ಲವೆಂದು, ಆಲೋಚಿಸುವವರಿಗೆ ಸುಲಭದಲ್ಲಿ ಮನದಟ್ಟಾಗಬಹುದು. ಹಾಗೆ ಅದು ವಿವಾಹವೇ ಅಲ್ಲವೆಂದಾಗುವಾಗ, ಮೂರು ಬಾರಿ ತಲಾಖ್ ಹೇಳಿ ತ್ಯಜಿಸಿದ ಸ್ತ್ರೀಯನ್ನು ಪುನಃ ಪತ್ನಿಯಾಗಿ ಸೀೃಕರಿಸಲಿಕ್ಕೆ ಇಂತಹ ಲಜ್ಜಾಕರವಾದ ಒಂದು ಕ್ರಮವನ್ನು ರೂಢಿಗೊಳಿಸಿ ಅದನ್ನು ವಿವಾಹವೆಂದು ಕರೆಯುವುದು ಇಸ್ಲಾಂ ಧರ್ಮದ ದೃಷ್ಟಿಯಲ್ಲಿ ಎಂದಿಗೂ ಸಿಂಧುವಾಗದು. ಕಾಲನಿರ್ಣಯ ಸಹಿತ ಮಾಡುವ ವಿವಾಹ ವ್ಯಭಿಚಾರದ ಒಂದು ಪ್ರಭೇದ ಮಾತ್ರವೇ ಆಗುತ್ತದೆ. ಧರ್ಮಪತ್ನಿಯನ್ನಾಗಿ ಮಾಡುವ ಉದ್ದೇಶದಿಂದ ಹೊರತು ಒಂದು ಸ್ತ್ರೀಯೊಡನೆ ಹೊಂದುವ ತಾತ್ಕಾಲಿಕ ಸಂಬಂಧಕ್ಕೆ ವಿವಾಹ ಎಂದು ಹೆಸರಿಡುವುದು ವಿವಾಹವನ್ನು ಪರಿಹಾಸ್ಯಕ್ಕೆ ಗುರಿಪಡಿಸುವಂಥ ಹಾಗೂ ಸ್ತ್ರೀಯನ್ನು ಅಪಮಾನಿಸುವಂಥ ಒಂದು ಕ್ರಿಯೆಯಾಗಿದೆ. ಪವಿತ್ರ ಖುರ್‌ಆನ್ ಒಂದು ಕಡೆಯಲ್ಲಿ ಹೀಗೆ ಹೇಳುತ್ತದೆ: "ಅವರು (ಹೆಂಡಂದಿರು) ನಿಮಗೆ ಉಡುಪು; ನೀವು ಅವರಿಗೆ ಉಡುಪು" (2:188). ಹೀಗೆ ಪತಿ-ಪತ್ನಿಯರು ಪರಸ್ಪರ ಉಡುಗೆಯಾಗಿರುವರೆಂದು ಹೇಳುತ್ತಾ ಪವಿತ್ರ ಖುರ್‌ಆನ್, ಯಾವ ರೀತಿಯಲ್ಲಿ ಉಡುಪು ಸುಖವನ್ನೂ ಆರೋಗ್ಯವನ್ನೂ ನೀಡಲಿಕ್ಕೂ ನ್ಯೂನತೆಗಳನ್ನು ಮರೆಮಾಚಲಿಕ್ಕೂ ಸೌಂದರ್ಯವನ್ನು ವರ್ಧಿಸಲಿಕ್ಕೂ ಉಪಯುಕ್ತವಾಗುತ್ತದೋ, ಅದೇ ಪ್ರಕಾರವೇ ಗಂಡ ಹೆಂಡಿರ ಪರಸ್ಪರ ಸಂಬಂಧ ಅವರಲ್ಲಿ ಸದೃಶಗಳಾದ ಆಧ್ಯಾತ್ಮಿಕ ಮತ್ತು ಶಾರೀರಿಕ ಗುಣಗಳನ್ನು ಉತ್ಪಾದಿಸಲು ಪರ್ಯಾಪ್ತವಾಗಿರುವುದೆಂದು ಮನಗಾಣಿಸುತ್ತದೆ. ಈ ವಿಧ ಗುಣಗಳು, ಕಾಲನಿರ್ಣಯ ರಹಿತವಾದ, ಎಂದೆಂದಿಗೂ ಸ್ತ್ರೀಯನ್ನು ಸಹಧರ್ಮಿಣಿಯನ್ನಾಗಿ ಮಾಡುವ ವಿವಾಹ ಮುಖೇನ ಮಾತ್ರವೇ ಸಿದ್ಧಿಸುತ್ತದೆಯಷ್ಟೇ. ಪವಿತ್ರ ಖುರ್‌ಆನ್ ಇನ್ನೊಂದೆಡೆಯಲ್ಲಿ, ವಿವಾಹವಾಗಲು ನಿಷೇಧಿಸಲ್ಪಟ್ಟ ಬಂಧು ಸ್ತ್ರೀಯರ ಕುರಿತು ವಿವರಿಸುತ್ತಾ ಹೀಗೆ ಹೇಳುತ್ತದೆ: "ಇವರ ಹೊರತಾದ ಸ್ತ್ರೀಯರನ್ನು ನೀವು ಧನ (ಮಹರ್) ಕೊಟ್ಟು, ವ್ಯಭಿಚಾರಕ್ಕಾಗಿಯಲ್ಲ; ಸಹ ಧರ್ಮಿಣಿಗಳಾಗಿ ಸ್ವೀಕರಿಸುವುದಕ್ಕೆ ನಿಮಗೆ ಸಮ್ಮತಿಯನ್ನೀಯಲಾಗಿದೆ" (4:25). ಹೀಗೆ ಖುರ್‌ಆನಿನ ಹಲವು ವಚನಗಳಿಂದಲೂ ಪೈಗಂಬರರ ನುಡಿಗಳಿಂದಲೂ ಯಥಾರ್ಥ ರೀತಿಯಲ್ಲಿರುವ ವಿವಾಹ ಸಂಬಂಧದ ಉದ್ದೇಶವೇನೆಂದೂ, ಕಾಲನಿರ್ಣಯ ಸಹಿತದ ಅಥವಾ ಸ್ತ್ರೀಯನ್ನು ಧರ್ಮಪತ್ನಿ ಮಾಡುವ ಉದ್ದೇಶದಿಂದ ಹೊರತಾದ ಸಂಬಂಧ ಸರಿಯಾದ ವಿವಾಹವಾಗಲಿಕ್ಕಿಲ್ಲವೆಂದೂ ಮನವರಿಕೆಯಾಗುತ್ತದೆ.

ವಿವಾಹ ವಿಚ್ಛೇದನಗೊಂಡ ಸ್ತ್ರೀಯನ್ನು ಅವಳ ಮೊದಲ ಗಂಡ ಪುನಃ ಪತ್ನಿಯಾಗಿ ಸ್ವೀಕರಿಸಲಿಕ್ಕೋಸ್ಕರ ಅವಳನ್ನು ತಾತ್ಕಾಲಿಕವಾಗಿ ಇನ್ನೊಬ್ಬ ಮದುವೆಯಾಗುವುದು ಮೃಗೀಯವೂ ದೇವಕೋಪಕ್ಕೆ ಈಡಾಗುವಂಥದ್ದೂ ಸ್ತ್ರೀಗೆ ಮಾನಹಾನಿಯುಂಟುಮಾಡುವಂಥದ್ದೂ ಆದ ಒಂದು ವರ್ತನೆಯಾಗಿದ್ದು ಕೂಡ ಮುಸ್ಲಿಮರು ಈ ನೀಚ ಸಂಪ್ರದಾಯವನ್ನು ಧರ್ಮವಿಧಿಯೆಂಬಂತೆ ಆಚರಿಸಲು ಕಾರಣವಾದುದು ಒಂದೇ ಸಂದರ್ಭದಲ್ಲಿ ಹೇಳುವ ಮೂರು ತಲಾಖನ್ನು ಮೂರೆಂದೇ ಧರ್ಮಪಂಡಿತರು ಪರಿಗಣಿಸಿ ಅದನ್ನು ಇಸ್ಲಾಮಿಕ ನಿಯಮವೆಂದು ಅಂಗೀಕರಿಸಿದ್ದರಿಂದಾಗಿದೆ. ಒಂದೇ ಸಮಯದಲ್ಲಿ ಮೂರು ತಲಾಖ್ ಸಹ ಹೇಳಬಾರದೆಂದೂ ಹಾಗೆ ಹೇಳುವುದಾದರೆ ಅದನ್ನು ಒಂದೆಂದು ಮಾತ್ರ ಗಣಿಸಬೇಕೆಂಬ ಇಸ್ಲಾಮಿನ ನಿರ್ದೇಶನವನ್ನು ನಿಯಮವೆಂದು ಅಂಗೀಕರಿಸಿದ್ದರೆ, ಒಬ್ಬನು ಒಂದೇ ಕಾಲದಲ್ಲಿ ಮೂರು ಅಲ್ಲ ಮುನ್ನೂರು ತಲಾಖ್ ಹೇಳಿದರೂ ಅದನ್ನು ಒಂದು ತಲಾಖೆಂದು ಎಣಿಸಲಾಗುವುದರಿಂದ, ತಲಾಖ್ ಪಡೆದವಳನ್ನು ಪುನಃ ಸ್ವೀಕರಿಸಲಿಕ್ಕಾಗಿ ತತ್ಕಾಲಕ್ಕೆ ಅವಳನ್ನು ಮತ್ತೊಬ್ಬನಿಗೆ ಮದುವೆ ಮಾಡಿಕೊಡುವ ನಿಷಿದ್ಧವೂ ಮೃಗೀಯವೂ ಆದ ಕ್ರಮವನ್ನು ಕೈಗೊಳ್ಳಲಿಕ್ಕಾಗಲಿ ಉಭಯ ಕಡೆಯವರೂ ಶಾಪಗ್ರಸ್ತರಾಗಲಿ ಆಗುತ್ತಿರಲಿಲ್ಲ. ಏಕೆಂದರೆ, ಒಬ್ಬನು ತನ್ನ ಪತ್ನಿಗೆ ಒಂದು ಸಲ ಯಾ ಎರಡು ಸಲ ತಲಾಖ್ ಹೇಳುವುದಾದರೆ, ಕಾಲಾವಧಿಯೊಳಗೆ ಪ್ರತ್ಯೇಕ ವಿವಾಹ ಕರ್ಮ ವಿನಾ ಮತ್ತು ಕಾಲಾವಧಿ ಕಳೆದರೆ ಹೊಸ ವಿವಾಹ ಕರ್ಮ ಮೂಲಕ ಅವಳನ್ನು ಪುನಃ ಪತ್ನಿಯಾಗಿ ಸ್ವೀಕರಿಸಬಹುದಾಗಿದೆ. ಹಾಗೆ ಸ್ವೀಕರಿಸಲಿಕ್ಕೆ ಅವಳನ್ನು ಇನ್ನೊಬ್ಬನಿಗೆ ಮದುವೆ ಮಾಡಿಕೊಡುವುದೂ ಅವನು ಅವಳನ್ನು ತ್ಯಜಿಸುವುದೂ ಅಗತ್ಯವಿಲ್ಲ. ಆದರೆ, ಇಸ್ಲಾಮೀ ಧರ್ಮೋಪದೇಶಕ್ಕೆ ವಿರುದ್ಧವಾಗಿ ಒಂದೇ ಸಂದರ್ಭದಲ್ಲಿ ಹೇಳುವ ಮೂರು ತಲಾಖನ್ನು ಮೂರಾಗಿಯೇ ಪರಿಗಣಿಸುವುದರ ಫಲವಾಗಿ ಶಾಪಗ್ರಸ್ತ ಮತ್ತು ನಿಷಿದ್ಧವೆಂದು ಇಸ್ಲಾಂ ಹೇಳಿಕೊಡುವ ಲಜ್ಜಾಕರವಾದ ಮತ್ತೊಂದು ಸಂಪ್ರದಾಯವನ್ನು ಇಸ್ಲಾಮೀ ನಿಯಮವೆಂದು ಮುಸ್ಲಿಮರು ಸ್ವೀಕರಿಸಬೇಕಾಯಿತು. ಇದು ಇಸ್ಲಾಮಿಕ ಅಧ್ಯಾಪನವನ್ನು ಅಲಕ್ಷ್ಯ ಮಾಡಿದ್ದಕ್ಕೆ ಮುಸ್ಲಿಮರು ಅನುಭವಿಸಬೇಕಾಗಿ ಬಂದ ಒಂದು ಶಿಕ್ಷೆಯೆಂದು ಹೇಳಬಹುದು. ಮನುಷ್ಯರೆಲ್ಲ ಒಂದೇ ತರದಲ್ಲಿ ಸಹಲಶೀಲರೂ, ವಿವೇಕಪೂರ್ಣವಾಗಿ ವರ್ತಿಸುವವರೂ ಅಲ್ಲ. ಆದ್ದರಿಂದ, ಅವಿವೇಕಿಯೂ ಕೋಪಿಷ್ಠನೂ ಆದ ಒಬ್ಬ ಗಂಡ ಥಟ್ಟನೆ ತನ್ನ ಪತ್ನಿಗೆ ಒಂದೇ ಸಂದರ್ಭದಲ್ಲಿ ಮೂರು ತಲಾಖ್

ಕೂಡ ಹೇಳಲೂಬಹುದು. ಹಾಗೆ ಒಮ್ಮೆಲೇ ಹೇಳಿದ ಮೂರು ತಲಾಖ್ ಒಂದು ಮಾತ್ರವೇ ಆಗುವುದೆಂಬ ಇಸ್ಲಾಮಿಕ ನಿಯಮವನ್ನು ಅವಗಣಿಸಿಕೊಂಡು ಅದನ್ನು ಮೂರು ತಲಾಖೆಂದು ಎಣಿಸತೊಡಗಿದಾಗ ಅವಿವೇಕಿಗಳಾದ ಗಂಡಂದಿರ ಆಲೋಚನಾರಹಿತವಾದ ವರ್ತನೆಗೆ ಪರಿಹಾರ ಕಾಣಲಿಕ್ಕಾಗಿ ಹೀಗೆ ವಿವಾಹವೆಂಬ ನಾಮದಲ್ಲಿ ಇಸ್ಲಾಮಿಕವಲ್ಲದ ಒಂದು ಏರ್ಪಾಡು ಮಾಡುವರೆ ಅಂತಹವರು ನಿರ್ಬಂಧಪಡಿಸಲ್ಪಟ್ಟರು. ಹಾಗಲ್ಲದೆ ಇದು ಇಸ್ಲಾಮೀ ನಿಯಮವಾಗಲಿ ಇಸ್ಲಾಮಿನ ಅಧ್ಯಾಪನಕ್ಕನುಗುಣವಾದ ಒಂದು ವರ್ತನೆಯಾಗಲಿ ಅಲ್ಲ.

ಒಬ್ಬನು ಮೂರು ತಲಾಖ್ ಹೇಳಿ ತ್ಯಜಿಸಿದ ಒಬ್ಬಾಕೆ ಸ್ತ್ರೀಯನ್ನು ಇಸ್ಲಾಮಿಕ ನಿಯಮಾನುಸಾರ ಇನ್ನೊಬ್ಬನು ಮದುವೆಯಾಗಿ, ನ್ಯಾಯಾನುಸಾರ ಅವನು ಅವಳನ್ನು ಪರಿತ್ಯಜಿಸುವುದಾದರೆ ಅವಳನ್ನು ಮೊದಲ ಗಂಡ ಪುನಃ ಮದುವೆ ಮಾಡಿಕೊಳ್ಳಬಹುದೆಂದು ಇಸ್ಲಾಂ ಕಲಿಸುತ್ತದೆ. ಎರಡನೆಯವನು ಅವಳನ್ನು ಮದುವೆಯಾಗುವುದು ಮೊದಲಿನ ಗಂಡನಿಗೆ ಅವಳನ್ನು ಸ್ವೀಕಾರಾರ್ಹಳನ್ನಾಗಿ ಮಾಡಲಿಕ್ಕೋಸ್ಕರವಾದರೆ ಅದು ಯಥಾರ್ಥದಲ್ಲಿ ವಿವಾಹವಾಗಲಿಕ್ಕಿಲ್ಲ; ಧರ್ಮನಿರ್ದೇಶನವನ್ನು ಅಪಹಾಸ್ಯಕ್ಕೆ ಗುರಿಪಡಿಸುವ ಒಂದು ಕ್ರಮ ಮಾತ್ರವಾಗುತ್ತದೆ. ಅಂತಹ ಒಂದು ಕ್ರಮದಿಂದ ಅವಳು ಮೊದಲ ಗಂಡನಿಗೆ ಸ್ವೀಕಾರಯೋಗ್ಯಳಾಗುವುದೇ ಇಲ್ಲ. ಅವನಿಗೆ ಅವಳನ್ನು ಸ್ವೀಕರಿಸಲು ಸಾಧ್ಯವಾಗಬೇಕೆಂದಾದರೆ ಎರಡನೆಯ ಗಂಡ ಸರಿಯಾದ ರೀತಿಯಲ್ಲಿ ಅವಳನ್ನು ವಿವಾಹವಾಗಿ ನಿಯಮಾನುಸಾರ ಅವಳನ್ನು ತ್ಯಜಿಸಬೇಕಾಗಿದೆ. ವಿವಾಹ ಸಂಬಂಧವನ್ನು ಸಾಧ್ಯವಿದ್ದಷ್ಟೂ ವಿಚ್ಛೇದನಗೊಳಿಸದಿರಲಿಕ್ಕೂ ದಾಂಪತ್ಯ ಜೀವಿತವನ್ನು ಸುಗಮವಾಗಿ ಸಾಗಿಸಿಕೊಂಡು ಹೋಗಲಿಕ್ಕೂ ದಂಪತಿಗಳು ಪ್ರೇರಿತರಾಗಲಿಕ್ಕಾಗಿಯೇ ಇಸ್ಲಾಂ ಹೀಗೆ ವಿಧಿಸಿದ್ದು. ವಿವಾಹಸಂಬಂಧವನ್ನು ಮುರಿಯದಿರಲಿಕ್ಕಾಗಿ ಇಸ್ಲಾಂ ಒಂದನೆಯದಾಗಿ ತಲಾಖಿಗೆ ಕೆಲವು ಪ್ರತಿಬಂಧಕಗಳನ್ನು ವಿಧಿಸಿತು. ಈ ಪ್ರತಿಬಂಧಕಗಳನ್ನೆಲ್ಲಾ ತೊಡೆದು ಹಾಕಿ ಒಬ್ಬನು ತನ್ನ ಪತ್ನಿಗೆ ತಲಾಖ್ ಹೇಳುವುದಾದರೆ ಅದು ಒಂದು ತಲಾಖ್ ಆಗುವುದು. ಹೀಗೆ ಎರಡು ಸಲ ಹೆಂಡತಿಯನ್ನು ತಲಾಖ್ ಹೇಳಿ ತೊರೆಯಲಿಕ್ಕೂ ಪುನಃ ಸ್ವೀಕರಿಸಲಿಕ್ಕೂ ಅವನಿಗೆ ಸಾಧ್ಯ. ಅನಂತರ ಮೂರನೆಯ ಸಲವೂ ಅವನು ತಲಾಖ್ ಹೇಳುವುದಾದರೆ ಮತ್ತೆ ಅವನು ತನ್ನ ಮಡದಿಯನ್ನು ತಿರುಗಿ ಪಡೆಯುವುದು ಸಲ್ಲದು. ಆಗ, ಅವನು ತನ್ನ ಪತ್ನಿಯನ್ನು ಮೂರು ಬಾರಿ ಸ್ವೀಕರಿಸಿ ಮೂರು ಬಾರಿ ಪರಿತ್ಯಜಿಸಿದನು. ಹೀಗೆ ಹಲವು ಪ್ರತಿಬಂಧಕಗಳನ್ನು ಕಿತ್ತೆಸೆದು ಒಬ್ಬನು ತನ್ನ ಪತ್ನಿಯನ್ನು ಒಂದು ಸಲವಲ್ಲ ಮೂರು ಸಲವೂ ತ್ಯಜಿಸುವುದಾದರೆ ಅದರರ್ಥ ಅವನಿಗೆ ಅವಳೊಂದಿಗೆ ಸಹಧರ್ಮ ಜೀವಿತ ಮುಂದುವರಿಸಿಕೊಂಡು ಹೋಗಲು ಯಾವ ಪ್ರಕಾರದಲ್ಲೂ ಸಾಧ್ಯವಿಲ್ಲವೆಂದಾಗಿದೆ. ಆದ್ದರಿಂದ, ಇಷ್ಟು ಪ್ರತಿರೋಧಕಗಳನ್ನು ತಳ್ಳಿಹಾಕಿ ದಾಂಪತ್ಯಸಂಬಂಧವನ್ನು ಕೊನೆಗೊಳಿಸಿದವನಿಗೆ ಆ ಸ್ತ್ರೀಯ ಗಂಡನಾಗಲಿಕ್ಕೆ ನಿರ್ವಾಹವಿಲ್ಲವೆಂದು ಅದು ರುಜುಪಡಿಸುತ್ತದೆ. ಒಟ್ಟಿನಲ್ಲಿ, ಇದರ ನಂತರ ಭರ್ತೃಪದವನ್ನು ಪಡೆಯುವ ಹಕ್ಕು ಅವನಿಗೆ ಪರಿಪೂರ್ಣವಾಗಿ ಇಲ್ಲದಾಗುತ್ತದೆ. ಹೀಗೆ, ಪತಿಯು ಪತ್ನಿಯನ್ನು ತೊರೆಯಲಿಕ್ಕೂ ನಂತರ ಸ್ವೀಕರಿಸಲಿಕ್ಕೂ ಇಸ್ಲಾಂ ಒಂದು ನಿಬಂಧನೆಯನ್ನು ಇರಿಸದಿದ್ದರೆ ದಾಂಪತ್ಯ ಸಂಬಂಧ ಒಂದು ವಿನೋದವೂ ವಿವಾಹ ಮತ್ತು ವಿವಾಹ ವಿಚ್ಛೇದ ಅರ್ಥರಹಿತವೂ ಆದ ರೀತಿಯಾಗಿ ಪರಿಣಮಿಸೀತು. ಆದ್ದರಿಂದ ಪತ್ನಿಯನ್ನು ಸ್ವೀಕರಿಸಲಿಕ್ಕೂ ತ್ಯಜಿಸಲಿಕ್ಕೂ ಇಸ್ಲಾಂ ಒಂದು ಸೀಮೆಯನ್ನು ನಿಶ್ಚಯಿಸಿ, ಅದು ಮೂರು ಬಾರಿ ತನಕ ಆಗಬಹುದೆಂದೂ ಅದರ ನಂತರ ಆ ಸ್ತ್ರೀಯನ್ನು ಪತ್ನಿಯಾಗಿರಿಸುವ ಹಕ್ಕು ಗಂಡನಿಗೆ ನಷ್ಟವಾಗುತ್ತದೆಂದೂ ವಿಧಿಸಿದೆ. ಈ ಪ್ರಕಾರ ನಿಯಮ ನಿರ್ದೇಶ ಮೂಲಕ ಇಸ್ಲಾಂ ದಾಂಪತ್ಯ ಸಂಬಂಧವನ್ನು ಸಾಧ್ಯವಾದಷ್ಟು ಸುಗಮವೂ ಪ್ರಾಯೋಗಿಕವೂ ಮಾಡಿರುತ್ತದೆ. ಆದರೆ ತಲಾಖ್ ಮೂಲಕ ಪರಿತ್ಯಕ್ತಳಾದ ಸ್ತ್ರೀಯನ್ನು ಇನ್ನೋರ್ವನು ತನ್ನ ಧರ್ಮಪತ್ನಿಯಾಗಿ ವರಿಸಿ ನಂತರ ಮೊದಲ ಗಂಡ ಮತ್ತು ಆ ಸ್ತ್ರೀ ಪುನಃ ಗಂಡ-ಹೆಂಡತಿಯಾಗಲು ಇಷ್ಟಪಡುವ ಪಕ್ಷದಲ್ಲಿ ಅವರು ಮರು ಮದುವೆಯಾಗಬಹುದೆಂದು ಇಸ್ಲಾಂ ಸಮ್ಮತಿಸಿರುವುದು, ಅವರೀರ್ವರೂ ಪರಸ್ಪರ ಸಂಬಂಧವಿಲ್ಲದ ಎರಡು ವ್ಯಕ್ತಿಗಳಂತಾಗಿ ಬಹಳಷ್ಟು ಪಾಠಗಳನ್ನು ಕಲಿತು, ಒಂದು ವೇಳೆ ಮುಂದೆ ಉಂಟುಮಾಡುವ ಹೊಸ ಸಂಬಂಧವನ್ನು ಸಾಮರಸ್ಯದಿಂದ ಮುಂದುವರಿಸಿಕೊಂಡು ಹೋಗಲಿಕ್ಕೆ ಅವಕಾಶವಿರುವುದರಿಂದಾಗಿದೆ. ಈ ರೀತಿ ಅನುಮತಿಸುತ್ತಾ ಇಸ್ಲಾಂ ಮನುಷ್ಯನ ಸ್ನೇಹಶೀಲತೆಯನ್ನು ಗೌರವಿಸಿ ಅವನ ಚಾಪಲ್ಯವನ್ನು ಕ್ಷಮಿಸಿ ನಿಯಮವನ್ನು ಸೌಮ್ಯಗೊಳಿಸಿದೆ. ಬಾಹ್ಯದೃಷ್ಟಿಯಲ್ಲಿ ನೋಡುವಾಗ ಇಷ್ಟು ಹೆಚ್ಚು ಪ್ರತಿಬಂಧಕಗಳನ್ನು ಕಿತ್ತೊಗೆದು ಮೂರು ಸಲ ತನ್ನ ಪತ್ನಿಯನ್ನು ಬಿಟ್ಟು, ದಾಂಪತ್ಯ ಸಂಬಂಧವನ್ನು ಕೆಡಿಸಿದವನಿಗೆ ಅವಳನ್ನು ಕೊನೆಯ ವರೆಗೆ ಪತ್ನಿಯಾಗಿ ಸ್ವೀಕರಿಸಲು ಅವಕಾಶವಿರಬಾರದು. ಒಟ್ಟಿನಲ್ಲಿ, ಮೂರು ಬಾರಿ ತಲಾಖ್ ಹೇಳಿ ಪರಿಪೂರ್ಣವಾಗಿ ವಿವಾಹ ಮುಕ್ತಗೊಳಿಸಿದ ಪತ್ನಿಯನ್ನು ಮೊದಲ ಗಂಡ ಸ್ವೀಕರಿಸಲಿಕ್ಕೆ ಸಾಧ್ಯವಾಗಬೇಕಾದರೆ, ಅವಳನ್ನು ಇನ್ನೊಬ್ಬನು ತನ್ನ ಸಹಧರ್ಮಿಣಿಯಾಗಿ ನಿಯಮ ಪ್ರಕಾರ ವರಿಸಿ, ನಂತರ ಅವನು ನ್ಯಾಯಬದ್ಧವಾಗಿ ಅವಳನ್ನು ಪರಿತ್ಯಜಿಸಿರಬೇಕು. ಹಾಗಲ್ಲದೆ, ಮೊದಲ ಗಂಡನಿಗೆ ಅವಳನ್ನು ಸ್ವೀಕರಿಸಲಿಕ್ಕೆ ಒಂದು ಉಪಾಯವಾಗಿ ಮತ್ತೊಬ್ಬನು ಅವಳನ್ನು ಮದುವೆಯಾಗಿ ಬಿಟ್ಟುಬಿಡುವುದರಿಂದ ಅವಳು ಮೊದಲ ಗಂಡನಿಗೆ ಎಂದಿಗೂ ವಿವಾಹ ವಿಹಿತಳಾಗುವುದಿಲ್ಲ.

ದಾಂಪತ್ಯ ಜೀವಿತವನ್ನು ಮುಂದುವರಿಸಿಕೊಂಡು ಹೋಗಲು ನಿರ್ವಾಹವಿಲ್ಲದಂತೆ ಮಾಡುವಂಥ ಕಲಹವಾಗಲಿ ಬಿಕ್ಕಟ್ಟಾಗಲಿ ಉಂಟಾದರೆ ದಂಪತಿಗಳು ದುಃಖಭರಿತ ಜೀವಿತವನ್ನು ಸಾಗಿಸಲು ನಿರ್ಬಂಧಿತರಾಗುವ ಪಕ್ಷದಲ್ಲಿ ವಿವಾಹವಿಚ್ಛೇದ ಸಮ್ಮತನೀಯವೆಂದು ಇಸ್ಲಾಂ ಬೋಧಿಸಿದೆಯಾದರೂ ಯಥಾರ್ಥದಲ್ಲಿ ಇಸ್ಲಾಂ ನಿರ್ದೇಶಿಸುವ ವೈವಾಹಿಕ ಸಂಬಂಧ ಕಾಲನಿರ್ಣಯರಹಿತವಾದ, ಎಂದೆಂದಿಗೂ ಇರುವ ಒಂದು ಬಂಧುತ್ವವಾಗಿದೆ. ಅದನ್ನು ಅವರೀರ್ವರೂ ಪಾಲಿಸಿಕೊಂಡು ಹೋಗುವ ಪಕ್ಷದಲ್ಲಿ ಅದು ಅವರ ಮರಣದೊಂದಿಗೆ ಸಹ

ಕೊನೆಗೊಳ್ಳುವುದಿಲ್ಲ. ಪಾರತ್ರಿಕ ಜೀವಿತದಲ್ಲೂ ಆ ಸಂಬಂಧ ಅನಶ್ವರವಾಗಿ ನೆಲೆಗೊಳ್ಳುತ್ತದೆ. ಆದ್ದರಿಂದಲೇ ಪವಿತ್ರ ಖುರ್‌ಆನ್ ಈ ರೀತಿ ಹೇಳಿರುತ್ತದೆ: "ಅವರೂ ಅವರ ಸುಕೃತರಾದ ಮಾತಾಪಿತರೂ ಹೆಂಡಂದಿರೂ ಸಂತಾನಗಳೂ ಅನಶ್ವರವಾದ ಸ್ವರ್ಗದಲ್ಲಿ ಪ್ರವೇಶಿಸುವರು" (13:24). ಇದರಿಂದ, ಗಂಡ ಹೆಂಡರಿಗೆ ಪರಸ್ಪರ ಆಧ್ಯಾತ್ಮಿಕವಾಗಿ ಸಹಮತವಿದ್ದರೆ ಪಾರತ್ರಿಕ ಜೀವಿತದಲ್ಲೂ ಅವರ ಸಂಬಂಧ ಮುರಿಯದೆಂದು ಮನದಟ್ಟಾಗುತ್ತದೆ. ಯಾವ ರೀತಿ ಆಧ್ಯಾತ್ಮಿಕವಾಗಿ ಸಹಮತವಿಲ್ಲದ ಪಕ್ಷದಲ್ಲಿ ದಂಪತಿಗಳ ಸಂಬಂಧ ಪಾರತ್ರಿಕ ಜೀವಿತದಲ್ಲಿ ಅಂತ್ಯಗೊಳ್ಳುತ್ತದೋ ಅದೇ ಪ್ರಕಾರವೇ ಐಹಿತ ಜೀವಿತದಲ್ಲಿ ಅವರಿಗೆ ಬಂಧುತ್ವವನ್ನು ಪಾಲಿಸಿಕೊಂಡು ಹೋಗಲಿಕ್ಕೆ ನಿರ್ವಾಹಯಿಲ್ಲದಾಗುವ ಘಟ್ಟದಲ್ಲಿ ಅದನ್ನು ವಿಚ್ಛೇದಿಸಬಹುದಾಗಿದೆ. ಹೀಗೆ ನಿರ್ವಾಹವಿಲ್ಲದ ಸಂದರ್ಭದಲ್ಲಿ ಆ ಸಂಬಂಧವನ್ನು ಮುರಿಯಬಹುದೆಂದುಇಸ್ಲಾಂ ಆದೇಶಿಸುವುದಾದರೂ ಆ ಬಂಧುತ್ವವನ್ನು ಮುಂದುವರಿಸಿಕೊಂಡು ಹೋಗಲು ಇಚ್ಛಿಸುವ ಪಕ್ಷದಲ್ಲಿ ಈ ಜೀವಿತದಲ್ಲಿ ಮಾತ್ರವಲ್ಲ, ಪರಲೋಕ ಜೀವಿತದಲ್ಲೂ ಮುಂದುವರಿಸಿಕೊಂಡು ಹೋಗಬಹುದು. ಅಷ್ಟೇ ಅಲ್ಲ, ಆ ರೀತಿಯಲ್ಲಿ ಈ ಸಂಬಂಧವನ್ನು ಪರಲೋಕ ಜೀವಿತದಲ್ಲೂ ಮುಂದುವರಿಸಿಕೊಂಡು ಹೋಗಲು ಶ್ರಮಿಸಬೇಕೆಂದೂ ಇಸ್ಲಾಂ ಬೋಧಿಸುತ್ತದೆ. ಆದ್ದರಿಂದಲೇ, ಪತ್ನಿ ಮತ್ತು ಮಕ್ಕಳನ್ನು ಸಾತ್ವಿಕರೂ ದೇವಭಕ್ತರೂ ಆಗಿ ಮಾರ್ಪಡಿಸಲಿಕ್ಕೆ ಶ್ರಮಿಸಬೇಕಾದುದು ಮುಸ್ಲಿಮನ ಕರ್ತವ್ಯವೆಂದು ಇಸ್ಲಾಂ ಉಪದೇಶಿಸಿದೆ. ಆದರೆ ದಾಂಪತ್ಯ ಸಂಬಂಧ ಯಾವ ರೀತಿಯಲ್ಲಿದ್ದರೂ ಕೊನೆಗೊಳಿಸಬಾರದೆಂದು ಇತರ ಕೆಲವು ಧರ್ಮಗಳು ಅನುಶಾಸಿಸುವಂತೆ ಇಸ್ಲಾಂ ಉಪದೇಶಿಸುವುದಿಲ್ಲ. ಹಾಗೆ ಇಸ್ಲಾಂ ಬೋಧಿಸುವುದಾದರೆ ಅದರ ಅಧ್ಯಾಪನಗಳು ಸಾರ್ವಲೌಕಿಕವೂ ಸುಗಮವೂ ಎಂದು ಹೇಳಲಸದಳ. ಅದೇ ಪ್ರಕಾರವೇ ದಾಂಪತ್ಯ ಸಂಬಂಧ ಅಂತ್ಯಗೊಳ್ಳದಿರಲಿಕ್ಕೂ ಪರಲೋಕದಲ್ಲಿ ಅದನ್ನು ನೆಲೆನಿಲ್ಲಿಸಲಿಕ್ಕೂ ಅವರಿಗೆ ಸಂತಾನ ಉಂಟಾಗಿರಬೇಕೆಂದಾಗಲಿ, ಸಂತಾನವಿಲ್ಲದಿದ್ದರೆ "ಸ್ವರ್ಗಸ್ಥನಾದ ಪತಿಯ ಆತ್ಮಮುಕ್ತಿಗಾಗಿ" ಪತ್ನಿ ಯಾರಾನ್ನಾದರೂ ದತ್ತು ಸ್ವೀಕರಿಸಬೇಕೆಂದಾಗಲಿ, ಅಥವಾ ಪತ್ನಿಯು ನಿಯೋಗ ಕ್ರಮ ಪ್ರಕಾರ ಅನ್ಯ ಪುರುಷರಿಂದ ಸಂತಾನೋತ್ಪಾದನೆ ಮಾಡಿಕೊಳ್ಳಬೇಕೆಂದಾಗಲಿ ಇಸ್ಲಾಂ ಬೋಧಿಸುವುದಿಲ್ಲ. ಪತಿ-ಪತ್ನಿಯರು ಸತ್ಯವಿಶ್ವಾಸಿಗಳೂ ಸಾತ್ವಿಕರೂ ಆಗಿ ಪರಿವರ್ತಿತರಾಗಿ ಅವರು ತಮ್ಮ ದಾಂಪತ್ಯ ಸಂಬಂಧವನ್ನು ಮುರಿಯದಿದ್ದ ಪಕ್ಷದಲ್ಲಿ ಪರಲೋಕ ಜೀವಿತದಲ್ಲೂ ಅವರಿಗೆ ತಮ್ಮ ಆ ಸಂಬಂಧವನ್ನು ಆಧ್ಯಾತ್ಮಿಕವಾಗಿ ಮುಂದುವರಿಸಿಕೊಂಡು ಹೋಗಬಹುದೆಂದು ಇಸ್ಲಾಂ ಕಲಿಸುತ್ತದೆ.

ಸಂಕ್ಷಿಪ್ತವಾಗಿ ಹೇಳುವುದಾದರೆ, ದಾಂಪತ್ಯ ಜೀವಿತವನ್ನು ಮುಂದುವರಿಸಿಕೊಂಡು ಹೋಗಲು ಪ್ರಯಾಸಕರವಾದ ಕೆಲವು ತೊಡಕುಗಳು ದಂಪತಿಗಳೆಡೆಯಲ್ಲಿ ಸಂಭವಿಸಬಹುದಾದ್ದರಿಂದ, ಅವರನ್ನು ದುರಿತಪೂರ್ಣ ಜೀವಿತದಿಂದ ರಕ್ಷಿಸಲಿಕ್ಕೆ ವಿವಾಹ ವಿಚ್ಛೇದನ ಮಾಡಬಹುದೆಂದು ಇಸ್ಲಾಂ ಸಮ್ಮತಿಸುತ್ತದೆ. ಹಾಗೆ ಅದಕ್ಕೆ ಸಮ್ಮತಿ ನೀಡದಿದ್ದರೆ ಅದರ ಅಧ್ಯಾಪನ ಸಾರ್ವಲೌಕಿಕವೂ ಸುಗಮವೂ ಎಂದು ಗಣಿಸಲ್ಪಡಲಿಕ್ಕಿಲ್ಲ. ಮಾತ್ರವಲ್ಲ ವಿವಾಹ ವಿಚ್ಛೇದನ ಸಲ್ಲದೆಂದು ಅನುಶಾಸಿಸುವ ಧರ್ಮಗಳ ಅನುಯಾಯಿಗಳಂತೆ ಮುಸ್ಲಿಮರು ಸಹ ಹೊಸ ನಿಯಮ ನಿರ್ಮಾಣ ಮೂಲಕ ವಿವಾಹ ವಿಚ್ಛೇದನವನ್ನು ಸಿಂಧುಗೊಳಿಸಲು ಶ್ರಮಿಸಬೇಕಾದೀತು. ಇಸ್ಲಾಂ ವಿವಾಹ ವಿಚ್ಛೇದವನ್ನು ಒಪ್ಪುವುದಾದರೂ ಮುಸ್ಲಿಮರಲ್ಲಿ ನಡೆಯುವ ಮದುವೆಗಳಲ್ಲಿ 99 ಶೇಕಡ ನಿರ್ವಿಘ್ನವಾಗಿ ಮುಂದುವರಿದುಕೊಂಡು ಹೋಗುತ್ತದೆ. ಇದಕ್ಕೆ ವಿರುದ್ಧವಾಗಿ, ವಿವಾಹ ವಿಚ್ಛೇದನ ಸಲ್ಲದೆಂದು ಅನುಶಾಸಿಸುವ ಧರ್ಮಗಳ ಅನುಯಾಯಿಗಳಲ್ಲಿ ವಿವಾಹ ವಿಚ್ಛೇದನ ಮುಸ್ಲಿಮರೆಡೆಯಲ್ಲಿರುವುದಕ್ಕಿಂತ ಕಮ್ಮಿಯಲ್ಲ, ಹೆಚ್ಚೇ ಇದೆಯೆಂದು ಹೇಳಿದರೆ ಅದು ತಪ್ಪೆನಿಸದು. ಇದರಿಂದ, ಇಸ್ಲಾಮಿಕ ವಿಧಿಯ ಪ್ರಾಯೋಗಿಕತೆಯೂ ಆವಶ್ಯಕತೆಯೂ ಎಷ್ಟರ ಮಟ್ಟಿಗಿದೆಯೆಂದು ಮನಗಾಣಬಹುದು.

❖❖❖❖❖❖❖

*Read*

**The Review of Religions**

Annual Subscription Rs. 100/-
Write to : The Manager
The Review of Religions,
Qadian - 143516 (Punjab)

*Read*

**BADR**
Urdu Weekly

Annual Subscription : Rs. 200/-
Write to: The Manager
The Weekly BADR
Qadian - 143516 (Punjab)

# ಪವಿತ್ರ ಖುರ್‌ಆನಿನ ಪ್ರಕಾಶದಲ್ಲಿ
# ಹಝ್ರತ್ ಈಸಾನಬಿಯ ಜೀವಿತ ಮತ್ತು ಮರಣ

✠ ಮೌಲವಿ ಯು. ಅಬೂಬಕರ್

*ಮುಸ್ಲಿಮರೆಡೆಯಲ್ಲಿ ತಪ್ಪಾದ ಒಂದು ವಿಶ್ವಾಸವು ಬಹಳವಾಗಿ ಪ್ರಚರಿಸಲ್ಪಡುತ್ತಿದೆ. ಸುಮಾರು ಎರಡು ಸಾವಿರ ವರ್ಷಗಳಿಗೆ ಮುಂಚೆ ಬನೀ ಇಸ್ರಾಈಲರಿಗೆ ಪ್ರವಾದಿಯಾಗಿ ಬಂದ ಈಸಾನಬಿ ಅಲೈಹಿಸ್ಸಲಾಂ ಈಗಲೂ ಮೃತಪಡದೆ ಆಕಾಶದಲ್ಲಿ ಜೀವಿಸುತ್ತಿರುವರೆಂಧೂ ಅಂತ್ಯ ಕಾಲದಲ್ಲಿ ಅವರೇ ಆಕಾಶದಿಂದ ಇಳಿದು ಬರುವರೆಂಬುದೂ ಆ ವಿಶ್ವಾಸವಾಗಿದೆ. ಈ ತಪ್ಪಾದ ವಿಶ್ವಾಸವನ್ನು ಖುರ್‌ಆನ್‌ನಿಂದಾಗಲೀ ಹದೀಸಿನಿಂದಾಗಲೀ ಸತ್ಯಪಡಿಸಲು ಎಂದಿಗೂ ಸಾಧ್ಯವಿಲ್ಲವೆಂದು ಧೈರ್ಯದಿಂದ ಹೇಳಬಹುದು. ಮುಸ್ಲಿಮರೆಡೆಯಲ್ಲಿರುವ ಈ ತಪ್ಪಾದ ವಿಶ್ವಾಸವು ಶತ್ರುಗಳು ಇಸ್ಲಾಮನ್ನು ಬಹಳವಾಗಿ ಅವಹೇಳನ ಮಾಡಲೂ ಕ್ರೈಸ್ತ ಮತ ಪ್ರಚಾರಕ್ಕೆ ಒಂದು ಆಯುಧವಾಗಿಯೂ ಪ್ರಯೋಗಿಸಲ್ಪಡುತ್ತದೆ.*

*ಈ ಲೇಖನದಲ್ಲಿ ಖುರ್‌ಆನಿನಲ್ಲಿರುವ ಸಾಕ್ಷ್ಯಗಳನ್ನು ಮಾತ್ರವೇ ಕೊಡಲಾಗಿದೆ. ಆದರೆ ಈಸಾನಬಿಯ ಮರಣವನ್ನು ಹದೀಸುಗಳಿಂದಲೂ ರುಜುಪಡಿಸಲು ಸಾಧ್ಯವಿದೆ. ಅಹ್ಮದಿಯಾ ಮುಸ್ಲಿಂ ಜಮಾಅತಿನ ಸ್ಥಾಪಕರಾದ ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್ ಅಲೈಹಿಸ್ಸಲಾಂ ಪವಿತ್ರ ಖುರ್‌ಆನಿನ ಮೂವತ್ತಮೂರು ಆಯತುಗಳಿಂದ ಈಸಾನಬಿಯ ಮರಣವನ್ನು ಸಮರ್ಥಿಸಿರುವರು.*

*ಈಸಾನಬಿ(ಅ.) ಮೃತಪಟ್ಟಿರುವರೆಂದು ಹೇಳಿದ ಕಾರಣದಿಂದಾಗಿಯೇ ಅಹ್ಮದಿಯಾ ಜಮಾಅತಿನ ಸ್ಥಾಪಕರ ಎದುರಾಗಿ ವಿರೋಧದ ಬಿರುಗಾಳಿಯು ಪ್ರಥಮವಾಗಿ ಬೀಸಲು ತೊಡಗಿದ್ದು. ಆದರೆ ಈಗ ಪರಿಸ್ಥಿತಿಯು ಬದಲಾಗಿದೆ. ಇಂದು ಅನೇಕ ಚಿಂತನ ಶೀಲರು ಅಹ್ಮದಿಯರಂತೆಯೇ ಈಸಾನಬಿ(ಅ.) ಮೃತಪಟ್ಟಿರುವರೆಂದು ಬಹಿರಂಗವಾಗಿ ಹೇಳಲು ತೊಡಗಿರುವರು. ವಿಶ್ವ ವಿಖ್ಯಾತ ಮಿಸ್ರ್‌ನ ಜಾಮಿಅ ಅಝ್‌ಹರಿಯದಿಂದ ಈಸಾನಬಿ(ಅ.) ಮೃತಪಟ್ಟಿರುವರೆಂಬ ಫತ್ವ ಹೊರಡಿಸಲ್ಪಟ್ಟಿದೆ. ಕೆಲವು ವರ್ಷಗಳ ಹಿಂದೆ, ವಿಶ್ವ ಮುಸ್ಲಿಮ್ ಸಂಘಟನೆಯಾದ 'ಅರ್‍ರಾಬಿತತುಲ್ ಆಲಮಿಲ್ ಇಸ್ಲಾಮಿಯ'ದ ವತಿಯಿಂದ ಮದೀನದಲ್ಲಿ ಪ್ರಕಟಿಸಲಾದ ಖುರ್‌ಆನಿನ ಇಂಗ್ಲಿಷ್ ಭಾಷಾಂತರದಲ್ಲಿಯೂ ಈಸಾನಬಿ(ಅ.) ಮೃತಪಟ್ಟಿರುವರೆಂದು ಸ್ಪಷ್ಟವಾಗಿ ಉಲ್ಲೇಖಿಸಲಾಗಿದೆ.*

ಸುಮಾರು ಎರಡು ಸಾವಿರ ವರ್ಷಗಳಿಗೆ ಮುಂಚೆ ಬನೀ ಇಸ್ರಾಈಲರಲ್ಲಿ ಜನಿಸಿದ ಹಝ್ರತ್ ಈಸಾನಬಿ ಅಲೈಹಿಸ್ಸಲಾಮ್ ಈಗಲೂ ಸ್ಥೂಲ ಶರೀರದಿಂದೊಡಗೂಡಿ ಆಕಾಶದಲ್ಲಿ ಜೀವಿಸುತ್ತಿರುವರೆಂಬ ತಪ್ಪಾದ ವಿಶ್ವಾಸವು ಮುಸ್ಲಿಮರಲ್ಲಿ ಪ್ರಚಾರಗೊಂಡಿರುವುದು ಅತಿ ಅಸಂಬದ್ಧವಾಗಿದೆ. ಈ ವಿಶ್ವಾಸವು ಪರಿಶುದ್ಧ ಇಸ್ಲಾಮಿನ ಸ್ಪಷ್ಟವಾದ ಪಾಠಗಳಿಗೆ ಸಂಪೂರ್ಣ ವಿರುದ್ಧವಾಗಿದೆ ಎಂಬುದನ್ನು ಅವರು ತಿಳಿಯದೆ ಇರುವುದು ತುಂಬಾ ಖೇದಕರ.

ವ್ಯಕ್ತಿಪರವೂ ಸಾಮೂಹಿಕವೂ ಸಾಮುದಾಯಿಕವೂ ಧಾರ್ಮಿಕವೂ ಸಾರ್ವಲೌಕಿಕವೂ ಆದ ಎಲ್ಲ ವಿಷಯಗಳ ಕುರಿತು ಪವಿತ್ರ ಖುರ್‌ಆನ್ ಮಾರ್ಗದರ್ಶನವನ್ನೀಯುತ್ತದೆ. ಆದುದರಿಂದ ನಾವು ಎಲ್ಲ ಸಂಗತಿಗಳಲ್ಲೂ ಪವಿತ್ರ ಖುರ್‌ಆನನ್ನು ಪ್ರಮಾಣವಾಗಿ ಸ್ವೀಕರಿಸಬೇಕಾಗಿದೆ. ಪವಿತ್ರ ಖುರ್‌ಆನ್ ಹೀಗೆನ್ನುತ್ತದೆ: "ಅಲ್ಲಾಹು ಅವತೀರ್ಣಗೊಳಿಸಿದುದರ (ಎಂದರೆ ಖುರ್‌ಆನಿನ) ಅನುಸಾರವಾಗಿ ಯಾರು ತೀರ್ಮಾನ ಕೈಗೊಳ್ಳುವುದಿಲ್ಲವೋ ಅವರೇ ಅವಿಶ್ವಾಸಿಗಳು."(5:45) ಮತ್ತೊಂದೆಡೆಯಲ್ಲಿ: "ಅಲ್ಲಾಹು ಅವತೀರ್ಣಗೊಳಿಸಿದುದರ (ಎಂದರೆ ಖುರ್‌ಆನಿನ) ಅನುಸಾರವಾಗಿ ಯಾರು ತೀರ್ಮಾನ ಕೈಗೊಳ್ಳುವುದಿಲ್ಲವೋ ಅವರೇ ದುಷ್ಕರ್ಮಿಗಳು."(5:46)

ಇನ್ನೊಂದೆಡೆಯಲ್ಲಿ: "ಅಲ್ಲಾಹು ಅವತೀರ್ಣಗೊಳಿಸಿದುದರ (ಎಂದರೆ ಖುರ್‌ಆನಿನ) ಅನುಸಾರವಾಗಿ ಯಾರು ತೀರ್ಮಾನ ಕೈಗೊಳ್ಳುವುದಿಲ್ಲವೋ ಅವರೇ ಅಜ್ಞೋಲ್ಲಂಘಕರು" (5:48)ಎಂದು ಹೇಳಲಾಗಿದೆ. .

ಆದುದರಿಂದ ಈಸಾನಬಿ ಅಲೈಹಿಸ್ಸಲಾಮರ ಜೀವಿತ ಮತ್ತು ಮರಣ ಕುರಿತು ಖುರ್‌ಆನ್ ಏನನ್ನು ಕಲಿಸುತ್ತದೆಯೆಂದು ನೋಡುವುದು ನಮ್ಮ ಕರ್ತವ್ಯವಾಗಿದೆ.

### ಈಸಾನಬಿ(ಅ.) ಒಬ್ಬ ಪ್ರವಾದಿ

ಈಸಾನಬಿ(ಅ.) ಇತರ ನಬಿಗಳಂತೆ ಅಲ್ಲಾಹನ ಒಬ್ಬ ಪ್ರವಾದಿಯಾಗಿದ್ದರೆಂದೂ ಅವರಿಗೆ ಅವರ ಹಿಂದಿನ ನಬಿಗಳಿಗಿಂತ ಶ್ರೇಷ್ಠತೆ

ಇರಲಿಲ್ಲವೆಂದೂ ಪವಿತ್ರ ಖುರ್‌ಆನ್ ನಮಗೆ ಬೋಧಿಸುತ್ತದೆ. ಪವಿತ್ರ ಖುರ್‌ಆನ್ ಹೀಗೆನ್ನುತ್ತದೆ: "ಮಸೀಹುಬ್ನು ಮರ್‌ಯಂ ಒಬ್ಬ ರಸೂಲ್ (ಸಂದೇಶವಾಹಕ) ಮಾತ್ರವಾಗಿದ್ದಾರೆ."(5:76)

ಮತ್ತೊಂದೆಡೆಯಲ್ಲಿ: "ಈಸಬ್ನು ಮರ್‌ಯಂ ಹೇಳಿದ್ದನ್ನು ಜ್ಞಾಪಿಸಿರಿ- 'ಎಲೈ ಇಸ್ರಾಈಲ್ ಸಂತತಿಗಳೇ, ನಾನು ನಿಮಗೋಸ್ಕರವಿರುವ ಒಬ್ಬ ರಸೂಲ್ ಆಗಿದ್ದೇನೆ." (61:7)

ಇನ್ನೊಂದೆಡೆಯಲ್ಲಿ ಈಸಾನಬಿಯ(ಅ.) ಕುರಿತು: "ಇಸ್ರಾಈಲ್ ಸಂತತಿಗಳಿಗಿರುವ ಒಬ್ಬ ರಸೂಲ್" ಎಂದು ಪವಿತ್ರ ಖುರ್‌ಆನಿನಲ್ಲಿ (3:50) ಹೇಳಲಾಗಿದೆ.

ಹೀಗೆ ಪವಿತ್ರ ಖುರ್‌ಆನಿನ ಹಲವೆಡೆಗಳಲ್ಲಿ ಹಝ್ರತ್ ಈಸಾನಬಿ(ಅ.) ಒಬ್ಬ ರಸೂಲ್ (ಸಂದೇಶ ವಾಹಕ ಅಥವಾ ಪ್ರವಾದಿ) ಮಾತ್ರವಾಗಿದ್ದರೆಂದು ವ್ಯಕ್ತವಾಗಿ ಕಂಡು ಬರುತ್ತದೆ.

## ಪ್ರವಾದಿಗಳೆಲ್ಲರೂ ಮನುಷ್ಯರಾಗಿದ್ದರು

ಎಲ್ಲ ಪ್ರವಾದಿಗಳೂ ಮನುಷ್ಯರಲ್ಲದೆ ಬೇರೆ ಯಾರೂ ಆಗಿರಲಿಲ್ಲವೆಂದು ಪವಿತ್ರ ಖುರ್‌ಆನ್ ಹಲವೆಡೆಗಳಲ್ಲಿ ಬಹಳ ಸ್ಪಷ್ಟವಾಗಿ ಪ್ರಸ್ತಾಪಿಸಿದೆ. ಪರಿಶುದ್ಧ ಗ್ರಂಥದಲ್ಲಿ ಅಲ್ಲಾಹು ಹೀಗೆನ್ನುತ್ತಾನೆ: "ನಾವು ನಿನಗೆ [ಮುಹಮ್ಮದ್ ನಬಿಗೆ(ಸ)] ಮೊದಲು ಪುರುಷರಾದ ರಸೂಲರನ್ನು ಮಾತ್ರವೇ ನಿಯೋಜಿಸಿರುವೆವು." (21:8)

ಆದುದರಿಂದ ಹಝ್ರತ್ ಈಸಾನಬಿಯನ್ನು ಪ್ರವಾದಿಯೆಂದು ನಾವು ನಂಬುವುದರೊಂದಿಗೆ ಅವರನ್ನು ಒಬ್ಬ ಮನುಷ್ಯನೆಂದು ಸಹ ನಂಬಲು ನಿರ್ಬಂಧಿತರಾಗಿದ್ದೇವೆ. "ಅಲ್ಲಾಹುವಿನ ಹತ್ತಿರ ಈಸಾರ ಸ್ಥಿತಿ ಆದಮರ ಸ್ಥಿತಿಯಂತೆ ಆಗಿದೆ. ಆದಮರನ್ನು ಅವನು (ಅಲ್ಲಾಹು) ಮಣ್ಣಿನಿಂದ ಸೃಷ್ಟಿಸಿದನು."(3:60)

## ಈಸಾನಬಿ(ಅ.) ಮನುಷ್ಯ ಸಹಜವಾಗಿ ಮೃತರಾಗಿರುವರು

ಮನುಷ್ಯನಾದ ಪ್ರತಿಯೋರ್ವನಿಗೂ ಅಲ್ಲಾಹು ಮರಣವನ್ನು ನಿಶ್ಚಯಿಸಿರುವನು. ಆ ಬಗ್ಗೆ ಪವಿತ್ರ ಖುರ್‌ಆನ್ ಹೀಗೆನ್ನುತ್ತದೆ: "ಪ್ರತಿಯೊಂದು ಜೀವಿಯು ಮರಣದ ರುಚಿಯನ್ನು ಅನುಭವಿಸಬೇಕಾಗಿದೆ." (21:36)

ಇನ್ನೊಂದೆಡೆಯಲ್ಲಿ: "ಅವನು (ಅಲ್ಲಾಹು) ಅವನನ್ನು (ಮನುಷ್ಯನನ್ನು) ಮೃತಪಡಿಸುತ್ತಾನೆ." (80:22)

ಮತ್ತೊಂದೆಡೆಯಲ್ಲಿ: "ನಿನಗಿಂತ [ಮುಹಮ್ಮದ್ ಪೈಗಂಬರ್(ಸ)ರಿಗಿಂತ] ಮುಂಚೆ ಯಾವೊಬ್ಬ ಮನುಷ್ಯನಿಗೂ ನಾವು ನಿತ್ಯಜೀವನವನ್ನು (ಪ್ರಕೃತಿ ವಿರುದ್ಧವಾದ ದೀರ್ಘಾಯುಸ್ಸನ್ನು) ಕೊಟ್ಟಿಲ್ಲ. ಏನು ನೀನು ಮೃತಪಟ್ಟು, ಅವರು ಚಿರಂಜೀವಿಗಳಾಗುವರೋ?" (21:35)

ಜೀವನವನ್ನು ಸಾಗಿಸಲೂ ಮರಣವನ್ನು ಪಡೆಯಲೂ ಅಲ್ಲಾಹು ಎಲ್ಲ ಮನುಷ್ಯರಿಗೂ ನಿಶ್ಚಯಿಸಿದ ಸ್ಥಳವು ಈ ಭೂಮಿಯಾಗಿದೆ. ಅಲ್ಲಾಹು ಹೀಗೆನ್ನುತ್ತಾನೆ: "ನಿಮಗೆ ಒಂದು ನಿಶ್ಚಿತ ಕಾಲದ ವರೆಗೆ ಈ ಭೂಮಿಯಲ್ಲೇ ವಾಸ ಸ್ಥಳವೂ ಆಹಾರ ಸಾಮಗ್ರಿಗಳೂ ಇವೆ." (2:37)

ಇನ್ನೊಂದೆಡೆಯಲ್ಲಿ: "ನೀವು ಅದರಲ್ಲೇ (ಭೂಮಿಯಲ್ಲೇ) ಜೀವಿಸುವಿರಿ. ಅದರಲ್ಲೇ ಮರಣವನ್ನು ಪಡೆಯುವಿರಿ; ಅದರಿಂದಲೇ ಎಬ್ಬಿಸಲ್ಪಡುವಿರಿ." (7:26) ಎಂದು ಅಲ್ಲಾಹು ತನ್ನ ನಿಯಮವನ್ನು ವ್ಯಕ್ತಗೊಳಿಸಿರುವನು.

ಪ್ರತಿಯೊಬ್ಬ ಮನುಷ್ಯನೂ ಪ್ರಾಯವಾದಂತೆ ದೇಹವೂ ರೂಪವೂ ವ್ಯತ್ಯಾಸಗೊಂಡ ಅವಸ್ಥೆಯನ್ನು ಪಡೆಯಬೇಕಾಗುವುದೆಂಬುದು ಸಹ ಅಲ್ಲಾಹು ನಿಶ್ಚಯಿಸಿದ ನಿಯಮವಾಗಿದೆ. "ಅಲ್ಲಾಹು ನಿಮ್ಮನ್ನು ದುರ್ಬಲಾವಸ್ಥೆಯಲ್ಲಿ ಸೃಷ್ಟಿಸಿ, ದುರ್ಬಲತೆಯ ನಂತರ ನಿಮಗೆ ಶಕ್ತಿಯನ್ನುಕೊಟ್ಟು, ಪುನಃ ಶಕ್ತಿಯ ನಂತರ ದುರ್ಬಲತೆಯನ್ನೂ ವೃದ್ಧಾಪ್ಯವನ್ನೂ ನಿಮ್ಮಲ್ಲಿ ಉಂಟುಮಾಡುವವನಾಗಿದ್ದಾನೆ" ಎಂದು ಪವಿತ್ರ ಖುರ್‌ಆನಿನಲ್ಲಿ (30:55) ಉಲ್ಲೇಖಿಸಲ್ಪಟ್ಟಿದೆ. ಇನ್ನೊಂದೆಡೆಯಲ್ಲಿ: "ಅಲ್ಲಾಹು ನಿಮ್ಮನ್ನು ಸೃಷ್ಟಿಸಿದನು; ಅನಂತರ ನಿಮ್ಮನ್ನು ಮೃತಪಡಿಸುವನು. ನಿಮ್ಮಲ್ಲಿ ಕೆಲವರು ಮುಪ್ಪನ್ನು ಪಡೆಯುವರು. ಆ ಕಾರಣದಿಂದ (ಮುಪ್ಪನ್ನು ಪಡೆದ ಕಾರಣದಿಂದ) ಅವರು ಹಿಂದೆ ಜ್ಞಾನಗಳಿಸಿದವರಾಗಿದ್ದರೂ ಅನಂತರ ಏನೂ ಅರಿವಿಲ್ಲದವರಂತಾಗುತ್ತಾರೆ" (16:71) ಎಂದು ಹೇಳಲಾಗಿದೆ. ಈಸಾ ಅಲೈಹಿಸ್ಸಲಾಮ್ ಈಗಲೂ ಜೀವಿಸಿರುವರೆಂದು ನಂಬುವವರು ಈ ವಚನವನ್ನು ಮುಖ್ಯವಾಗಿ ಗಮನಿಸಬೇಕಾಗಿದೆ.

ಸಂಕ್ಷಿಪ್ತವಾಗಿ, ಈಸಾನಬಿಯನ್ನು ಒಬ್ಬ ಮನುಷ್ಯನೆಂಬ ನೆಲೆಯಲ್ಲಿ ವೀಕ್ಷಿಸುವಾಗ ಅವರು ಮರಣವನ್ನು ಪಡೆದಿರುವುದು ಸ್ಪಷ್ಟವಾಗುತ್ತದೆ. ಅಲ್ಲದೆ ಪ್ರಕೃತಿ ವಿರುದ್ಧವಾದ ದೀರ್ಘಾಯುಸ್ಸು ಅವರಿಗೆ ಸಿದ್ಧಿಸಲು ಸಾಧ್ಯವಿಲ್ಲವೆಂದೂ ಭೂಮಿಯಲ್ಲೇ ಅವರು ಜೀವನವನ್ನು ಸಾಗಿಸಬೇಕೆಂದೂ ಹಾಗೆಯೇ ಭೂಮಿಯಲ್ಲೇ ಮರಣ ಹೊಂದಬೇಕೆಂದೂ ಪವಿತ್ರ ಖುರ್‌ಆನ್ ನಮಗೆ ಕಲಿಸುತ್ತದೆ.

## ಇತರ ಪ್ರವಾದಿಗಳಂತೆ ಈಸಾನಬಿ(ಅ.)

ಮಕ್ಕದ ಅವಿಶ್ವಾಸಿಗಳು ಹಝ್ರತ್ ಮುಹಮ್ಮದ್ ಪೈಗಂಬರರೊಡನೆ(ಸ) ಪ್ರವಾದಿತ್ವಕ್ಕೆ ಸಾಕ್ಷ್ಯವೆಂಬಂತೆ ಆಕಾಶಕ್ಕೇರಿ ಒಂದು ಲಿಖಿತ ಗ್ರಂಥ ಸಮೇತ ಇಳಿದು ಬರಬೇಕೆಂದು ಒತ್ತಾಯಪಡಿಸಿದರು. (ಸೂರಃ ಬನೀ ಇಸ್ರಾಈಲ್‌ನಲ್ಲಿ ಈ ಸಂಗತಿಯು ಪ್ರಸ್ತಾಪಿಸಲ್ಪಟ್ಟಿದೆ). ಅಲ್ಲಾಹುವಿನ ಆಜ್ಞೆಯನ್ನನುಸರಿಸಿ ಪೈಗಂಬರರು(ಸ) ಅವರಿಗೆ ಹೀಗೆ ಉತ್ತರನ್ನಿತ್ತರು: "ನನ್ನ ಪ್ರಭು ಪರಿಶುದ್ಧನು; ನಾನು ಮನುಷ್ಯನಾಗಿರುವ ಒಬ್ಬ ಪ್ರವಾದಿ ಮಾತ್ರವಾಗಿದ್ದೇನೆ" (17:94). ಆದುದರಿಂದ ಸ್ಥೂಲದೇಹದಿಂದೊಡಗೂಡಿ ಆಕಾಶಾರೋಹಣ ಮಾಡಲು ಮನುಷ್ಯನಾದ ಒಬ್ಬ ಪ್ರವಾದಿಗೆ ಸಾಧ್ಯವಿಲ್ಲವೆಂದು ಸ್ಪಷ್ಟವಾಗಿ ತಿಳಿಯುತ್ತದೆ.

ಪವಿತ್ರ ಖುರ್‌ಆನ್ ಹೀಗೆನ್ನುತ್ತದೆ: "ಮುಹಮ್ಮದ್ ಒಬ್ಬ ಸಂದೇಶ ವಾಹಕ ಮಾತ್ರವಾಗಿದ್ದಾರೆ; ಅವರಿಗೆ ಮುಂಚೆ ಇದ್ದ ಎಲ್ಲ ಸಂದೇಶ ವಾಹಕರೂ ಗತಿಸಿರುವರು" (3:145). ಇನ್ನೊಂದೆಡೆಯಲ್ಲಿ ಅಲ್ಲಾಹು ಹೀಗೆ ನುಡಿಯುತ್ತಾನೆ: "ಅವರಿಗೆ [ಮುಹಮ್ಮದ್ ಪೈಗಂಬರ(ಸ) ರಿಗೆ ಮುಂಚೆ ಇದ್ದ ಪ್ರವಾದಿಗಳಿಗೆ] ಯಾರಿಗೂ ನಾವು, ಉಣ್ಣದಿರುವಂತಹ ಮತ್ತು ಅಸಾಮಾನ್ಯ ದೀರ್ಘಾಯುಸ್ಸು ಇರುವ ಶರೀರವನ್ನು ಕೊಟ್ಟಿಲ್ಲ."(21:9)

ಸಂಕ್ಷಿಪ್ತವಾಗಿ, ಒಬ್ಬ ಪ್ರವಾದಿ ಎಂಬ ನೆಲೆಯಲ್ಲಿ ಕೂಡ ಈಸಾನಬಿಯನ್ನು ವೀಕ್ಷಿಸುವಾಗ, ಅವರು ಮುಹಮ್ಮದ್ ಪೈಗಂಬರ(ಸ) ರಿಗೆ ಮುಂಚೆಯೇ ಮೃತಪಟ್ಟಿರುವರೆಂದು ಪವಿತ್ರ ಖುರ್‌ಆನ್ ನಮಗೆ ತಿಳಿಸಿಕೊಡುತ್ತದೆ. ಮಾತ್ರವಲ್ಲ, ಈಸಾನಬಿ(ಅ) ಸ್ಥೂಲದೇಹದಿಂದೊಡಗೂಡಿ ಆಕಾಶಾರೋಹಣ ಮಾಡಿರುವರೆಂಬ ಕ್ರೈಸ್ತರಿಂದ ಎರವಲು ಪಡೆದ ವಿಶ್ವಾಸವನ್ನು ಸರಿಯೆಂದು ಪವಿತ್ರ ಖುರ್‌ಆನ್ ಎಂದಿಗೂ ಒಪ್ಪುವುದಿಲ್ಲ.

## ಎಲ್ಲ ಮಿಥ್ಯದೈವಗಳು ಮೃತವಾಗಿವೆ

ಮುಶ್‌ರಿಕುಗಳು (ಬಹುದೈವಾರಾಧಕರು) ಅಲ್ಲಾಹುವನ್ನಲ್ಲದೆ ಇತರ ಸೃಷ್ಟಿಗಳನ್ನೂ ಇಲಾಹು (ದೈವ)ಗಳನ್ನಾಗಿ ಪರಿಗಣಿಸಿ ಅವರೊಡನೆ ಪ್ರಾರ್ಥಿಸುತ್ತಿರುವುದು ಎಲ್ಲರೂ ತಿಳಿದಿರುವ ಸಂಗತಿಯಷ್ಟೇ. ಕ್ರೈಸ್ತರು ಸಹ ಈಸಾನಬಿಯನ್ನು ದೇವರೆಂದು ಗಣಿಸಿ ಅವರೊಡನೆ ಪ್ರಾರ್ಥಿಸುತ್ತಿರುವರು. ಪವಿತ್ರ ಖುರ್‌ಆನ್ ನಮಗೆ ಈ ವಿಷಯವನ್ನು ಸ್ಪಷ್ಟವಾಗಿ ತೋರಿಸಿಕೊಟ್ಟಿರುವುದನ್ನು ನೋಡಿರಿ:

"ಮಸೀಹುಬ್ನು ಮರ್‌ಯಮನ್ನು ಅಲ್ಲಾಹು ಎಂದು ಹೇಳುವವರು ಖಂಡಿತವಾಗಿಯೂ ಅವಿಶ್ವಾಸಿಗಳಾಗಿದ್ದಾರೆ." (5:18)

ಕರೆದು ಪ್ರಾರ್ಥಿಸಲ್ಪಡುವ ಎಲ್ಲ ಮಿಥ್ಯ ದೈವಗಳೂ ಮೃತವೆಂದು ಪವಿತ್ರ ಖುರ್‌ಆನ್ ಸುಸ್ಪಷ್ಟವಾಗಿ ಬೋಧಿಸುತ್ತದೆ. ಅದು ಹೀಗೆನ್ನುತ್ತದೆ: "ಅಲ್ಲಾಹುವಿನ ಹೊರತು ಕರೆದು ಪ್ರಾರ್ಥಿಸಲ್ಪಡುವವರಿಗೆ ಏನನ್ನೂ ಸೃಷ್ಟಿಸಲು ಸಾಧ್ಯವಿಲ್ಲ; ಅವರೇ ಸೃಷ್ಟಿಸಲ್ಪಟ್ಟವರಾಗಿದ್ದಾರೆ. **ಅವರು ಮೃತ ಪಟ್ಟವರು; ಅವರು ಜೀವಂತರಲ್ಲ.** ಯಾವಾಗ ಅವರು ಎಬ್ಬಿಸಲ್ಪಡುವರೆಂಬುದು ಕೂಡ ಅವರಿಗೆ ಗೊತ್ತಿಲ್ಲ."(16:22,22)

ಆರಾಧಿಸಿ ಪ್ರಾರ್ಥಿಸಲ್ಪಡುವ ಎಲ್ಲ ಮಿಥ್ಯ ದೈವಗಳು ಮೃತ ಹಾಗೂ ಜೀವಂತವಲ್ಲ ಎಂದಲ್ಲವೇ ಈ ಪವಿತ್ರ ವಾಕ್ಯವು ನಮಗೆ ಕಲಿಸಿಕೊಡುವುದು? ಈ ಲೋಕದಲ್ಲಿರುವ ಕೋಟಿಗಟ್ಟಲೆ ಕ್ರೈಸ್ತರು ಈಸಾನಬಿಯನ್ನು ಆರಾಧಿಸಿ, ಕರೆದು ಪ್ರಾರ್ಥಿಸಲ್ಪಡುವ ಒಂದು ದೈವವನ್ನಾಗಿಯಲ್ಲವೇ ಮಾಡಿರುವುದು? ಆ ನೆಲೆಯಲ್ಲಿ ಈಸಾನಬಿ(ಅ) ಮೃತಪಟ್ಟಿರುವರು ಎಂದಲ್ಲವೇ ಪವಿತ್ರ ಖುರ್‌ಆನಿನ ಮೇಲಿನ ವಾಕ್ಯ ನಮಗೆ ತಿಳಿಸಿಕೊಡುವುದು?

## ಈಸಾನಬಿಯ(ಅ.) ಮರಣದ ಕುರಿತು ಖುರ್‌ಆನಿನಲ್ಲಿ ಸ್ಪಷ್ಟವಾದ ನಿರೂಪಣೆ

ಹಝ್ರತ್ ಈಸಾನಬಿಯ ಹೆಸರನ್ನೆತ್ತಿ ಪ್ರಸ್ತಾಪಿಸುತ್ತಾ ಪವಿತ್ರ ಖುರ್‌ಆನ್ ಅವರ ಮರಣವನ್ನು ದೃಢೀಕರಿಸಿರುವುದನ್ನು ಈ ಕೆಳಗಿನ ವಚನಗಳಿಂದ ತಿಳಿಯಬಹುದು:

1. "ಮುಹಮ್ಮದ್ ಒಬ್ಬ ಪ್ರವಾದಿ ಮಾತ್ರವಾಗಿದ್ದಾರೆ; ಅವರಿಗೆ ಮುಂಚೆ ಇದ್ದ ಎಲ್ಲ ಪ್ರವಾದಿಗಳು ಮರಣ ಹೊಂದಿರುವರು." (3:145)
2. "ಮಸೀಹುಬ್ನು ಮರ್‌ಯಂ ಒಬ್ಬ ರಸೂಲ್ ಮಾತ್ರವಾಗಿದ್ದರು; ಅವರಿಗೆ ಮುಂಚೆ ಇದ್ದ ಎಲ್ಲ ರಸೂಲರೂ ಗತಿಸಿರುವರು. ಅವರ ತಾಯಿ ಸತ್ಯವತಿಯಾಗಿದ್ದರು. ಅವರಿಬ್ಬರೂ ಉಣ್ಣುತ್ತಿದ್ದರು." (5:76)

**ಈ ವಚನಗಳು ನಮಗೆ ಮೂರು ಸಂಗತಿಗಳನ್ನು ತಿಳಿಸಿಕೊಡುತ್ತವೆ:**

1. ಹಝ್ರತ್ ಈಸಾನಬಿ(ಅ.) ಕೂಡ ಮೊದಲು ಗತಿಸಿದ ಪ್ರವಾದಿಗಳ ಹಾಗೆಯೇ ಮರಣ ಹೊಂದಿರುವರು.
2. ಅವರನ್ನು (ಈಸಾನಬಿಯನ್ನು) ಅವರ ಮಾತೆಯೊಂದಿಗೆ ಪ್ರಸ್ತಾಪಿಸಿರುವುದರಿಂದ ಅವರು (ಈಸಾನಬಿ) ಒಬ್ಬ ಮನುಷ್ಯರಾಗಿದ್ದರೆಂದು ಸಹ ಅತ್ಯಂತ ಸ್ಪಷ್ಟವಾಗುತ್ತದೆ.
3. **ಇಬ್ಬರೂ (ಹಝ್ರತ್ ಈಸಾನಬಿ ಮತ್ತು ಅವರ ತಾಯಿ)** ಉಣ್ಣುತ್ತಿದ್ದರು" ಎಂದು ಭೂತಕಾಲ ಕ್ರಮದಲ್ಲಿ ಪವಿತ್ರ ಖುರ್‌ಆನ್ ಪ್ರಸ್ತಾಪಿಸುತ್ತಾ ಈಗ ಅವರು ಉಣ್ಣುವುದಿಲ್ಲವೆಂದು ತಿಳಿಸಿಕೊಡುತ್ತದೆ. ಆಹಾರವನ್ನು ಉಣ್ಣದೆ ಬದುಕುವ ದೇಹವನ್ನು ಯಾವೊಬ್ಬ ಪ್ರವಾದಿಗೂ ಕೊಡಲಿಲ್ಲವೆಂದು ಪವಿತ್ರ ಖುರ್‌ಆನ್ (21:9) ತಿಳಿಸಿಕೊಟ್ಟಿರುವುದರಿಂದ ಈಗ ಈಸಾನಬಿ(ಅ.) ಆಹಾರ ಪಾನೀಯವಿಲ್ಲದೆ ಸ್ಥೂಲ ದೇಹಸಹಿತ ಆಕಾಶದಲ್ಲಿ ವಾಸಿಸುತ್ತಿರುವರೆಂಬ ವಿಶ್ವಾಸವು ಸಂಪೂರ್ಣ ತಪ್ಪೆಂದು ಸ್ಪಷ್ಟವಾಗುತ್ತದೆ.

ಹಝ್ರತ್ ಈಸಾನಬಿಯ ಹೆಸರನ್ನೆತ್ತಿ ಅವರು ಮೃತಪಟ್ಟಿರುವರೆಂದು ವ್ಯಕ್ತಪಡಿಸುವ ಇನ್ನೊಂದು ಖುರ್‌ಆನ್ ವಾಕ್ಯವನ್ನು ನೋಡಿರಿ:

ಅಲ್ಲಾಹು ಈಸಾನಬಿಯನ್ನು ಸಂಬೋಧಿಸುತ್ತಾ ಹೀಗೆನ್ನುತ್ತಾನೆ: "ಎಲೈ ಈಸಾ, ನಿನ್ನನ್ನು ನಾನು ಮೃತಪಡಿಸುವೆನು ಮತ್ತು ನನ್ನೆಡೆಗೆ ಎತ್ತುವೆನು." (3:56)

ಅಲ್ಲಾಹು ಈಸಾನಬಿಯೊಡನೆ ಎರಡು ವಾಗ್ದಾನಗಳನ್ನು ಮಾಡಿರುವನೆಂದು ಈ ಆಯತಿನಿಂದ ನಮಗೆ ತಿಳಿದುಬರುತ್ತದೆ.

1. ಈಸಾನಬಿಯನ್ನು ಕೊಲ್ಲುವ ಪ್ರಯತ್ನದಲ್ಲಿ ಶತ್ರುಗಳನ್ನು ವಿಫಲರನ್ನಾಗಿ ಮಾಡಿ ಈಸಾನಬಿಯನ್ನು ಪ್ರಕೃತಿಗನುಸಾರವಾದ ರೀತಿಯಲ್ಲಿ ಮರಣಪಡಿಸುವುದು.
2. ಶತ್ರುಗಳಿಗೆ ಈಸಾನಬಿಯನ್ನು ಶಪಿಸಲ್ಪಟ್ಟವನೆಂದು ತುಚ್ಛೀಕರಿಸಲು

ಎಡೆಗೊಡದೆ ಈಸಾನಬಿಯ ಸ್ಥಾನವನ್ನು ಉಚ್ಚಮಟ್ಟಕ್ಕೇರಿಸುವುದು.

ಅಲ್ಲಾಹು ಮಾಡಿದ ಈ ಎರಡೂ ವಾಗ್ದಾನಗಳನ್ನು ಅವನು ನೆರವೇರಿಸಿರುವನೆಂದು ಪವಿತ್ರ ಖುರ್‌ಆನ್ ಬೇರೆಡೆಗಳಲ್ಲಿ ನಮಗೆ ತಿಳಿದುಕೊಡುತ್ತದೆ.

1. "ತವಫ್ಫೈತನೀ" [ನೀನು ನನ್ನನ್ನು (ಈಸಾನಬಿಯನ್ನು) ಮೃತಪಡಿಸಿದೆ.] (5:118)

2. "ಅವರನ್ನು (ಈಸಾನಬಿಯನ್ನು) ಅಲ್ಲಾಹು ತನ್ನೆಡೆಗೆ ಎತ್ತಿದನು." (4:159)

ಈಸಾನಬಿಯನ್ನು ಅಲ್ಲಾಹು ತನ್ನೆಡೆಗೆ ಎತ್ತಿದ ಎಂಬುದಕ್ಕೆ ಸ್ಥೂಲ ದೇಹಸಹಿತವಾಗಿಯೇ ಆಕಾಶಕ್ಕೆ ಎತ್ತುವುದು ಎಂಬರ್ಥವನ್ನು ಕೊಟ್ಟು, ಈಸಾನಬಿ(ಅ) ಸ್ಥೂಲ ದೇಹಸಹಿತ ಆಕಾಶಕ್ಕೆ ಎತ್ತಲ್ಪಟ್ಟಿರುವರೆಂದು ಇತರ ಮುಸ್ಲಿಮರು ನಂಬುತ್ತಿದ್ದಾರೆ. 'ರಫಅ' (ಎತ್ತಿದ) ಎಂಬ ಪದಕ್ಕೆ ಹಾಗೆ ಅರ್ಥವನ್ನು ಕೊಡುವುದು ಸರಿಯಲ್ಲ. ಪವಿತ್ರ ಖುರ್‌ಆನಿನಲ್ಲಿ ಬೇರೆ ಕೆಲವೆಡೆಗಳಲ್ಲಿಯೂ 'ರಫಅ' ಎಂಬ ಪದವು ಪ್ರಯೋಗಿಸಲ್ಪಟ್ಟಿದೆ. ಅಲ್ಲಿ ಪದವಿಯನ್ನು ಎತ್ತುವುದು, ಸ್ಥಾನವನ್ನು ಎತ್ತುವುದು, ಆತ್ಮವನ್ನು ಎತ್ತುವುದು, ಅಲ್ಲಾಹುವಿನ ಸಾಮಿಪ್ಯವನ್ನೀಯುವುದು ಎಂಬ ಅರ್ಥಸೂಚಕವಾಗಿ ಪ್ರಯೋಗಿಸಲಾಗಿದೆ. ನಾವು ನಮಾಝ್‌ನಲ್ಲಿ ದಿನನಿತ್ಯ "ಇರ್‌ಫಅ್‌ನೀ" (ನೀನು ನನ್ನನ್ನು ಮೇಲೆತ್ತು) ಎಂದು ಹಲವು ಸಲ ಪ್ರಾರ್ಥಿಸುತ್ತಿದ್ದೇವಲ್ಲವೇ? ಇಲ್ಲಿ "ನನ್ನನ್ನು ಸ್ಥೂಲದೇಹ ಸಹಿತ ಆಕಾಶಕ್ಕೆತ್ತು" ಎಂದು ಯಾರೂ ಅರ್ಥ ಕಲ್ಪಿಸುವುದಿಲ್ಲ. ಅದರ ಉದ್ದೇಶ "ನನ್ನ ಆತ್ಮವನ್ನು ಮೇಲೆತ್ತು", "ನನ್ನ ಪದವಿಯನ್ನು ಮೇಲೆತ್ತು", "ನಿನ್ನ ಸಾಮೀಪ್ಯವನ್ನು ದಯಪಾಲಿಸು" ಎಂದು ಮಾತ್ರವಾಗಿದೆ.

ಇದಲ್ಲದೆ ಮುಹಮ್ಮದ್ ಪೈಗಂಬರ್(ಸ) ನುಡಿದ ಹದೀಸಿನಲ್ಲಿ ಈ ರೀತಿ ಕಾಣುತ್ತದೆ: "ದಾಸನು (ಭಕ್ತನು) ವಿನಯವನ್ನು ತೋರಿಸಿದರೆ ಅಲ್ಲಾಹು ಅವನನ್ನು ಏಳನೆಯ ಆಕಾಶಕ್ಕೆ ಎತ್ತುವನು." (ಕನ್‌ಸುಲ್‌ಉಮ್ಮಾಲ್; ಜಿಲ್ದ್ 2). ವಿನಯವನ್ನು ತೋರಿಸುವ ದಾಸನನ್ನು ಅಲ್ಲಾಹು ಸ್ಥೂಲದೇಹ ಸಹಿತ ಆಕಾಶಕ್ಕೆತ್ತುವನೆಂದು ಈ ವಚನಕ್ಕೆ ಯಾರೂ ಅರ್ಥಕಲ್ಪಿಸುವುದಿಲ್ಲವಷ್ಟೇ. ಇಲ್ಲಿಯಾದರೆ ಆಕಾಶ ಎಂಬ ಒಂದು ಪದವು ಸಹ ಇದೆ. ಆದರೂ ಸ್ಥೂಲದೇಹ ಸಹಿತ ಆಕಾಶಕ್ಕೆತ್ತುವನೆಂದು ಅರ್ಥಕೊಡಲಾಗುವುದಿಲ್ಲ. ಹೀಗಿರುವಾಗ ಈಸಾನಬಿಯನ್ನು "ಅಲ್ಲಾಹು ತನ್ನೆಡೆಗೆ ಎತ್ತಿದನು" ಎಂದು ಹೇಳುವಾಗ, ಅವರ ಆತ್ಮವನ್ನು ಎತ್ತಿದನು, ಅವರ ಪದವಿಯನ್ನು ಎತ್ತಿದನು, ಅವರಿಗೆ ಅಲ್ಲಾಹು ತನ್ನ ಸಾಮೀಪ್ಯವನ್ನು ನೀಡಿದನು ಎಂಬ ಇತರೆಡೆಗಳಲ್ಲಿ ಕೊಡುವ ಅರ್ಥವನ್ನು ಕೊಡದೆ, ಅವರನ್ನು ಅಲ್ಲಾಹು ಸ್ಥೂಲದೇಹ ಸಹಿತ ಆಕಾಶಕ್ಕೆ ಎತ್ತಿದನು ಎಂಬರ್ಥವನ್ನು ಕಲ್ಪಿಸುವುದು ಎಷ್ಟು ವಿಚಿತ್ರವಾಗಿದೆ!

ಈಸಾನಬಿಯ ಮರಣದ ಕುರಿತು ಪವಿತ್ರ ಖುರ್‌ಆನ್ ಒಂದಡೆಯಲ್ಲಿ ಹೀಗೆನ್ನುತ್ತದೆ :

"ಎಲೈ ಮರ್ಯಮಳ ಮಗನಾದ ಈಸಾ, 'ನನ್ನನ್ನೂ ನನ್ನ ತಾಯಿಯನ್ನೂ ಅಲ್ಲಾಹನ ಹೊರತಾಗಿ ಇಬ್ಬರು ದೇವರುಗಳನ್ನಾಗಿ ಅಂಗೀಕರಿಸಿರಿ' ಎಂದು ನೀನು ಜನರೊಡನೆ ಹೇಳಿರುವಿಯೋ ಎಂದು ಅಲ್ಲಾಹು (ಪುನರುತ್ಥಾನ ದಿನದಂದು) ಪ್ರಶ್ನಿಸುವಾಗ ಅವರು ( ಈಸಾ) ಉತ್ತರ ಕೊಡುವರು : 'ನೀನು ಪರಿಶುದ್ಧನಾಗಿರುವೆ; ನನಗೆ ಅಧಿಕಾರವಿಲ್ಲದ ಒಂದು ಸಂಗತಿಯ ಕುರಿತು ನಾನು ಹೇಗೆ ಹೇಳಬಲ್ಲೆನು? ಅಥವಾ ನಾನು ಹಾಗೆ ಉಪದೇಶಿಸಿದ್ದರೆ ನೀನು ಅದನ್ನು ತಿಳಿಯುತ್ತಿದ್ದೆ. ನನ್ನ ಮನಸ್ಸಿನಲ್ಲಿರುವುದನ್ನು ನಿನಗೆ ತಿಳಿಯಲು ಸಾಧ್ಯವಿದೆ. ಆದರೆ ನಿನ್ನ ಮನಸ್ಸಿನಲ್ಲಿರುವುದೇನೆಂದು ನನಗರಿಯಲು ಸಾಧ್ಯವಿಲ್ಲ. ಖಂಡಿತವಾಗಿಯೂ ನೀನು ಎಲ್ಲ ರಹಸ್ಯಗಳನ್ನು ಚೆನ್ನಾಗಿ ತಿಳಿಯುವವನಾಗಿರುವೆ. ನೀನು ನನ್ನೊಡನೆ ನಿರ್ದೇಶಿಸಿದ್ದನ್ನಲ್ಲದೆ ಬೇರೇನನ್ನೂ ನಾನು ಅವರೊಡನೆ ಹೇಳಿಲ್ಲ. ಅದೇನೆಂದರೆ: ನನ್ನ ಹಾಗೂ ನಿಮ್ಮ ಪ್ರಭುವಾದ ಅಲ್ಲಾಹುವನ್ನು ಮಾತ್ರ ಆರಾಧಿಸಿರಿ ಎಂದು. ನಾನು ಅವರೊಟ್ಟಿಗೆ ಇದ್ದ ಕಾಲದ ವರೆಗೆ ಅವರಿಗೆ ನಾನು ಸಾಕ್ಷಿಯಾಗಿದ್ದೆನು. ನೀನು ನನ್ನನ್ನು ಮೃತಪಡಿಸಿದ ನಂತರ ಅವರ ಮೇಲ್ನೋಟಗಾರನು ನೀನೇ ಆಗಿರುವೆ. ಎಲ್ಲ ಸಂಗತಿಗಳಿಗೂ ನೀನೇ ಸಾಕ್ಷಿಯಾಗಿರುವೆ'." (5:117,118)

ಈಸಾನಬಿ(ಅ) ಅವರೊಂದಿಗೆ ಇದ್ದ ಕಾಲದ ವರೆಗೆ ಅವರು (ಕ್ರೈಸ್ತರು) ಈಸಾನಬಿಯನ್ನು ದೈವವನ್ನಾಗಿ ಮಾಡಿರಲಿಲ್ಲ ಎಂದು ಅಲ್ಲಾಹುವಿನೊಡನೆ ಈಸಾನಬಿ(ಅ) ಸಾಕ್ಷ್ಯ ನುಡಿಯುವರೆಂದು ಮೇಲಿನ ವಚನದಿಂದ ವ್ಯಕ್ತವಾಗುವುದಲ್ಲವೇ? ಅವರು ಮರಣಗೊಂಡ ನಂತರ ಕ್ರೈಸ್ತರು ಅವರನ್ನು ದೈವವನ್ನಾಗಿ ಮಾಡಿದ್ದುದರಲ್ಲಿ ಅವರು (ಈಸಾನಬಿ) ನಿರಪರಾಧಿಯೆಂದು ವಿನಯ ಪೂರ್ವಕವಾಗಿ ಅಲ್ಲಾಹುವಿನೊಡನೆ ಅವರು ಹೇಳುವರೆಂದು ಈ ಪವಿತ್ರ ವಚನಗಳು ನಮಗೆ ತಿಳಿಸಿಕೊಡುತ್ತವೆ. ಕ್ರೈಸ್ತರು ಈಸಾನಬಿಯನ್ನು ಇಲಾಹನ್ನಾಗಿ ಮಾಡಲು ತೊಡಗಿದುದು ಈಸಾನಬಿಯ ಮರಣದ ಅನಂತರವೆಂದು ಮೇಲಿನ ಆಯತುಗಳಿಂದ ವ್ಯಕ್ತವಾಗುತ್ತದೆ.

"ನಾನು ಬದುಕಿರುವ ಕಾಲವಿಡೀ ಪ್ರಾರ್ಥನೆಯನ್ನು ಅನುಷ್ಠಿಸಲೂ ಝಕಾತ್ ಕೊಡಲೂ ಅವನು (ಅಲ್ಲಾಹು) ನನ್ನೊಡನೆ ಆಜ್ಞಾಪಿಸಿರುವನು" ಎಂದು ಈಸಾನಬಿ(ಅ) ಹೇಳಿದ್ದಾರೆ (ಪವಿತ್ರ ಖುರ್‌ಆನ್ 19:32). ಅವರು ಈಗಲೂ ಬದುಕಿದ್ದರೆ ಈ ಆಜ್ಞೆಯನ್ನು ಪೂರ್ಣವಾಗಿ ಅವರು ಪಾಲಿಸಬೇಕಲ್ಲವೇ? ಹಾಗಾದರೆ ಈಗಲೂ ಅವರು ಆಕಾಶದಲ್ಲಿ ಪ್ರಾರ್ಥನೆಯನ್ನು ಅನುಷ್ಠಿಸುತ್ತಲೂ ಝಕಾತ್ ಕೊಡುತ್ತಲೂ ಇದ್ದಿರಬೇಕು! ಅವರು ಪ್ರಾರ್ಥಿಸುತ್ತಿರುವುದು ಯಾವ ಶರೀಅತಿನ ಪ್ರಕಾರವಾಗಿದೆ? ಅವರು ಝಕಾತ್ ಕೊಡುವುದು ಯಾರಿಗೆ?

ಇನ್ನೊಮ್ಮೆ ಈಸಾನಬಿ(ಅ) ಹೇಳುತ್ತಾರೆ: "ನನ್ನ ನಂತರ ಬರುವ ಅಹ್ಮದ್ ಎಂಬ ಹೆಸರಿನ ಒಬ್ಬ ರಸೂಲಿನ ಕುರಿತು ನಾನು ಸಂತೋಷ ವಾರ್ತೆಯನ್ನು ತಿಳಿಸುವವನಾಗಿದ್ದೇನೆ." ( ಪ.ಖು. 61:7). ಈ ವಚನದಿಂದ ಅಹ್ಮದ್ ಎಂಬ ಹೆಸರಿನ ಪ್ರವಾದಿಯ ಆಗಮನವು ಈಸಾನಬಿಯ

ನಂತರವೆಂದು ತಿಳಿದುಬರುತ್ತದೆ. ಅಹ್ಮದ್ ಎಂಬ ಪ್ರವಾದಿ ಈ ಲೋಕದಲ್ಲಿ ಆಗಮಿಸಿದ್ದರೆ ಆ ಸಮಯದಲ್ಲಿ ಈಸಾನಬಿ(ಅ) ಜೀವಿಸಿರಲು ನಿರ್ವಾಹವಿಲ್ಲ. ಏಕೆಂದರೆ, ಅಹ್ಮದ್ ಪ್ರವಾದಿಯ ಆಗಮನವು ಈಸಾನಬಿಯ ನಂತರವಾಗಿರಬೇಕು. ಹಾಗಲ್ಲವಾದರೆ 'ನನ್ನ ನಂತರ' ಎಂದು ಹೇಳುವುದರ ಬದಲು 'ನನ್ನ ಜೀವಿತ ಕಾಲದಲ್ಲೇ ಬರುವ ಅಹ್ಮದ್ ಪ್ರವಾದಿ' ಎಂದು ಹೇಳಬೇಕಾಗಿತ್ತು. ಹಾಗೆ ಹೇಳದೆ 'ನನ್ನ ನಂತರ' ಎಂದು ಹೇಳಿ, ಬರುವ ಅಹ್ಮದ್ ಪ್ರವಾದಿಯ ಕಾಲದಲ್ಲಿ ಅವರು ಜೀವಿಸಿರಲಾರರೆಂದು ವ್ಯಕ್ತಪಡಿಸಿರುವರು.

ಮತ್ತೊಮ್ಮೆ ಈಸಾನಬಿ(ಅ) ಹೇಳುತ್ತಾರೆ: "ನಾನು ಜನಿಸಿದ ದಿನವೂ ಮೃತಪಡುವ ದಿನವೂ ಪುನರುತ್ಥಾನಗೊಳಿಸಲ್ಪಡುವ ದಿನವೂ ನನ್ನ ಮೇಲೆ ಶಾಂತಿ ಇದೆ" ( ಪ.ಖು.19:34). ಈ ವಚನ ಪ್ರಕಾರ ಹಝ್ರತ್ ಈಸಾನಬಿಗೆ ಸಾಮಾನ್ಯ ಮನುಷ್ಯನಿಗಿರುವಂತೆಯೇ ಮೂರು ಸ್ಥಿತಿಗಳಿರುವುದಾಗಿ ತಿಳಿದು ಬರುತ್ತದೆ. ಅವೇನೆಂದರೆ : 1) ಜನನ. 2) ಮರಣ. 3) ಪುನರುತ್ಥಾನ.

ಆದರೆ ಈಸಾನಬಿಗೆ ಆಕಾಶಕ್ಕೆ ಆರೋಹಣ ಮತ್ತು ಅಲ್ಲಿಂದ ಅವರೋಹಣ ಎಂಬ ಅತಿ ಪ್ರಧಾನವಾದ ಎರಡು ಸ್ಥಿತಿಗಳು ಕೂಡ ಇರುತ್ತಿದ್ದರೆ ಅಲ್ಲಾಹು ಅವುಗಳನ್ನು ಪ್ರಸ್ತಾಪಿಸುತ್ತಿದ್ದನು. ಆದರೆ ಹಾಗೆ ಹೇಳದೆ ಹಝ್ರತ್ ಯಹ್‌ಯಾ ನಬಿ(ಅ) ಕುರಿತು ಪವಿತ್ರ ಖುರ್‌ಆನಿನಲ್ಲಿ (19:16) ಸೂಚಿಸಿದ ಪ್ರಕಾರವೇ ಜನನ ಸ್ಥಿತಿ, ಮರಣ ಸ್ಥಿತಿ ಮತ್ತು ಪುನರುತ್ಥಾನ ಸ್ಥಿತಿ ಎಂಬ ಮೂರು ಸ್ಥಿತಿಗಳನ್ನು ಮಾತ್ರವೇ ಸೂಚಿಸಲಾಗಿದೆ. ಇದರಿಂದ ಈಸಾನಬಿ(ಅ) ಇತರ ಪ್ರವಾದಿಗಳಂತೆಯೇ ಮೃತಪಟ್ಟಿರುವರೆಂದು ಸೂರ್ಯ ಪ್ರಕಾಶದಂತೆ ಸ್ಪಷ್ಟವಾಗುತ್ತವೆ.

ಸಂಕ್ಷಿಪ್ತವಾಗಿ, ಈಸಾನಬಿ(ಅ) ಇತರ ಪ್ರವಾದಿಗಳಂತೆಯೇ ಒಬ್ಬ ಮನುಷ್ಯನೆಂದಾದರೆ, ಮನುಷ್ಯನೆಂಬ ನೆಲೆಯಲ್ಲಿ ಅವರು ಮೃತಪಟ್ಟಿರುವರೆಂದು ಸ್ಪಷ್ಟವಾಗುತ್ತದೆ. ಅವರು ದೈವವೋ, ದೈವಪುತ್ರನೋ ಅಲ್ಲ; ಬದಲಾಗಿ ಕೇವಲ ಒಬ್ಬ ಪ್ರವಾದಿಯೆಂದಾದರೆ, ಪ್ರವಾದಿಯೆಂಬ ಸ್ಥಿತಿಯಲ್ಲೂ ಅವರು ಮೃತಪಟ್ಟಿರುವರೆಂದು ಸ್ಪಷ್ಟವಾಗುತ್ತದೆ. ಕೋಟಿಗಟ್ಟಲೆ ಕ್ರೈಸ್ತರಿಂದ ತಪ್ಪಾಗಿ ಆರಾಧಿಸಿ ಪ್ರಾರ್ಥಿಸಲ್ಪಡುವ ಒಬ್ಬ ಮಿಥ್ಯ ದೈವವೆಂಬ ನೆಲೆಯಲ್ಲೂ ಅವರು ಮೃಪಟ್ಟಿರುವರೆಂದು ಸ್ಫುಟವಾಗುತ್ತದೆ. ಅದಲ್ಲದೆ ಅವರ ಹೆಸರನ್ನೆತ್ತಿ ಕರೆದು ಕೂಡ ಅವರು ಮೃತಪಟ್ಟಿರುವರೆಂದು ಪವಿತ್ರ ಖುರ್‌ಆನ್ ಸ್ಪಷ್ಟಪಡಿಸುತ್ತದೆ.

**ಈಸಾ ಅಲೈಹಿಸ್ಸಲಾಮರ ಮರಣ ಹದೀಸಿನಲ್ಲಿ**

1. ಹಝ್ರತ್ ಮುಹಮ್ಮದ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಂ ಹೀಗೆ ನುಡಿದಿರುವರು:- "ಮೂಸ(ಅ)ರವರೂ ಈಸಾ(ಅ) ರವರೂ ಜೀವಿಸಿರುತ್ತಿದ್ದರೆ ಅವರು ನನ್ನನ್ನು ಅನುಸರಿಸದೆ ಇರುತ್ತಿರಲಿಲ್ಲ." (ತಫ್‌ಸೀರ್ ಇಬ್ನು ಕಸೀರ್- ಜಿಲ್ದ್ 2, ಪುಟ 246; ತಬ್ರಾನೀ ಕಬೀರ್ ಮತ್ತು ಅಲ್‌ಯವಾಖೀತು ವಲ್ ಜವಾಹಿರ್ - ಜಿಲ್ದ್ 2).
2. "ಈಸಬ್ನು ಮರ್‌ಯಂ 120 ವಯಸ್ಸಿನ ವರೆಗೆ ಜೀವಿಸಿದ್ದರೆಂದು ಜಿಬ್ರೀಲ್ ನನಗೆ ತಿಳಿಸಿರುವರು." ( ತಬ್ರಾನಿ, ಮುಸ್ತದ್‌ರಕ್, ಕನ್‌ಝುಲ್ ಉಮ್ಮಾಲ್ - ಜಿಲ್ದ್ 6)


Read

**ANSARULLAH**

Urdu Quarterly

Annual Subscription : Rs. 60/-

Writer to :

The Manager

ANSARULLAH Quarterly

QADIAN - 143516 ( PUNJAB)

Read

**MISHKAT**

Urdu Monthly

Annual Subscription : Rs.120/-

Writer to :

The Manager

MISHKAT Monthly

QADIAN- 143516 ( PUNJAB)

# ಪ್ರವಾದಿತ್ವ ಸಮಾಪ್ತಿಯ ನಿಜಸ್ಥಿತಿ - 8

✠ಉರ್ದು ಮೂಲ : ಮಿರ್ಝಾ ಬಶೀರ್ ಅಹ್ಮದ್ ಎಂ. ಎ.
✠ಅನುವಾದ : ಎಂ. ಉಬೈದುಲ್ಲಾ

## ಖತ್‌ಮೆ ನುಬುವ್ವತ್ ಕುರಿತು ಪೂರ್ವಿಕ ಮಹಾತ್ಮರ ಹೇಳಿಕೆಗಳು

ಇಂದು ಅಹ್ಮದಿಯಾ ಜಮಾಅತ್ ಪ್ರವಾದಿತ್ವ ಸಮಾಪ್ತಿಯ ಕುರಿತು ಯಾವ ವಿಚಾರವನ್ನು ಬಹಿರಂಗಪಡಿಸುತ್ತಿದೆಯೋ ಅದೇ ರೀತಿಯ ವಿಚಾರಗಳನ್ನು ಹಿಂದೆಯೂ ಅನೇಕ ಮಹಾತ್ಮರು ಬಹಿರಂಗಪಡಿಸಿರುವರು. ಅವುಗಳನ್ನು ಸಂಕ್ಷಿಪ್ತವಾಗಿ ವಿವರಿಸಲು ಇಚ್ಛಿಸುತ್ತೇನೆ. ಈ ಮಹಾತ್ಮರ ಪ್ರತಿಯೊಂದು ಮಾತನ್ನು ನಾವಾಗಲೀ ನಮ್ಮ ವಿರೋಧಿಗಳಾಗಲೀ ಅಂಗೀಕರಿಸುವುದು ಕಡ್ಡಾಯವಾಗಿದೆ ಎಂದು ನಾನು ಹೇಳುವುದಿಲ್ಲ. (ಏಕೆಂದರೆ ಅಲ್ಲಾಹನಿಗೆ ಮತ್ತು ಅವನ ಪ್ರವಾದಿಯವರಿಗೆ ಮಾತ್ರ ಇಂತಹ ಮಹತ್ವ ಪೂರ್ಣ ಸ್ಥಾನವಿದೆ. ಅಲ್ಲಾಹ್ ಮತ್ತು ಅವನ ಪ್ರವಾದಿಯವರ ಹೊರತು ಬೇರೆ ಯಾರಿಗೂ ಇಂತಹ ಸ್ಥಾನವಿಲ್ಲ.) ಹಿಂದೆ ಗತಿಸಿ ಹೋದ ಮಹಾತ್ಮರ ಹೇಳಿಕೆಗಳನ್ನು ನಿಮ್ಮ ಮುಂದೆ ಇರಿಸುವುದರ ಉದ್ದೇಶ, ನಾವು ಈ ವಿಷಯದಲ್ಲಿ ಯಾವುದೇ ಹೊಸ ಸಂಗತಿ ಹೇಳುತ್ತಾ ಇಲ್ಲ; ನಮಗಿಂತ ಮೊದಲು ಗತಿಸಿ ಹೋದ ಮಹಾತ್ಮರು ವಿವಿಧ ಕಾಲಗಳಲ್ಲಿ ಹೇಳುತ್ತಾ ಇದ್ದ ಮಾತುಗಳನ್ನೇ ನಾವು ಸಹ ಹೇಳುತ್ತಾ ಇದ್ದೇವೆ ಎಂದು ಸ್ಪಷ್ಟಪಡಿಸಲಿಕ್ಕೆ ಮಾತ್ರವಾಗಿದೆ. ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮ್ ಹೀಗೆ ಭವಿಷ್ಯ ನುಡಿದಿದ್ದರು: ಹಿಂದಿನ ಕಾಲದಲ್ಲಿ ಸಂಭವಿಸಿದ ಹಾಗೆಯೇ ಒಂದು ಕಾಲಾವಧಿಯ ನಂತರ ನನ್ನ ಸಮುದಾಯದ ನಡೆ ನುಡಿಗಳೂ ಭ್ರಷ್ಟವಾಗುವುವು. ಆದರೆ ನನ್ನ ಸಮುದಾಯ ಸಂಪೂರ್ಣವಾಗಿ ಕೆಟ್ಟುಹೋಗಲಾರದು. ನನ್ನ ಸಮುದಾಯದ ಒಂದಲ್ಲದಿದ್ದರೆ ಇನ್ನೊಂದು ವಿಭಾಗ ಖಂಡಿತವಾಗಿಯೂ ಸತ್ಯದ ಮೇಲೆ ಸ್ಥಿರವಾಗಿ ನಿಂತಿರುವುದು.

ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮ್ ಹೀಗೆಂದರು :

لا تزال طائفة من امتى على الحق لا يضرهم من
خالفهم حتى يأتى امر الله - (ابو داؤد كتاب الفتن)

"ನನ್ನ ಸಮುದಾಯದ ಒಂದಲ್ಲದಿದ್ದರೆ ಇನ್ನೊಂದು ಗುಂಪು ಯಾವಾಗಲೂ ಸತ್ಯದ ಮೇಲೆ ಸ್ಥಿರವಾಗಿ ನಿಂತಿರುವುದು. ಅವರ ವಿರೋಧಿಗಳು ಅವರ ಬಲಹೀನತೆಯ ಕಾಲದಲ್ಲಿಯೂ ಅವರಿಗೆ ಯಾವ ಹಾನಿಯನ್ನೂ ಉಂಟು ಮಾಡಲು ಶಕ್ತರಾಗಲಾರರು. ಕೊನೆಗೆ ಅಲ್ಲಾಹನು ಅವರ ವಿಜಯದ ಮಾರ್ಗವನ್ನು ಪೂರ್ಣವಾಗಿ ತೆರೆದು ಬಿಡುವನು."
(ಅಬೂ ದಾಊದ್ ಕಿತಾಬುಲ್ ಫಿತನ್)

ಹಿಂದೆ ಗತಿಸಿ ಹೋದ ಮಹಾತ್ಮರ ಹೇಳಿಕೆಗಳನ್ನು ನಿಮ್ಮ ಮುಂದಿರಿಸಿದುದರ ಕಾರಣಗಳು ಈ ಕೆಳಗಿನ ಎರಡು ಆಗಿವೆ :

1. ಖತ್‌ಮೆ ನುಬುವ್ವತ್ ಎಂದರೆ ಪ್ರವಾದಿತ್ವ ಸಮಾಪ್ತಿ ಕುರಿತು ಅಹ್ಮದಿಯಾ ಜಮಾಅತ್ ಯಾವ ವಿಚಾರವನ್ನು ಈಗ ಪ್ರಕಟಿಸುತ್ತಾ ಇದೆಯೋ ಅಂತಹದೇ ವಿಚಾರಗಳನ್ನು ಹಿಂದಿನ ಕಾಲದ ಮಹಾತ್ಮರು ಪ್ರಕಟಿಸುತ್ತಾ ಇದ್ದರು. ಆದುದರಿಂದ ಈ ವಿಚಾರಗಳ ಪ್ರಕಟಣೆಯ ಕಾರಣದಿಂದ ಅಹ್ಮದಿಯಾ ಜಮಾಅತನ್ನು ಕಾಫಿರ್ ಎಂದೂ ಇಸ್ಲಾಮ್ ಧರ್ಮದ ವಲಯದಿಂದ ಹೊರಗೆ ಎಂದೂ ಹೇಳಲಿಕ್ಕೆ ಸಾಧ್ಯವಾಗದು. ಹಾಗೆ ಹೇಳುವುದು ಸಾಧ್ಯವಿದ್ದರೆ ಇದೇ ರೀತಿಯ ವಿಚಾರಗಳನ್ನು ಪ್ರಕಟಿಸಿದ ಹಿಂದಿನ ಮಹಾತ್ಮರ ಕುರಿತು ಏನು ಹೇಳುವಿರಿ?

2. ಈ ವಿಚಾರಗಳು ಹಿಂದೆಯೂ ಪ್ರಕಟಗೊಂಡಿವೆಯಾದುದರಿಂದ ನಮ್ಮ ನೇತಾರರಾದ ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮ್, ತನ್ನ ಸಮುದಾಯದ ಒಂದಲ್ಲದಿದ್ದರೆ ಇನ್ನೊಂದು ಗುಂಪು ಸತ್ಯದ ಮೇಲೆ ಪ್ರತಿಯೊಂದು ಕಾಲದಲ್ಲಿ ಸ್ಥಿರವಾಗಿ ನಿಂತಿರುವುದು ಎಂದು ಹೇಳಿದ ಮಾತು ಸತ್ಯವೆಂಬುದು ಈ ವಿಷಯಕ್ಕೆ ಸಂಬಂಧಿಸಿ ಸಾಬೀತಾಗುತ್ತದೆ. "ಒಂದು ಗುಂಪು ಸತ್ಯದ ಮೇಲೆ ಸ್ಥಿರವಾಗಿ ನಿಂತಿರುವುದು" ಎಂದು ಯಾವ ಗುಂಪಿನ ಕುರಿತು ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ಸಲ್ಲಮ್ ಭವಿಷ್ಯ ನುಡಿದಿದ್ದರೋ ಆ ಗುಂಪಿಗೆ ಅಹ್ಮದಿಯಾ ಜಮಾಅತ್ ಅಲ್ಲಾಹನ ಅನುಗ್ರಹದಿಂದ ಈಗಿನ ಕಾಲದಲ್ಲಿ ಸೇರಿದೆ. ಅಹ್ಮದಿಯಾ ಜಮಾಅತ್‌ಗೆ ಈ ಹದೀಸಿನಲ್ಲಿ ಸೂಚಿತವಾದ ಇನ್ನೊಂದು ಮಹತ್ವಪೂರ್ಣ ಭವಿಷ್ಯವಾಣಿಯೂ ಅಲ್ಲಾಹನ ಅನುಗ್ರಹದಿಂದ ಅನ್ವಯಿಸುವುದು. ಅದೇನೆಂದರೆ:

لا يضرهم من خالفهم حتى يأتى امر الله

ಮಧ್ಯಕಾಲದಲ್ಲಿ ಅನೇಕ ಪರೀಕ್ಷೆಗಳನ್ನು ಎದುರಿಸಬೇಕಾಗಿ ಬಂದರೂ ಅಂತಿಮವಾಗಿ ಈ ಜಮಾಅತಿಗೆ ಜಯ ಸಿಗುವುದು.

## ಖತ್‌ಮೆ ನುಬುವ್ವತ್ ಕುರಿತು ತಪ್ಪು ಗ್ರಹಿಕೆಯ ಆರಂಭದ ಹಿನ್ನೆಲೆ

ಹಿಂದಿನ ಮಹಾತ್ಮರ ಹೇಳಿಕೆಗಳನ್ನು ಬರೆಯುವ ಮೊದಲು ಖತ್‌ಮೆ ನುಬುವ್ವತ್ ಕುರಿತು ತಪ್ಪು ಗ್ರಹಿಕೆಗಳ ಆರಂಭದ ಹಿನ್ನೆಲೆಯನ್ನು ತಿಳಿಯುವುದು ಆವಶ್ಯಕವಾದ ಕಾರಣ ಆ ಬಗ್ಗೆ ಮೊದಲು ಬರೆಯುತ್ತೇನೆ.

ಪವಿತ್ರ ಖುರ್‌ಆನ್ ಮತ್ತು ಹದೀಸುಗಳಿಂದ ತಿಳಿಯುವುದೇನೆಂದರೆ ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮ್ ಪ್ರವಾದಿಗಳ ಶೃಂಖಲೆಯ ಕೇಂದ್ರ ಬಿಂದುವಾಗಿದ್ದಾರೆ. ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮ್ ಸ್ವತಃ ಹೀಗೆ ಹೇಳಿರುವರು:

كنتُ نبيًّا وآدم منجدل بين الماء والطين.

"ಲೋಕದ ಪ್ರಥಮ ಮನುಷ್ಯ ಆದಮ್ ಹುಟ್ಟುವ ಮೊದಲೇ ನಾನು ಪ್ರವಾದಿಯಾಗಿದ್ದೆ."

ಈ ಹದೀಸಿನ ಅರ್ಥ: ಪ್ರವಾದಿಗಳ ಶೃಂಖಲೆಯನ್ನು ಅಲ್ಲಾಹನು ಚಲಾಯಿಸಿದುದು ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮರ ನುಬುವ್ವತ್‌ನಲ್ಲಿ ಅದು ಅತ್ಯಂತ ಪರಿಪೂರ್ಣ ಸ್ಥಿತಿಯನ್ನು ಪಡೆಯಲಿಕ್ಕಾಗಿದೆ. ಇದೇ ರೀತಿ ಇನ್ನೊಂದು ಹದೀಸು ಹೀಗಿದೆ: ಅಲ್ಲಾಹನು ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮರನ್ನು ಸಂಬೋಧಿಸಿ ಹೇಳಿದನು:

لولاك لما خلقتُ الافلاك.

("ಓ ಮುಹಮ್ಮದ್) ನಿನ್ನನ್ನು ಸೃಷ್ಟಿಸುವ ಉದ್ದೇಶವಿಲ್ಲದಿರುತ್ತಿದ್ದರೆ ಈ ಭೂಮ್ಯಾಕಾಶಗಳನ್ನು ನಾನು ಸೃಷ್ಟಿಸುತ್ತಿರಲಿಲ್ಲ."

ಇದರಿಂದ ತಿಳಿಯುವುದೇನೆಂದರೆ, ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮ್ ನುಬುವ್ವತಿನ ಶೃಂಖಲೆಯ ಅಂತಿಮ ಲಕ್ಷ್ಯ ಮಾತ್ರವಲ್ಲ, ಆಧ್ಯಾತ್ಮಿಕ ಪ್ರಪಂಚದ ಅಂತಿಮ ಲಕ್ಷ್ಯವಾಗಿದ್ದರು. ಇದೇ ಕಾರಣದಿಂದ ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮ್ ಪದೇ ಪದೇ ಹೀಗೆ ಹೇಳುತ್ತಿದ್ದರು:

انا سيد ولد ادم ولا فخر و انا اكرم الاولين و الاخرين و لا فخر

"ನಾನು ಮನುಷ್ಯಕುಲದ ಸರದಾರನಾಗಿರುವೆನು. ಆದರೆ ಆ ಬಗ್ಗೆ ನನಗೆ ಅಹಂಕಾರವಿಲ್ಲ. ನಾನು ಹಿಂದಿನವರ ಮತ್ತು ಮುಂದಿನವರ ಪೈಕಿ ಅಲ್ಲಾಹನ ಸಮೀಪದಲ್ಲಿ ಶ್ರೇಷ್ಠನಾಗಿದ್ದೇನೆ. ಆದರೂ ನಾನು ಆ ಬಗ್ಗೆ ಅಹಂಕಾರ ಪಡುವುದಿಲ್ಲ."

ಇದೇ ಕಾರಣದಿಂದ ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಾಮರಿಗೆ ಶಾಶ್ವತವಾದ ಜಾಗತ್ತಿಕ ಶರೀಅತ್ ನೀಡಲ್ಪಟ್ಟಿತು. ಅದು ಎಲ್ಲ ಶರೀಅತ್‌ಗಳಿಗಿಂತ ಶ್ರೇಷ್ಠವಾಗಿದೆ. ಇನ್ನು ಮುಂದೆ ಪುನರುತ್ಥಾನದ ದಿನದ ತನಕ ಯಾವುದೇ ಹೊಸ ಶರೀಅತ್ ಬರಲಾರದು.

ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮ್‌ರ ಪದವಿ ಅಷ್ಟು ಉನ್ನತವಾಗಿದೆ ಮತ್ತು ಅವರು ತಂದ ಶರೀಅತ್ ಅದ್ವಿತೀಯವೂ ಭವ್ಯವೂ ಆಗಿದೆ. ಹೀಗಿರುವಾಗ ಅವರು ತಮಗೆ ಅಲ್ಲಾಹನು ನೀಡಿದ ಪದವಿಯನ್ನು ಸೂಚಿಸಲಿಕ್ಕಾಗಿ ಮತ್ತು ಅದನ್ನು ಪ್ರಚಾರ ಮಾಡಲಿಕ್ಕಾಗಿ ಮೇಲೆ ಸೂಚಿಸಿದಂತಹ ಪದಗಳನ್ನು ಬಳಸಿದರು. ನುಬುವ್ವತಿನ ಶೃಂಖಲೆಯ ಹಿಂದಿನ ಕಾಲದ ಎಲ್ಲ ಎಳೆಗಳು ಅವರಲ್ಲಿ ತಲಪಿ ನಿಂತು ಹೋದವು. ಇನ್ನು ಮುಂದೆ ನುಬುವ್ವತಿನ ಎಳೆಗಳು ಅವರಿಂದ ಹೊರಡುವುವು. ನುಬುವ್ವತಿನ ಕುರಿತು ಹೇಳಿದ ಮಾತುಗಳು ಒಂದು ವಿಷಯದ ಸುತ್ತಲೂ ತಿರುಗುತ್ತಾ ಇವೆ: ಆಧ್ಯಾತ್ಮಿಕ ಜಗತ್ತಿನ ಕೇಂದ್ರದಲ್ಲಿರುವುದು ಅವರೇ ಆಗಿದ್ದಾರೆ. ಹಿಂದಿನ ಎಲ್ಲಾ ಮಹತ್ವಗಳು ಅವರಲ್ಲಿ ಸೇರಿ ಲೀನವಾದುವು. ಇನ್ನು ಮುಂದೆ ಪ್ರತಿಯೊಂದು ಪ್ರಕಾಶ ಅವರ ಮೂಲಕ ಹೊರಬರುವುದು. ಇದನ್ನು ವಿದ್ಯುತ್ತಿನ ಬೃಹತ್ ಟ್ರಾನ್ಸ್‌ಫಾರ್ಮರ್‌ನ ಹಾಗೆ ಎಂದು ಭಾವಿಸಬೇಕು. ಅದರ ವಿದ್ಯುತ್ ಒಂದು ಕಡೆಯಿಂದ ಬಂದು ಸೇರುತ್ತದೆ. ಇನ್ನೊಂದು ಕಡೆಯಿಂದ ಅದು ಹೊಸರೂಪದಲ್ಲಿ ಹೊಸ ವಿದ್ಯುತ್ ಆಗಿ ಹೊರ ಹೋಗುತ್ತದೆ.

ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮ್‌ರ ಇಂತಹ ಅದ್ವಿತೀಯ ಪದವಿಯನ್ನು ಸ್ಪಷ್ಟಪಡಿಸಲು ಪವಿತ್ರ ಖುರ್‌ಆನ್ ಅವರನ್ನು "ಖಾತಮುನ್ನಬಿಯ್ಯೀನ್ ಎಂದು ಹೇಳಿತು. ಇದನ್ನೇ ಹದೀಸಿನಲ್ಲಿ ವಿವಿಧ ಸಂದರ್ಭಗಳಲ್ಲಿ ವಿವಿಧ ನುಡಿಗಳ ಮೂಲಕ ಸ್ಪಷ್ಟಪಡಿಸಲಾಗಿದೆ. ನಾನು ಕೊನೆಯ ಪ್ರವಾದಿ, ನನ್ನ ನಂತರ ಪ್ರವಾದಿ ಇಲ್ಲ, ನನ್ನಲ್ಲಿ ನುಬುವ್ವತ್ ಮತ್ತು ರಿಸಾಲತ್ ಖತ್‌ಮ್ ಆಗಿದೆ, ನಾನು ನುಬುವ್ವತಿನ ಭವನದ ಕೊನೆಯ ಇಟ್ಟಿಗೆ ಆಗಿದ್ದೇನೆ - ಇವೆಲ್ಲಾ ನುಡಿಗಳು ಒಂದೇ ಸತ್ಯವನ್ನು ಬಹಿರಂಗಪಡಿಸಲು, ಎಂದರೆ ಪವಿತ್ರ ಖುರ್‌ಆನ್ ಖಾತಮುನ್ನಬಿಯ್ಯೀನ್ ಎಂದು ಹೇಳಿದ ಸತ್ಯವನ್ನು ಸ್ಪಷ್ಟಪಡಿಸಲು ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮ್ ಹೇಳಿದ ಮಾತುಗಳಾಗಿವೆ. ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮ್‌ರವರು ಆಧ್ಯಾತ್ಮಿಕ ಲೋಕದ ಕೇಂದ್ರ ಬಿಂದುವಾಗಿದ್ದಾರೆ ಎಂಬುದೇ ಇದರ ಅರ್ಥವಾಗಿದೆ. ಹಿಂದಿನ ಕಾಲದ ನುಬುವ್ವತಿನ ಪ್ರತಿಯೊಂದು ಎಳೆ ಅವರಲ್ಲಿ ಬಂದು ಸೇರಿತು. ಮುಂದಿನ ಎಳೆ ಅವರಿಂದ ಮಾತ್ರ ಹೊರಡುವುದು.

ಸಹಾಬಿಗಳ ಪರಿಶುದ್ಧ ಸಮೂಹ ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮ್‌ರಿಂದ ನೇರ ತರಬೇತಿ ಪಡೆದ ಕಾರಣ ಅವರ ಅದ್ವಿತೀಯ ಪದವಿಯ ಕುರಿತು ಅವರಿಗೆ ಚೆನ್ನಾಗಿ ತಿಳಿದಿದ್ದಿತು. ಅವರಿಗೆ ಆ ಪದವಿಯ ಕುರಿತು ಯಾವುದೇ ತಪ್ಪುಗ್ರಹಿಕೆ ಇರಲಿಲ್ಲ. ಆದರೆ ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು

ಅಲೈಹಿ ವ ಸಲ್ಲಮ್‌ರ ನಿಧನದ ನಂತರ ಅರಬ್ ದೇಶದ ದೂರ ದೂರ ಪ್ರದೇಶಗಳ ಜನರು ಮತ್ತು ವಿದೇಶಗಳ ಜನರು ಗುಂಪುಗುಂಪಾಗಿ ಇಸ್ಲಾಮ್ ಧರ್ಮಕ್ಕೆ ಸೇರಿದರು ಮತ್ತು "ಯದ್‌ಖುಲೂನ ಫೀ ದೀನಿಲ್ಲಾಹಿ ಅಫ್‌ವಾಜ" (ಅವರು ಅಲ್ಲಾಹನ ಧರ್ಮಕ್ಕೆ ಗುಂಪು ಗುಂಪಾಗಿ ಪ್ರವೇಶಿಸುವರು) ಎಂಬ ಪವಿತ್ರ ಖುರ್‌ಆನಿನಲ್ಲಿ ಭವಿಷ್ಯ ನುಡಿಯಲ್ಪಟ್ಟ ಕಾಲ ಬಂದಿತು. ಆಗ ಹೊಸದಾಗಿ ಇಸ್ಲಾಮ್ ಧರ್ಮಕ್ಕೆ ಸೇರಿದವರಲ್ಲಿ ಕೆಲವರು ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮ್‌ರ ನುಡಿಗಳ ನಿಜವಾದ ಅರ್ಥವನ್ನು ಮನವರಿಕೆ ಮಾಡದೆ ಅವುಗಳಿಗೆ ತಮ್ಮ ಯೋಚನೆಗಳಿಗನುಸಾರವಾಗಿ ವ್ಯಾಖ್ಯಾನ ನೀಡಲು ತೊಡಗಿದರು. ಸಹಾಬಿಗಳ ನಂತರ ಬಂದ ಈ ನವ ಮುಸ್ಲಿಮ್ ತಾಬಿಈಗಳು (ಸಹಾಬಿಗಳ ನಂತರದ ಕಾಲದವರು) "ಲಾನಬಿಯ್ಯ ಬಅ್‌ದೀ," "ಇನ್ನೀ ಆಖಿರುಲ್ ಅಂಬಿಯಾ" ಎಂಬ ಹದೀಸುಗಳನ್ನು ಆಲಿಸಿ ಅವುಗಳ ಅರ್ಥವೈಶಾಲ್ಯದ ಕುರಿತು ಯೋಚಿಸಲು ತೊಡಗಿದರು. ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮ್‌ರು ಹಿಂದಿನ ಕಾಲದ ಮತ್ತು ಮುಂದಿನ ಕಾಲದ ನುಬುವ್ವತ್ ಎಳೆಗಳ ಒಗ್ಗೂಡುವಿಕೆಯ ಕೇಂದ್ರವಾಗಿ ತನ್ನನ್ನು ಯಾವ ಅರ್ಥದಲ್ಲಿ ಹೇಳಿದರೆಂಬುದು ಅವರಿಗೆ ಅರಿತುಕೊಳ್ಳಲು ಸಾಧ್ಯವಾಗಲಿಲ್ಲ.

ಇಸ್ಲಾಂ ಧರ್ಮದ ಕೇಂದ್ರ ಬಿಂದುವಾದ ಕಲಿಮ ತಯ್ಯಿಬ "ಲಾ ಇಲಾಹ ಇಲ್ಲಲ್ಲಾಹು ಮುಹಮ್ಮದುರ್ರಸೂಲುಲ್ಲಾಹ್" (ಅಲ್ಲಾಹನ ಹೊರತು ಅನ್ಯದೇವರಿಲ್ಲ, ಮುಹಮ್ಮದ್ ಅಲ್ಲಾಹನ ಸಂದೇಶವಾಹಕರಾಗಿದ್ದಾರೆ) ಎಂದಾಗಿದೆ. ಈ ಕಲಿಮದಲ್ಲಿ ಖತ್‌ಮೆ ನುಬುವ್ವತ್ ಕುರಿತು ಏನೂ ಹೇಳಿಲ್ಲ. ಯಾವ ಹದೀಸಿನಲ್ಲಿ ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮ್ ಇಸ್ಲಾಮಿನ ಐದು ಸ್ತಂಭಗಳ ಕುರಿತು ವಿವರಿಸಿರುವರೋ ಅದರಲ್ಲಿ ಸಹ ಖತ್‌ಮೆ ನುಬುವ್ವತ್ ಕುರಿತು ಏನೂ ಹೇಳಿಲ್ಲ. ಆದುದರಿಂದ ಖತ್‌ಮೆ ನುಬುವ್ವತ್ ಎಂಬ ವಿಷಯವನ್ನು ಒಂದು ಹೆಚ್ಚುವರಿ ಜ್ಞಾನವರ್ಧಕ ವಿಷಯವೆಂದು ಮನವರಿಕೆ ಮಾಡಿ ಅವರು ಮೌನಾವಲಂಬಿಗಳಾಗುತ್ತಿದ್ದರು.

ಒಂದು ವಿಷಯ ಇಲ್ಲಿ ಚೆನ್ನಾಗಿ ನೆನಪಿಡಬೇಕು. ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮ್ ಹೇಳಿದ ಪ್ರಕಾರ ಇಸ್ಲಾಮ್ ಧರ್ಮದ ಬಾಹ್ಯ ಪರಿಮಿತಿಯು ಕಲಿಮ ತಯ್ಯಿಬವಾದ "ಲಾ ಇಲಾಹ ಇಲ್ಲಲ್ಲಾಹು ಮುಹಮ್ಮದುರ್ರಸೂಲುಲ್ಲಾಹ್" ಆಗಿರುತ್ತದೆ. ಆದುದರಿಂದ ಯಾರು ಕಲಿಮ ತಯ್ಯಿಬವನ್ನು ನಂಬುತ್ತಾನೋ, ಅಲ್ಲಾಹನನ್ನು ಏಕನೆಂದು ನಂಬುತ್ತಾನೋ ಮತ್ತು ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮ್ ಅಲ್ಲಾಹನ ಸಂದೇಶವಾಹಕರೆಂದು ನಂಬುತ್ತಾನೋ ಅಂತಹ ವ್ಯಕ್ತಿ ಇಸ್ಲಾಮಿನ ಬಾಹ್ಯ ವಿವರಣೆಯ ಪ್ರಕಾರ ಮುಸ್ಲಿಮನೆಂದು ಕರೆಯಲ್ಪಡುತ್ತಾನೆ ಹಾಗೂ ಉಮ್ಮತೆ ಮುಹಮ್ಮದೀಯದ (ಮುಸ್ಲಿಮ್ ಸಮುದಾಯದ) ಒಬ್ಬ ಸದಸ್ಯನೆಂದು ಕರೆಯಲ್ಪಡಲು ಹಕ್ಕನ್ನು ಹೊಂದುತ್ತಾನೆ. ಉಳಿದ ವಿಷಯಗಳು ಧಾರ್ಮಿಕ ಆಚರಣೆಗಳಲ್ಲಿ ಪರಿಪೂರ್ಣತೆ ಮತ್ತು ಆಂತರಿಕ ಶುದ್ಧಿ ಇವುಗಳಿಗೆ ಸಂಬಂಧಿಸಿದೆ. ಇಸ್ಲಾಮ್ ಧರ್ಮದ ಬಾಹ್ಯ ಹದ್ದುಬಸ್ತುಗಳಿಗೆ ಇವು ಸಂಬಂಧಿಸಿರುವುದಿಲ್ಲ. ಕಲಿಮ ತಯ್ಯಿಬದಲ್ಲಿ ನಂಬಿಕೆ ಹೊಂದಿದ ಒಬ್ಬನು, ಅವನು ಯಾವ ಪಂಥಕ್ಕೆ ಸೇರಿದವನಾಗಿದ್ದರೂ ರಾಜಕೀಯ ಹಕ್ಕುಗಳಿಗೆ ಸಂಬಂಧಿಸಿ ಅವನು ಮುಸ್ಲಿಮನೆಂದು ಗಣಿಸಲ್ಪಡುವನು. ಅಂತಹ ವ್ಯಕ್ತಿ ಅವನ ಧರ್ಮ ಸಂಬಂಧವಾದ ಇತರ ನ್ಯೂನತೆಗಳ ಕಾರಣದಿಂದ ಯಥಾರ್ಥ ಮುಸ್ಲಿಮನೆಂದು ಕರೆಯಲ್ಪಡಲು ಅರ್ಹತೆ ಇಲ್ಲದಿದ್ದರೂ ಬಾಹ್ಯವಾಗಿ ಅವನು ಮುಸ್ಲಿಮನೆಂದು ಕರೆಯಲ್ಪಡುತ್ತಾನೆ. ಇದೇ ವಾಸ್ತವಿಕ ಸಂಗತಿಯಾಗಿದ್ದು ಪವಿತ್ರ ಖುರ್‌ಆನ್ ಮತ್ತು ಹದೀಸುಗಳು ಇದನ್ನು ಸಾಬೀತುಗೊಳಿಸುತ್ತವೆ. ಇದಕ್ಕೆ ಅನುಸಾರವಾಗಿ ಇಸ್ಲಾಮಿನ ಬಾಹ್ಯ ಮತ್ತು ರಾಜಕೀಯ ವ್ಯವಸ್ಥೆ ಸ್ಥಾಪಿಸಲಾಗಿದೆ. ಇದೇ ಕಾರಣದಿಂದ ಆರಂಭದ ಕಾಲಘಟ್ಟಗಳ ಸಂಶೋಧಕರಾದ ವಿದ್ವಾಂಸರು ಖತ್‌ಮೆ ನುಬುವ್ವತ್ ಬಗ್ಗೆ ಚರ್ಚಿಸದೆ ಇಸ್ಲಾಮ್ ಧರ್ಮದ ಹದ್ದುಬಸ್ತು ನಿರ್ಧರಿಸುವುದು ಕಲಿಮ ತಯ್ಯಿಬ ಎಂದು ಹೇಳಿದರು. ಇತರ ಸಂಗತಿಗಳಿಗೆ ಅವರು ಅಗ್ರಸ್ಥಾನ ನೀಡಲಿಲ್ಲ. ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮ್‌ರು ಸಹ ಇಸ್ಲಾಮ್ ಧರ್ಮದ ಬಾಹ್ಯ ವಿವರಣೆ ನೀಡಿದಾಗ ಕಲಿಮ ತಯ್ಯಿಬ - "ಲಾ ಇಲಾಹ ಇಲ್ಲಲ್ಲಾಹು ಮುಹಮ್ಮದುರ್ರಸೂಲುಲ್ಲಾಹ್" ಇದನ್ನು ಇಸ್ಲಾಮ್ ಧರ್ಮದ ಕೇಂದ್ರ ಬಿಂದುವಾಗಿ ಹೇಳಿದರು. ಅದರ ವಿವರಣೆಯಲ್ಲಿ ಮಲಕ್‌ಗಳ ಕುರಿತು ವಿಶ್ವಾಸ, ದೈವಿಕ ಗ್ರಂಥಗಳ ಕುರಿತು ವಿಶ್ವಾಸ ಪುನರುತ್ಥಾನದ ಕುರಿತು ವಿಶ್ವಾಸ ಮತ್ತು ಒಳಿತು ಕೆಡುಕುಗಳು ಅಲ್ಲಾಹನ ನಿರ್ಣಯಕ್ಕನುಸಾರವಾಗಿ ಸಂಭವಿಸುತ್ತವೆ ಎಂಬುದರ ಕುರಿತು ವಿಶ್ವಾಸ ಇವುಗಳನ್ನು ಸೇರಿಸಿದರು. ಖತ್‌ಮೆ ನುಬುವ್ವತ್ ಕುರಿತು ಹೇಳಲಿಲ್ಲ. ಆದರೆ ಪವಿತ್ರ ಖುರ್‌ಆನಿನ ಆಜ್ಞೆಗಳ ಪ್ರಕಾರ ಪ್ರತಿಯೊಬ್ಬ ಮುಸ್ಲಿಮನು ಖತ್‌ಮೆ ನುಬುವ್ವತ್ ಕುರಿತು ಹೃತ್ಪೂರ್ವಕವಾಗಿ ನಂಬಿಕೆ ಹೊಂದಿರುತ್ತಾನೆ. ಇದೊಂದು ಪ್ರಮುಖ ಅಂಶವಾಗಿದ್ದು ಎಲ್ಲರೂ ಯಾವಾಗಲೂ ಇದನ್ನು ನೆನಪಿಟ್ಟುಕೊಳ್ಳಬೇಕಾಗಿದೆ.

## ಸಹಾಬಿಗಳ ಜೀವಿತದ ಕಾಲದಲ್ಲಿಯೇ ಈ ತಪ್ಪುಗ್ರಹಿಕೆಯ ಆರಂಭವಾಗಿತ್ತು

ಖತ್‌ಮೆ ನುಬುವ್ವತ್ ವ್ಯಾಖ್ಯಾನ ಮತ್ತು "ಲಾ ನಬಿಯ್ಯ ಬಅ್‌ದೀ" ಎಂಬ ವಾಕ್ಯದ ವಾಸ್ತವಿಕ ಅರ್ಥ - ಇವುಗಳ ಕುರಿತು ಸಹಾಬಿಗಳ ಜೀವಿತದ ಕಾಲದಲ್ಲಿಯೇ ನವ ಮುಸ್ಲಿಮರಾದ ತಾಬಿಈಗಳ ಒಂದು ವಿಭಾಗದಲ್ಲಿ ತಪ್ಪುಗ್ರಹಿಕೆಗಳು ತಲೆದೋರಲು ಆರಂಭವಾಗಿದ್ದುವು. ಆದರೆ ಈ ತಪ್ಪು ಗ್ರಹಿಕೆಗಳು ಒಂದು ಚಿಕ್ಕ ಗುಂಪಿನಲ್ಲಿ ಮಾತ್ರ ಇದ್ದುದರಿಂದ ಆ ಗುಂಪು ಹೆಚ್ಚು ಬಹಿರಂಗವಾಗಿ ಪ್ರತ್ಯಕ್ಷವಾಗಲಿಲ್ಲ. ಈ ತಪ್ಪುಗ್ರಹಿಕೆಗಳ ಕುರಿತು ಕೆಲವು ವಿಶಿಷ್ಟ ಸಹಾಬಿಗಳಿಗೆ ತಿಳಿದಾಗ ಅವರು ತಮಗೆ ತೋಚಿದ ರೀತಿಯಲ್ಲಿ ಅವುಗಳನ್ನು ದೂರೀಕರಿಸಲು ಪ್ರಯತ್ನಿಸಿದರೂ ನಾವು ಇನ್ನು ಮುಂದೆ ಬರೆಯಲಿರುವ ಹಝ್ರತ್ ಅಲಿ ರಝಿಯಲ್ಲಾಹು ಅನ್‌ಹುರವರ ಮತ್ತು ಹಝ್ರತ್ ಆಯಿಶಾ ರಝಿಯಲ್ಲಾಹು

ಅನ್‌ಹಾರವರ ಹೇಳಿಕೆಗಳು ಒಂದು ಸಂಗತಿ ಸ್ಪಷ್ಟಪಡಿಸುತ್ತದೆ. ಈ ಇಬ್ಬರು ಮಹಾನುಭಾವರು ಜನರ ತಪ್ಪುಗ್ರಹಿಕೆಗಳನ್ನು ಮನವರಿಕೆ ಮಾಡಿದರು ಮತ್ತು ಅವುಗಳನ್ನು ನಿವಾರಿಸಲು ಪ್ರಯತ್ನಿಸಿದರು. ಆದರೆ ಈ ತಪ್ಪುಗ್ರಹಿಕೆಗಳು ಒಂದು ಚಿಕ್ಕ ಬೀಜದ ರೂಪದಲ್ಲಿ ಇದ್ದಿತು. ನವ ಮುಸ್ಲಿಮ್ ತಾಬಿಈಗಳ ಒಂದು ಚಿಕ್ಕ ಗುಂಪು ಇದನ್ನು ಹೊಂದಿತ್ತು. ಅವರು ಪ್ರಾಯಶಃ ಇಸ್ಲಾಮಿನ ಕೇಂದ್ರದಿಂದ ದೂರ ಸಹ ಇದ್ದರು. ಆದುದರಿಂದಲೇ ಈ ತಪ್ಪು ಗ್ರಹಿಕೆಗಳಿಗೆ ಹೆಚ್ಚು ಪ್ರಾಮುಖ್ಯತೆ ನೀಡಲಾಗಿಲ್ಲ. ಆಗಿನ ಕಾಲದ ಸ್ಥಿತಿಗೆ ಅನುಸಾರವಾಗಿ ಆ ಬಗ್ಗೆ ಹೆಚ್ಚು ಗಮನ ಕೊಡಲು ಸಾಧ್ಯವಾಗಲಿಲ್ಲ. ಇದರ ಪರಿಣಾಮವಾಗಿ ಮುಸ್ಲಿಮರ ಒಂದು ವಿಭಾಗದಲ್ಲಿ ಈ ತಪ್ಪು ಗ್ರಹಿಕೆಗಳು ಬೇರೂರುತ್ತಾ ಹೋದುವು. ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮರ ಆಗಮನದ ನಂತರ ಎಲ್ಲವೂ ಮುಗಿತಾಯವಾಯಿತು; ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮ್‌ರ ನಂತರ ಯಾವುದೇ ವ್ಯಕ್ತಿ ಯಾವುದೇ ರೂಪದಲ್ಲಿ ಪ್ರವಾದಿತ್ವದ ಪಾರಿತೋಷಕವನ್ನು ಗಳಿಸಲಾರ ಎಂಬ ನಂಬಿಕೆ ಉಂಟಾಯಿತು. ಅನಂತರ ಕಾಲಕ್ರಮೇಣ ಈ ನಂಬಿಕೆ ಹೆಚ್ಚು ಹೆಚ್ಚಾಗಿ ಬೇರೂರಿತು ಮತ್ತು ಹೆಚ್ಚು ವಿಶಾಲವಾಗಿ ಹಬ್ಬಿತು.

ಆದರೆ ಮುಸ್ಲಿಮ್ ವಿದ್ವಾಂಸರ ಮತ್ತು ಸುಧಾರಕರ ಒಂದು ಗುಂಪು ಪ್ರತಿ ಕಾಲಘಟ್ಟದಲ್ಲಿಯೂ ಸಾಮಾನ್ಯ ಮುಸ್ಲಿಮರ ಗಮನವನ್ನು ಈ ತಪ್ಪುಗ್ರಹಿಕೆಯ ಕಡೆಗೆ ಸೆಳೆಯುತ್ತಾ ಇದ್ದಿತು ಹಾಗೂ ಅಭಿಪ್ರಾಯಗಳ ಸಂಘರ್ಷ ಜಾರಿಯಲ್ಲಿದ್ದಿತು. ಇಸ್ಲಾಮ್ ಧರ್ಮದ ಅವನತಿಯ ಕಾಲದಲ್ಲಿ "ಉಲಮಾವುಹುಮ್ ಶರ್ರು ಮನ್ ತಹ್ತ ಅದೀಮಿಸ್ಸಮಾಅ್" (ಅವರ ವಿದ್ವಾಂಸರು ಆಕಾಶದ ಕೆಳಗಿರುವವರಲ್ಲಿ ಅತ್ಯಂತ ನೀಚರು) ಎಂದು ಹದೀಸಿನಲ್ಲಿ ಹೇಳಲ್ಪಟ್ಟ ಕಾಲದಲ್ಲಿ ಸೂಕ್ಷ್ಮ ದೃಷ್ಟಿಯವರನ್ನು ಹೊರತು ಪಡಿಸಿ ಸಾಮಾನ್ಯ ಜನರು ಈ ತಪ್ಪು ಗ್ರಹಿಕೆಯ ಸ್ವಾಧೀನಕ್ಕೆ ಒಳಗಾದರು. ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮ್‌ರ ಪರಿಶುದ್ಧ ಅಸ್ತಿತ್ವದಲ್ಲಿ ಪ್ರವಾದಿಗಳ ಹಿಂದಿನ ಮತ್ತು ಮುಂದಿನ ಶೃಂಖಲೆ ಕೊನೆಗೊಂಡಿದೆ ಮತ್ತು ಅವರ ನಂತರ ಎಲ್ಲಾ ವಿಧ ನುಬುವ್ವತಿನ ಬಾಗಿಲು ಮುಚ್ಚಲ್ಪಟ್ಟಿದೆ ಎಂದು ದೃಢವಾಗಿ ಅವರು ನಂಬುತ್ತಾರೆ. ಈ ತಪ್ಪು ಗ್ರಹಿಕೆ ಆರಂಭದಲ್ಲಿ ಬೀಜದ ರೂಪದಲ್ಲಿದ್ದರೂ ಅದು ಸಾಮಾನ್ಯ ಜನರ ಹೃದಯ ಮತ್ತು ಮಸ್ತಿಷ್ಕವನ್ನು ತನ್ನ ಸ್ವಾಧೀನಕೊಳ್ಳಪಡಿಸಿದೆ. ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮ್‌ರ ಜೀವಿತದ ಕಾಲದಿಂದ ಬಹಳ ದೂರದಲ್ಲಿ ಇರುವ ಈ ಜನರು ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮರು ಹೊಸ ಆಧ್ಯಾತ್ಮಿಕ ಕಾಲುವೆಯನ್ನು ಜಾರಿಗೊಳಿಸುವವರಲ್ಲ; ಅವರಿಂದ ಹಿಂದಿನ ಎಲ್ಲಾ ಕಾಲುವೆಗಳು ಮುಚ್ಚಲ್ಪಟ್ಟು ಇದರಲ್ಲಿ ಅವರಿಗೆ ವೈಭವದ ಸ್ಥಾನವಿದೆ ಎಂದು ತಪ್ಪಾಗಿ ಭಾವಿಸುತ್ತಾರೆ.

ಈ ವಿಷಯದಲ್ಲಿ ಪೂರ್ವಗ್ರಹ ಪೀಡಿತರಾಗದೆ ನಾವು ಬರೆದುದರ ಕುರಿತು ಯೋಚಿಸುವುದಾದರೆ ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮರ ನಿಜವಾದ ಪದವಿಯನ್ನು ಮನವರಿಕೆ ಮಾಡದುದರಿಂದ ಈ ತಪ್ಪು ಗ್ರಹಿಕೆ ಉಂಟಾಗಿದೆ ಎಂಬುದನ್ನು ತಿಳಿದುಕೊಳ್ಳಬಹುದಾಗಿದೆ. ನಮ್ಮ ವಿರೋಧಿಗಳು ಈ ವಾಸ್ತವಿಕ ಸಂಗತಿಯನ್ನು ತಿಳಿಯಲು ಪ್ರಯತ್ನಿಸುವವರಾಗಲಿ. "ವಮಾ ಅಲೈನಾ ಇಲ್ಲಲ್ ಬಲಾಗ್." ಸಂದೇಶ ತಲುಪಿಸುವುದು ಮಾತ್ರ ನಮ್ಮ ಕರ್ತವ್ಯವಾಗಿದೆ.

## ಹಝ್ರತ್ ಅಲಿ ರಝಿಯಲ್ಲಾಹು ಅನ್‌ಹುರವರ ಸೂಕ್ಷ್ಮ ಸೂಚನೆ

ಹಝ್ರತ್ ಅಲಿ ರಝಿಯಲ್ಲಾಹು ಅನ್‌ಹುರವರು ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮರ ಪಿತೃಸಹೋದರ ಪುತ್ರರೂ ಹಝ್ರತ್ ಪೈಗಂಬರರ ಪುತ್ರಿಯಾದ ಹಝ್ರತ್ ಫಾತಿಮತುಝ್ಝುಹ್‌ರಾ ರಝಿಯಲ್ಲಾಹು ಅನ್‌ಹಾರವರ ಪತಿಯೂ ಆಗಿದ್ದರು. ಅವರು ನಾಲ್ಕನೆಯ ಖಲೀಫರೂ ಆಗಿದ್ದರು. ಅವರ ಉನ್ನತ ಪದವಿಯ ಕುರಿತು ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮ್ ಹೀಗೆ ಹೇಳಿದ್ದರು: "ಅನಾ ಮದೀನತುಲ್ ಇಲ್‌ಮಿ ವ ಅಲಿಯ್ಯುನ್ ಬಾಬುಹಾ." ಅಂದರೆ: "ನಾನು ಜ್ಞಾನದ ನಗರವಾಗಿದ್ದೇನೆ. ಅಲಿ ಅದರ ಹೆಬ್ಬಾಗಿಲು ಆಗಿರುವರು."

ಇಂತಹ ಜ್ಞಾನಸಂಪನ್ನರಾದ ಮಹಾನುಭಾವರು ಅಬೂ ಅಬ್ದುರ್ರಹ್ಮಾನ್ ಬಿನ್ ಸಲ್ಮಾ ಎಂಬ ವ್ಯಕ್ತಿಯನ್ನು ತನ್ನ ಪುತ್ರರಾದ ಹಝ್ರತ್ ಹಸನ್ ಮತ್ತು ಹಝ್ರತ್ ಹುಸೈನ್ (ರಝಿಯಲ್ಲಾಹು ಅನ್‌ಹುಮಾ)ರಿಗೆ ವಿದ್ಯಾಭ್ಯಾಸ ಮಾಡಿಸಲು ನೇಮಿಸಿದ್ದರು. ಅಬೂ ಅಬ್ದುರ್ರಹ್ಮಾನ್ ಹೀಗೆ ವರದಿ ಮಾಡಿದ್ದಾರೆ:

كنت اقرئ الحسن والحسين رضى الله عنهما فمرّبى
علي بن ابى طالب رضى الله عنه وانا أقرئهما وقال لى
اقرئهما وخاتم النبيّين بفتح التاء

(دُرّ منثور مرتبہ امام سیوطی زیر آیت خاتم النبیّین)

"ನಾನು ಹಝ್ರತ್ ಹಸನ್ ಮತ್ತು ಹಝ್ರತ್ ಹುಸೈನ್ (ರಝಿಯಲ್ಲಾಹು ಅನ್‌ಹುಮಾ)ರಿಗೆ ಪವಿತ್ರ ಖುರ್‌ಆನ್ ಓದಿಸುತ್ತಾ ಇದ್ದೆನು. ಆಗ ಹಝ್ರತ್ ಅಲಿ ರಝಿಯಲ್ಲಾಹು ಅನ್‌ಹು ನನ್ನ ಹತ್ತಿರ ಬಂದಾಗ ಅವರು ಹೇಳಿದರು: "ನೀವು ಅವರಿಬ್ಬರಿಗೆ ಓದಿಸುವಾಗ ಖಾತಮುನ್ನಬೀಯ್ಯೀನ್ ಪದವನ್ನು ತ ಅಕ್ಷರದ ಅಕಾರದೊಂದಿಗೆ

ಓದಿಸಿರಿ." (ದುರ್ರೆ ಮನ್‌ಸೂರ್, ಲೇಖಕ: ಇಮಾಮ್ ಸುಯೂತಿ, ಖಾತಮುನ್ನಬಿಯ್ಯೀನ್ ಎಂಬ ವಚನದ ವ್ಯಾಖ್ಯಾನದಲ್ಲಿ)

ಖಾತಮ್ ಎಂಬ ಪದ ಖ, ಅಲೀಫ್, ತ ಮತ್ತು ಮೀಮ್ ಎಂಬ ಅಕ್ಷರಗಳಿಂದ ರಚಿತವಾಗಿದೆ. ಈ ಪದ ಖಾತಮ್ ಎಂದು 'ತ' ಅಕ್ಷರದ ಅಕಾರದೊಂದಿಗೆ ಬಂದರೆ ಅದರ ಅರ್ಥ ಮುದ್ರೆ ಅಥವಾ ಉಂಗುರ ಎಂದಾಗಿದೆ. ಇದರ ಇನ್ನೊಂದು ರೂಪ ಖಾತಿಮ್ ಎಂದು 'ತ' ಪದದ ಇಕಾರದೊಂದಿಗೆ. ಖಾತಿಮ್ ಪದದ ಅರ್ಥ ಕೊನೆಯದು ಎಂದಾಗಿದೆ. ಆದರೆ ಈ ಪದ ಸಹ ಮುದ್ರೆ ಎಂಬ ಅರ್ಥದಲ್ಲಿಯೂ ಪ್ರಯೋಗಿಸಲ್ಪಡುತ್ತದೆ. 'ತ' ಎಂಬ ಅಕ್ಷರವನ್ನು ಇಕಾರವಾಗಿ ಓದುವುದರಿಂದ ತಪ್ಪುಗ್ರಹಿಕೆ ಉಂಟಾಗಲು ಸಾಧ್ಯವಿರುವ ಕಾರಣದಿಂದ ಹಝ್ರತ್ ಅಲಿ ರಝಿಯಲ್ಲಾಹು ಅನ್‌ಹುರವರು ಈ ಸಂಗತಿಯನ್ನು ಸೂಕ್ಷ್ಮವಾಗಿ ಅರಿತುಕೊಂಡು ಈ ಅಪಾಯವನ್ನು ಹೋಗಲಾಡಿಸಲು ಅಬೂ ಅಬ್ದುರ್ರಹ್ಮಾನ್‌ರಿಗೆ ಆಗ್ರಹ ಪೂರ್ವಕವಾಗಿ ಹೇಳಿದರು: ನನ್ನ ಪುತ್ರರಿಗೆ ಖಾತಮ್ ಪದವನ್ನು 'ತ' ಅಕ್ಷರದ ಅಕಾರದಿಂದಲೇ ಕಲಿಸಿರಿ. ಇಕಾರದಿಂದ ಕಲಿಸಬೇಡಿರಿ. ಇದರ ಉದ್ದೇಶ "ಪ್ರವಾದಿಗಳ ಮುದ್ರೆ" ಎಂಬ ಅರ್ಥ ಗ್ರಹಿಸಲ್ಪಡಲಿ ಎಂದಾಗಿತ್ತು. ಯಾವುದೇ ತಪ್ಪು ಗ್ರಹಿಕೆ ಆಗಬಾರದೆಂದು ಅವರು ಬಯಸಿದ್ದರು. ಈ ಅಸಾಧಾರಣ ವರದಿಯಿಂದ ಒಂದು ಸಂಗತಿ ಸ್ಪಷ್ಟವಾಗುತ್ತದೆ. ಇಸ್ಲಾಮ್ ಧರ್ಮದ ಆರಂಭದ ಕಾಲದಲ್ಲಿಯೇ ಕೆಲವು ನವ ಮುಸ್ಲಿಮ್ ತಾಬಿಈಗಳು (ಪ್ರವಾದಿಗಳ ಶಿಷ್ಯರ ಶಿಷ್ಯರು) ತಪ್ಪು ಗ್ರಹಿಕೆಗಳ ಕಡೆಗೆ ಆಕರ್ಷಿತರಾಗುತ್ತಿದ್ದರು. ಪ್ರಾಯಶಃ ಖಾತಮ್ ಶಬ್ದ 'ತ' ಅಕ್ಷರದ ಇಕಾರದಿಂದ ಕೂಡಿದೆ; ಇದರ ಅರ್ಥ ಪ್ರವಾದಿಗಳ ಸರಪಳಿಯನ್ನು ಕೊನೆಗೊಳಿಸುವವ ಎಂದು ಅವರಲ್ಲಿ ಕೆಲವರು ಭಾವಿಸಲು ತೊಡಗಿದ್ದರು. ಇದೇ ಕಾರಣದಿಂದ ಹಝ್ರತ್ ಅಲಿ ರಝಿಯಲ್ಲಾಹು ಅನ್‌ಹುರವರು ಅಬೂ ಅಬ್ದುರ್ರಹ್ಮಾನ್‌ರಿಗೆ ಸರಿಯಾದ ಮಾರ್ಗದರ್ಶನ ನೀಡಿದರು.

ನೀವು ಯೋಚಿಸಿರಿ. ಖಾತಮ್ ಪದ 'ತ' ಅಕ್ಷರದ ಅಕಾರದೊಂದಿಗೆ ಮತ್ತು ಖಾತಿಮ್ ಪದ 'ತ' ಅಕ್ಷರದ ಇಕಾರದೊಂದಿಗೆ ಒಂದೇ ಅರ್ಥವನ್ನು ಕೊಡುವುದಾದರೆ ಅವುಗಳೆರಡರ ಅರ್ಥದಲ್ಲಿ ಯಾವುದೇ ವ್ಯತ್ಯಾಸ ವಿಲ್ಲವಾದರೆ ಹಝ್ರತ್ ಅಲಿ ರಝಿಯಲ್ಲಾಹು ಅನ್‌ಹುರವರು ಅಬೂ ಅಬ್ದುರ್ರಹ್ಮಾನ್‌ರವರಿಗೆ "ಖಾತಮ್ ಪದವನ್ನು 'ತ' ಅಕ್ಷರದ ಅಕಾರದೊಂದಿಗೆ ಓದಿಸಿರಿ" ಎಂದು ಆಗ್ರಹಪಡಿಸಲು ಕಾರಣವೇನು? ಇದರ ಉದ್ದೇಶ: ತನ್ನ ಪುತ್ರರ ಹೃದಯಗಳಲ್ಲಿ "ಪ್ರವಾದಿಗಳ ಮುದ್ರೆ" ಎಂಬ ಅರ್ಥವು ಅಚ್ಚೊತ್ತುವಂತಾಗಬೇಕೆಂದಾಗಿತ್ತು. ಪ್ರವಾದಿಗಳ ಸರಪಳಿಯನ್ನು ಅಂತ್ಯಗೊಳಿಸುವ ಎಂಬ ಅರ್ಥದ ಕಡೆಗೆ ಅವರ ಮನಸ್ಸು ಹರಿಯದಂತೆ ಮಾಡುವುದು ಇದರ ಉದ್ದೇಶವಾಗಿತ್ತು. ಯಾವುದೇ ತಪ್ಪು ಗ್ರಹಿಕೆಯಾಗದಂತೆ ಮಾಡುವುದು ಅವರ ಉದ್ದೇಶವಾಗಿತ್ತು. ಆದರೆ ಖೇದದ ಸಂಗತಿ ಏನೆಂದರೆ ಹಝ್ರತ್ ಅಲಿ ರಝಿಯಲ್ಲಾಹು ಅನ್‌ಹುರವರು ಈ ಹಿತಕಾರಿ ಉಪದೇಶ ನೀಡಿದ್ದರೂ ಇಂದಿನ ಕಾಲದ ಮುಸ್ಲಿಮರು ಖಾತಮುನ್ನಬಿಯ್ಯೀನ್ ಎಂಬ ಪದಕ್ಕೆ ಅಂತ್ಯ ಪ್ರವಾದಿ ಎಂಬ ಅರ್ಥ ನೀಡುವುದರಲ್ಲಿ ನಿರತರಾಗಿದ್ದಾರೆ. ಖಾತಮುನ್ನಬಿಯ್ಯೀನ್ ಎಂದರೆ ಅಂತ್ಯ ಪ್ರವಾದಿ; ಆದುದರಿಂದ ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ಸಲ್ಲಮ್‌ರ ಆಗಮನದ ನಂತರ ಎಲ್ಲಾ ವಿಧ ನುಬುವ್ವತಿನ ಬಾಗಿಲು ಮುಚ್ಚಲ್ಪಟ್ಟಿದೆ ಎಂದು ಅವರು ಹೇಳುತ್ತಾರೆ.

ಹಝ್ರತ್ ಅಲಿ ರಝಿಯಲ್ಲಾಹು ಅನ್‌ಹುರವರ ಉಪದೇಶವು ನಮ್ಮ ವಿಶ್ವಾಸವನ್ನು ಸರಿಯೆಂದು ಸಾಬೀತುಗೊಳಿಸುವ ಪ್ರಥಮ ಸಾಕ್ಷ್ಯವಾಗಿದೆ. ಈ ಸಾಕ್ಷ್ಯನೀಡಿದವರು ಎಂತಹ ಮಹಾನುಭಾವರು? ಹಝ್ರತ್ ಅಲಿ ರಝಿಯಲ್ಲಾಹು ಅನ್‌ಹು ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮರ ಪಿತೃಸಹೋದರ ಹಾಗೂ ಅವರ ಅಳಿಯ ಆಗಿದ್ದಾರೆ. ಅವರು ಖಿಲಫಾಉರ್ರಾಶಿದೀನ್‌ಗೆ ಸೇರಿದ ಚತುರ್ಥ ಖಲೀಫರೂ ಆಗಿದ್ದರು. ಅವರು ಜ್ಞಾನವೆಂಬ ನಗರದ ಹೆಬ್ಬಾಗಿಲಾಗಿದ್ದರು. ಅವರ ಮುಂದೆ ಅಹ್ಲೆಸುನ್ನತ್ ವಲ್ ಜಮಾಅತ್‌ನವರ ಮತ್ತು ಶಿಯಾ ಪಂಥದವರ ಕೊರಳುಗಳು ಬಾಗುತ್ತವೆ.

## ಉಮ್ಮುಲ್ ಮೂಮಿನೀನ್ (ಸತ್ಯ ವಿಶ್ವಾಸಿಗಳ ತಾಯಿ) ಹಝ್ರತ್ ಆಯಿಶಾ ರಝಿಯಲ್ಲಾಹು ಅನ್‌ಹಾರ ಮಾರ್ಗದರ್ಶನ

ಸತ್ಯವಿಶ್ವಾಸಿಗಳ ವಾತ್ಸಲ್ಯಭರಿತ ಮಾತೆ ಹಝ್ರತ್ ಆಯಿಶಾ ರಝಿಯಲ್ಲಾಹು ಅನ್‌ಹಾರ ಮಾತನ್ನೂ ಗಮನಿಸಿರಿ. ಅವರ ಕುರಿತು ಹೀಗೆ ವರದಿಯಾಗಿದೆ: ಯಾವುದಾದರೂ ಜ್ಞಾನ ಸಂಬಂಧವಾದ ಸಮಸ್ಯೆ ತಲೆದೋರಿದರೆ ಅದಕ್ಕೆ ಸೂಕ್ತ ಪರಿಹಾರವನ್ನು ಹಝ್ರತ್ ಆಯಿಶಾ ರಝಿಯಲ್ಲಾಹು ಅನ್‌ಹಾ ಸೂಚಿಸದೆ ಇರುತ್ತಿರಲಿಲ್ಲ. (ಝುದುಲ್ ಮಆದ್ ಎಂಬ ಗ್ರಂಥ ನೋಡಿರಿ.) ಅಂತಹ ಮಹಾ ಮಹಿಳೆ ಹೀಗೆ ಹೇಳುತ್ತಾರೆ:

قولوا اِنّہٗ خاتم النّبیّٖن ولا تقولوا لا نبیّ بعدہٗ -

(دُرّ منثور جلد ۵ و تکملہ مجمع البحار صفحہ ۸۵)

"ಓ ಮುಸ್ಲಿಮರೇ, ನೀವು ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮರ ಕುರಿತು ಖಾತಮುನ್ನಬಿಯ್ಯೀನ್ ಎಂದು ಹೇಳಿರಿ. ಆದರೆ ಅವರ ನಂತರ ಯಾವ ಪ್ರವಾದಿಯೂ ಇಲ್ಲ ಎಂದು ಹೇಳಬೇಡಿರಿ." (ದುರ್ರೆಮನ್‌ಸೂರ್ - ಸಂಪುಟ 5. ತಕ್‌ಮಿಲ ಮಜ್‌ಮವುಲ್ ಬಿಹಾರ್ - ಪುಟ 85)

ಈ ಸಾಕ್ಷ್ಯ ಹಝ್ರತ್ ಅಲಿ ರಝಿಯಲ್ಲಾಹು ಅನ್‌ಹುರವರು ನೀಡಿದ ಸಾಕ್ಷ್ಯದ ನಂತರ ನೀಡಿದ ಸಾಕ್ಷ್ಯವೆಂದು ತಿಳಿದುಬರುತ್ತದೆ. ಆ ಕಾಲದಲ್ಲಿ ಪ್ರಾಯಶಃ ನುಬುವ್ವತ್ ಕುರಿತು ತಪ್ಪು ಗ್ರಹಿಕೆಗಳು ಸ್ವಲ್ಪ ಮಟ್ಟಿಗೆ ಹೆಚ್ಚಾಗಿರಬಹುದು. ಈ ಸಾಕ್ಷ್ಯದಲ್ಲಿ ಹಝ್ರತ್ ಅಲಿ ರಝಿಯಲ್ಲಾಹು ಅನ್‌ಹುರವರ ಸಾಕ್ಷ್ಯಕ್ಕಿಂತ ಹೆಚ್ಚು ಸ್ಪಷ್ಟತೆ ಮತ್ತು ಹೆಚ್ಚು ವಿಶಾಲತೆ ಕಂಡು ಬರುತ್ತದೆ. ಕೆಲವು ನವ ಮುಸ್ಲಿಮರು "ಲಾ ನಬಿಯ್ಯ ಬಅ್‌ದೀ" ಎಂಬ ಹದೀಸನ್ನು ತಪ್ಪಾಗಿ ವ್ಯಾಖ್ಯಾನಿಸುತ್ತಿದ್ದಾರೆ

ಮತ್ತು ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮ್‌ರ ನಂತರ ಯಾವುದೇ ಪ್ರವಾದಿ ಬರಲಾರರೆಂದೂ ನುಬುವ್ವತಿನ ಬಾಗಿಲು ಸಂಪೂರ್ಣವಾಗಿ ಮುಚ್ಚಲ್ಪಟ್ಟಿದೆ ಎಂದೂ ಅವರು ಭಾವಿಸುತ್ತಿದ್ದಾರೆಂಬ ಸಮಾಚಾರ ಹಝ್ರತ್ ಆಯಿಶಾ ರಝಿಯಲ್ಲಾಹು ಅನ್‌ಹಾರಿಗೆ ತಲುಪಿತ್ತು ಎಂದು ತಿಳಿಯುತ್ತದೆ. ಆಗ ಹಝ್ರತ್ ಆಯಿಶಾ ರಝಿಯಲ್ಲಾಹು ಅನ್‌ಹಾರು ಒಬ್ಬ ಹಿತೈಷಿ ಅಧ್ಯಾಪಿಕೆಯ ರೀತಿಯಲ್ಲಿ ಕೂಡಲೇ ಆ ಕಡೆಗೆ ಗಮನ ಹರಿಸಿದರು. ಅವರು ಹೀಗೆ ಮಾರ್ಗದರ್ಶನ ನೀಡಿದರು: ನೀವು ಲಾನಬಿಯ್ಯ ಬಅ್‌ದೀ ಎಂಬ ಹದೀಸಿನ ನಿಜವಾದ ಅರ್ಥವನ್ನು ಸರಿಯಾಗಿ ಮನವರಿಕೆ ಮಾಡಿಕೊಳ್ಳುತ್ತಾ ಇಲ್ಲವಾದುದರಿಂದ ನೀವು ಈ ಹದೀಸಿಗೆ ಪ್ರತಿಯಾಗಿ ಪವಿತ್ರ ಖುರ್‌ಆನಿನ ಆಯತ್ ಖಾತಮುನ್ನಬಿಯ್ಯೀನ್ ಕಡೆಗೆ ಗಮನ ಕೊಡಿರಿ. ಅದರ ಅರ್ಥ ಪ್ರವಾದಿಗಳ ಮುದ್ರೆ ಎಂದಾಗಿದೆ. ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ಸಲ್ಲಮರ ನುಬುವ್ವತಿನ ಪದವಿಯ ಎಲ್ಲಾ ತತ್ವಗಳು ಈ ಒಂದು ಶಬ್ದದಿಂದ ಸ್ಪಷ್ಟವಾಗುತ್ತದೆ ಮತ್ತು ಲಾನಬಿಯ್ಯ ಬಅ್‌ದೀ ಎಂಬ ಹದೀಸಿನಿಂದ ಕೆಲವು ಅಪಕ್ವ ಪ್ರಕೃತಿಯ ಜನರಲ್ಲಿ ಉಂಟಾಗಬಹುದಾದ ತಪ್ಪು ಗ್ರಹಿಕೆಗಳು ಇದರಿಂದ ತಡೆಯಲ್ಪಡುವುದು.

ನೀವು ನೋಡಿರಿ, ಹಝ್ರತ್ ಆಯಿಶಾ ರಝಿಯಲ್ಲಾಹು ಅನ್‌ಹಾರ ಮಾರ್ಗದರ್ಶನ ಎಷ್ಟು ಸ್ಪಷ್ಟ ಮತ್ತು ಎಷ್ಟು ಜ್ಞಾನ ವರ್ಧಕವಾಗಿದೆ. ಈ ಹೇಳಿಕೆಯ ನಂತರ ಯಾವುದೇ ಸಂಶಯಕ್ಕೆ ಆಸ್ಪದವಿರುವುದಿಲ್ಲ.

ಹಝ್ರತ್ ಆಯಿಶಾ ರಝಿಯಲ್ಲಾಹು ಅನ್‌ಹಾರ ಈ ಹೇಳಿಕೆಯ ಕುರಿತು ನಾವು ಈ ಮೊದಲು ಸವಿಸ್ತಾರವಾಗಿ ವಿವರಿಸಿರುವುದರಿಂದ ಇಲ್ಲಿ ಈ ವಿಷಯವಾಗಿ ಇನ್ನಷ್ಟು ಬರೆಯುವ ಆವಶ್ಯಕತೆ ಇರುವುದಿಲ್ಲ. ಒಂದು ಸಂಗತಿ ಸ್ಪಷ್ಟವಾಗುತ್ತದೆ: ನುಬುವ್ವತಿಗೆ ಸಂಬಂಧಿಸಿ ತಪ್ಪುಗ್ರಹಿಕೆಗಳ ಕುರಿತು ಹಝ್ರತ್ ಆಯಿಶಾ ರಝಿಯಲ್ಲಾಹು ಅನ್‌ಹಾರು ಇಸ್ಲಾಮ್ ಧರ್ಮದ ಆರಂಭದ ಕಾಲದಲ್ಲಿಯೇ ಮನವರಿಕೆ ಮಾಡಿದ್ದರು ಮತ್ತು ಆ ತಪ್ಪು ಗ್ರಹಿಕೆಗಳನ್ನು ದೂರ ಸರಿಸಲು ಆ ಬಗ್ಗೆ ಕೂಡಲೇ ಗಮನ ಹರಿಸಿದ್ದರು.

## ಹಝ್ರತ್ ಶೇಖ್ ಮುಹ್‌ಯ್ಯುದ್ದೀನ್ ಇಬ್ನು ಅರಬಿ ನೀಡಿದ ಸಾಕ್ಷ್ಯ

ಹಝ್ರತ್ ಶೇಖ್ ಅಕ್‌ಬರ್ ಮುಹ್‌ಯ್ಯುದ್ದೀನ್ ಇಬ್ನು ಅರಬಿ (ನಿಧನ:638 ಹಿಜರಿ) ಹೀಗೆ ಹೇಳಿರುವರು:

إنّ النبوّة الّتي انقطعت بوجود رسُول الله صَلى الله عليه وسَلّم انّما هي النّبوّة التّشريع لامقامها وهذ معنى قوله صلّى الله عليه وسلّم انّ الرّسالة نكمّا اخرو هذا معنى قوله صلى عليه وسلّم انّ الرّسالة والنبوّة قد انقطعت فلا رسول بعدى ولانبيّ اے لانبيّ بعدى يكون على شرع يخالف شرعى بل اذا كان يكون تحت حُكم شريعتى۔

(فتوحات مكّيّہ جلد ۲ صفحہ ۳ طبع مصر)

"ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮರ ಮೂಲಕ ಕೊನೆಗೊಂಡದ್ದು ಶರೀಅತ್‌ನಿಂದ ಕೂಡಿದ ನುಬುವ್ವತ್ ಮಾತ್ರವಾಗಿದೆ. ಇನ್ನು ಮುಂದೆ ಅಂತಹ ನುಬುವ್ವತ್ ಉಂಟಾಗಲು ಸಾಧ್ಯವಿಲ್ಲ. ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮರ ಶರೀಅತಿನ ಯಾವುದೇ ಆಜ್ಞೆಯನ್ನು ರದ್ದುಗೊಳಿಸುವ ಅಥವಾ ಶರೀಅತ್‌ನಲ್ಲಿ ಯಾವುದೇ ಆಜ್ಞೆಯನ್ನು ಹೆಚ್ಚುವರಿಯಾಗಿ ಸೇರಿಸುವ ಯಾವುದೇ ಶರೀಅತ್ ಇನ್ನು ಮುಂದೆ ಬರಲಾರದು. ನನ್ನ ನಂತರ ರಿಸಾಲತ್ ಮತ್ತು ನುಬುವ್ವತ್ ಕೊನೆಗೊಂಡಿದೆ. ನನ್ನ ನಂತರ ರಸೂಲಾಗಲೀ, ನಬಿಯಾಗಲೀ ಇಲ್ಲ ಎಂದು ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮ್ ಹೇಳಿದುದರ ಅರ್ಥ: 'ನನ್ನ ಶರೀಅತಿಗೆ ವಿರುದ್ಧವಾದ ಶರೀಅತನ್ನು ತರುವ ಪ್ರವಾದಿ ಬರಲಾರರು. ಆದರೆ ಯಾರಾದರೂ ಪ್ರವಾದಿಯಾಗಿ ಆಗಮಿಸುವುದಾದರೆ ನನ್ನ ಶರೀಅತನ್ನು ಅನುಸರಿಸುವವರಾಗಿ ಆಗಮಿಸುವರು' ಎಂದಾಗಿದೆ."

(ಫತೂಹಾತೆ ಮಕ್ಕಿಯ್ಯ- ಸಂಪುಟ 2, ಪುಟ 3)

ಇದೇ ವಿಷಯಕ್ಕೆ ಸಂಬಂಧಿಸಿ ಇದೇ ಗ್ರಂಥದಲ್ಲಿ ಹೀಗೆಯೂ ಬರೆಯಲಾಗಿದೆ :

النّبوّة سارية الٰى يوم القيامة فى الخلق وان كان التشريع قد انقطع فالتشريع جُزءٌ من اجزاء النّبوّة۔

(فتوحات مكّيّہ جلد ۲ صفحہ ۱۰۰ طبع مصر)

"ನುಬುವ್ವತ್ ಪುನರುತ್ಥಾನ (ಖಿಯಾಮತ್) ತನಕ ಲೋಕದಲ್ಲಿ ಜಾರಿಯಲ್ಲಿರುವುದು. ಆದರೆ ಶರೀಅತ್ ಅವತೀರ್ಣಗೊಳ್ಳುವುದು ಮುಗಿತಾಯವಾಗಿದೆ. ಶರೀಅತ್ ಎಂಬುದು ನುಬುವ್ವತಿನ ಭಾಗಗಳಲ್ಲಿ ಒಂದು ಭಾಗವಾಗಿದೆ."

(ಫುತೂಹಾತೆ ಮಕ್ಕಿಯ್ಯ- ಸಂಪುಟ 2, ಪುಟ - 100)

ಹಝ್ರತ್ ಇಬ್ನು ಅರಬಿ ತನ್ನ ಇನ್ನೊಂದು ಗ್ರಂಥದಲ್ಲಿ ಹೀಗೆ ಬರೆದಿದ್ದಾರೆ:

امّا نبوّة التشريع والرّسالة فمنقطعة وفى محمّد صلى الله عليه وسلّم قد انقطعت فلا نبيّ بعده مشرّعًا...... الّا انّ الله لطف بعباده فابقى لهم النّبوّة العامّة لا تشريع فيها۔ (فصوص الحكم صفحہ ١٤٠، ١٤١)

"ಶರೀಅತ್ ಒಳಗೊಂಡ ನುಬುವ್ವತ್ ಮತ್ತು ರಿಸಾಲತ್ ಕೊನೆಗೊಂಡಿದೆ. ಏಕೆಂದರೆ ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಲ್ಲಿ ಅದು ಪರಿಪೂರ್ಣಗೊಂಡಿದೆ. ಆದುದರಿಂದ ಅವರ ನಂತರ ಶರೀಅತ್ ತರುವ ಯಾವುದೇ ಪ್ರವಾದಿ ಬರಲಾರರು........... ಆದರೆ ಅಲ್ಲಾಹನು ತನ್ನ ದಾಸರಿಗೆ ಸಾಮಾನ್ಯ ನುಬುವ್ವತಿನ ಬಾಗಿಲನ್ನು ತೆರೆದಿಟ್ಟಿರುವನು. ಅಂತಹ ನುಬುವ್ವತಿನಲ್ಲಿ ಶರೀಅತ್ ಇರುವುದಿಲ್ಲ."

(ಫುಸೂಸುಲ್ ಹುಕ್‌ಮ್- ಪುಟ 140-141)

ಇಸ್ಲಾಮ್ ಧರ್ಮದ ಹಿರಿಯ ವಿದ್ವಾಂಸರೂ ಪ್ರಸಿದ್ದ ಘನವೆತ್ತ ಮಹಾನುಭಾವರೂ ಆಗಿದ್ದ ಹಝ್ರತ್ ಮುಹ್‌ಯುದ್ದೀನ್ ಇಬ್ನು ಅರಬಿಯವರು ಅಂದಾಜು ಏಳುನೂರ ಐವತ್ತು ವರ್ಷಗಳ ಹಿಂದೆ ಬರೆದುದನ್ನು ಗಮನಿಸಿದರೆ ಈ ಕೆಳಗಿನ ನಾಲ್ಕು ಅಂಶಗಳು ಸ್ಪಷ್ಟವಾಗುತ್ತವೆ:

1. ಹಝ್ರತ್ ಶೇಖ್ ಮುಹ್ಯುದ್ದೀನ್ ಇಬ್ನು ಅರಬಿಯವರ ಅಭಿಪ್ರಾಯ ಹೀಗೆ ಇತ್ತು: ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್‌ರ ಆಗಮನದ ನಂತರ ಹೊಸ ಶರೀಅತ್ ಅವತೀರ್ಣಗೊಳ್ಳುವ ಬಾಗಿಲು ಮಾತ್ರ ಮುಚ್ಚಲ್ಪಟ್ಟಿದೆ. ಎಲ್ಲಾ ವಿಧ ನುಬುವ್ವತ್‌ಗಳ ಬಾಗಿಲು ಮುಚ್ಚಲ್ಪಟ್ಟಿಲ್ಲ.

2. ಹಝ್ರತ್ ಶೇಖ್ ಮುಹ್ಯುದ್ದೀನ್ ಇಬ್ನು ಅರಬಿಯವರ ಅಭಿಪ್ರಾಯ ಹೀಗೂ ಇತ್ತು: ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಆಗಮನದ ನಂತರ ಸಹ ಶರೀಅತೇತರ ನುಬುವ್ವತಿನ ಬಾಗಿಲು ತೆರೆದೇ ಇದೆ. ಖಿಯಾಮತ್ ತನಕ ಅದು ತೆರೆದು ಇರುವುದು. ಇಂತಹ ನುಬುವ್ವತಿನ ಹೆಸರು ನುಬುವ್ವತೆ ಆಮ್ಮ ( ಸಾಮಾನ್ಯ ನುಬುವ್ವತ್) ಎಂದು ಅವರು ಹೇಳುತ್ತಾರೆ.

3. ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ನಂತರ ಆಗಮಿಸುವ ಪ್ರವಾದಿ ಅವರ ಶರೀಅತನ್ನು ಅನುಸರಿಸುವವರೂ ಅವರ ಆಜ್ಞಾನುವರ್ತಿಯೂ ಆಗುವರು.

4. ನುಬುವ್ವತ್‌ಗೆ ಅನೇಕ ಭಾಗಗಳಿವೆ. ಶರೀಅತ್ ಅವತೀರ್ಣವಾಗುವುದು ಅದರ ಭಾಗಗಳಲ್ಲಿ ಒಂದಾಗಿದೆ. ಶರೀಅತ್ ಎಂದರೆ ಅದೇ ನಂಬುವ್ವತ್ ಅಲ್ಲ.

ಹಝ್ರತ್ ಮುಹ್ಯುದ್ದೀನ್ ಇಬ್ನು ಅರಬಿಯವರ ಉಲ್ಲೇಖಗಳಿಂದ ಮೇಲೆ ವಿವರಿಸಲಾದ ನಾಲ್ಕು ಅಂಶಗಳು ಸ್ಪಷ್ಟವಾಗಿ ಸಾಬೀತಾಗುತ್ತವೆ. ಯಾರಿಗಾದರೂ ನಾವು ಬರೆದ ಭಾಷಾಂತರದ ಕುರಿತು ಸಂಶಯವಿದ್ದರೆ ಅಂತಹ ವ್ಯಕ್ತಿ ತನ್ನ ನಂಬಿಗೆಯ ವಿದ್ವಾಂಸರಿಂದ ಭಾಷಾಂತರ ಮಾಡಿಸಿ ಮನವರಿಕೆ ಮಾಡಿಕೊಳ್ಳಬಹುದಾಗಿದೆ.

ನೋಡಿರಿ, ನಾವು ಮೇಲೆ ತೋರಿಸಿದ ಉಲ್ಲೇಖಗಳು ಎಷ್ಟು ಸ್ಪಷ್ಟವಾಗಿವೆ. ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್‌ರು ಶರೀಅತ್‌ನಿಂದ ಕೂಡಿದ ನುಬುವ್ವತಿದ ಬಾಗಿಲನ್ನು ಮಾತ್ರ ಮುಚ್ಚಿದ್ದಾರೆಂದು ಹಝ್ರತ್ ಶೇಖ್ ಇಬ್ನು ಅರಬಿಯವರು ಹೇಳುತ್ತಾರೆ. ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ವಸಲ್ಲಮರ ಆಗಮನದ ನಂತರ ಸಹ ನುಬುವ್ವತೆ ಆಮ್ಮದ (ಸಾಮಾನ್ಯ ನುಬುವತ್‌ನ) ಬಾಗಿಲು ತೆರೆದು ಇದೆ; ಅದು ಎಂದಿಗೂ ಮುಚ್ಚಲ್ಪಡಲಾರದು ಎಂದು ಅವರು ಹೇಳುತ್ತಾರೆ. ಇದು ನಾವು ಹೇಳುವ ಮಾತಿಗೆ ಸರಿ ಹೋಲುತ್ತದೆ.

ಬಹುತೇಕ ಜನರು ತಾವು ಹೊಂದಿರುವ ವಿಶ್ವಾಸಕ್ಕೆ ವಿರುದ್ಧವಾದ ಯೋಚನೆಯನ್ನು ಅಂಗೀಕರಿಸಲು ಬೇಗನೆ ತಯಾರಾಗುವುದಿಲ್ಲ ಮತ್ತು ಪ್ರತಿಯೊಂದು ಮಾತಿನ ಕುರಿತು ಸಂಶಯ ಸೂಚಿಸುತ್ತಾ ಇರುತ್ತಾರೆ. ಆದುದರಿಂದ ಹಝ್ರತ್ ಇಬ್ನು ಅರಬಿಯವರ ಉಲ್ಲೇಖಗಳ ಬಗ್ಗೆ ಹೀಗೆ ಸಂಶಯ ಸೂಚಿಸಿದ್ದಾರೆ: ಹಝ್ರತ್ ಇಬ್ನು ಅರಬಿಯವರು ನುಬುವ್ವತೆ ಆಮ್ಮ ಎಂದು ಹೇಳಿದುದು ಕೇವಲ ವಿಲಾಯತ್ (ಅಲ್ಲಾಹನ ಸ್ನೇಹ ಸಂಪಾದನೆ) ಕುರಿತಾಗಿದೆ. ಯಥಾರ್ಥವಾಗಿ ಅವರ ವಿಶ್ವಾಸ, ಪ್ರತಿಯೊಬ್ಬ ನಬಿಯು ಶರೀಅತ್ ತರುವುದು ಆವಶ್ಯಕವಾಗಿದೆ ಎಂದಾಗಿತ್ತು. ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್‌ರ ನಂತರ ಖಿಯಾಮತ್ ತನಕ ಯಾವುದೇ ಹೊಸ ಶರೀಅತ್ ಬರಲು ಸಾಧ್ಯವಿರದ ಕಾರಣದಿಂದ ಅವರ ನಂತರ ನಿಜವಾದ ಅರ್ಥದಲ್ಲಿ ಯಾವ ಪ್ರವಾದಿಯೂ ಬರಲು ಸಾಧ್ಯವಿಲ್ಲ.

ಈ ಸಂಶಯಕ್ಕೆ ಉತ್ತರವಾಗಿ ನಮ್ಮ ಹೇಳಿಕೆ ಹೀಗೆ ಇದೆ: ಹಝ್ರತ್ ಇಬ್ನು ಅರಬಿಯಾಗಲೀ ಬೇರೆ ಯಾವುದೇ ಹಿರಿಯ ವಿದ್ವಾಂಸರಾಗಲೀ ಅವರ ಎಲ್ಲಾ ಮಾತುಗಳನ್ನು ಅಂಗೀಕರಿಸುತ್ತೇವೆ ಎಂದು ನಾವು ಹೇಳುವುದಿಲ್ಲ. ಅಲ್ಲಾಹ್ ಮತ್ತು ಅಲ್ಲಾಹನ ದೂತರಾದ ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಮಾತ್ರ ನಾವು ಈ ಸ್ಥಾನ ನೀಡುತ್ತೇವೆ. ಅಲ್ಲಾಹ್ ಮತ್ತು ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಪ್ರತಿಯೊಂದು ಮಾತು ಮಾತ್ರ ನಮಗೆ ಕಡ್ಡಾಯವಾಗಿಯೂ ಅಂಗೀಕಾರ್ಹವಾಗಿದೆ. ಬೇರೆ ಯಾರಿಗೂ ಇಂತಹ ಸ್ಥಾನ ನಮ್ಮ ದೃಷ್ಟಿಯಲ್ಲಿಲ್ಲ. ಉಳಿದವರ ಬಗ್ಗೆ ನಮ್ಮ ನಿಲುವು ಏನೆಂದರೆ:

ಪವಿತ್ರ ಖುರ್‌ಆನ್ ಮತ್ತು ಸಹೀಹ್ ಹದೀಸ್‌ಗಳಿಗೆ ಅನುಯೋಜ್ಯವಾದ ಮಾತುಗಳನ್ನು ಮಾತ್ರ ನಾವು ಅಂಗೀಕರಿಸುತ್ತೇವೆ.

ಪವಿತ್ರ ಖುರ್‌ಆನ್ ಮತ್ತು ಸಹೀಹ್ ಹದೀಸ್‌ಗಳಿಗೆ ವಿರುದ್ಧವಾದ ಮಾತುಗಳನ್ನು ನಾವು ತಿರಸ್ಕರಿಸುತ್ತೇವೆ.

ಹಝ್ರತ್ ಇಬ್ನು ಅರಬಿಯವರ ಸಾಕ್ಷ್ಯವನ್ನು ನಾವು ಅವರ ಎಲ್ಲಾ ವಿಚಾರಗಳನ್ನು ಅಂಗೀಕರಿಸುತ್ತೇವೆ ಎಂಬ ಉದ್ದೇಶದಿಂದ ಇಲ್ಲಿ ಸಾದರಪಡಿಸಿರುವುದಿಲ್ಲ. ನಾವು ಒಂದು ಸೀಮಿತ ಉದ್ದೇಶಕ್ಕಾಗಿ ಅವರ ಸಾಕ್ಷ್ಯವನ್ನು ನಿಮ್ಮ ಮುಂದಿರಿಸಿದ್ದೇವೆ. ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್‌ರ ಆಗಮನದ ನಂತರ ಶರೀಅತ್ ತರುವ ನುಬವ್ವತಿದ ಬಾಗಿಲು ಮಾತ್ರ ಮುಚ್ಚಲ್ಪಟ್ಟಿದೆ. ಪ್ರತಿಯೊಂದು ರೀತಿಯ ನುಬವ್ವತಿನ ಬಾಗಿಲು ಮುಚ್ಚಲ್ಪಟ್ಟಿಲ್ಲ ಎಂದು ನಾವು ನಂಬುವ ಹಾಗೆಯೇ ಹಝ್ರತ್ ಇಬ್ನು ಅರಬಿ ಸಹ ನಂಬಿಕೆಯನ್ನು ಹೊಂದಿದ್ದರು ಎಂಬುದನ್ನು ಸ್ಪಷ್ಟಪಡಿಸಲು ಅವರ ಬರಹಗಳನ್ನು ಉಲ್ಲೇಖಿಸಲಾಗಿದೆ. ಅವರ ಸಾಕ್ಷ್ಯವು ಸ್ಪಷ್ಟವಾಗಿದೆ. ಯಾವುದೇ ಸಂಶಯವು ತಲೆದೋರಲು ಸಾಧ್ಯವಿಲ್ಲ.

ಪ್ರತಿಯೊಬ್ಬ ಪ್ರವಾದಿ ಶರೀಅತ್ ಹೊಂದುವುದು ಆವಶ್ಯಕವಾಗಿದೆ ಎಂದು ಹಝ್ರತ್ ಇಬ್ನು ಅರಬಿ ನಂಬಿದ್ದರು ಎಂದು ಯಾರಾದರೂ ಅವರ ಕುರಿತು ವಾದಿಸುವುದಾದರೆ ( ಅವರ ನಂಬಿಕೆ ಹೀಗೆಯೇ ಇತ್ತೆಂದು ನಾವು ಹೇಳುವುದಿಲ್ಲ. ಊಹಾತ್ಮಕವಾಗಿ ಹೀಗೆ ಹೇಳುವುದಾದರೆ) ಇದಕ್ಕೆ ನಮ್ಮ ಉತ್ತರವೇನೆಂದರೆ, ಇದರಿಂದ ನಮ್ಮ ಸಾಕ್ಷ್ಯಾಧಾರ ಪ್ರಭಾವಿತವಾಗುವುದಿಲ್ಲ. ಯಾವ ಉದ್ದೇಶದಿಂದ ನಾವು ಅವರ ಹೇಳಿಕೆಯನ್ನು ಉಲ್ಲೇಖಿಸಿರುವವೋ ಅದಕ್ಕೆ ಸಂಬಂಧ ಹೊಂದದ ಮಾತು ಇದಾಗಿದೆ.

ನಾವು ಈ ಮೊದಲು ಹಝ್ರತ್ ಇಮಾಮ್ ಶಿಅರಾನಿಗೆ ಸಂಬಂಧಿಸಿದ ಉಲ್ಲೇಖದ ವಿವರಣೆ ನೀಡುವಾಗ ಪವಿತ್ರ ಖುರ್‌ಆನ್, ಹದೀಸ್, ಚರಿತ್ರೆ, ಮತ್ತು ಬೌದ್ಧಿಕ ಸಾಕ್ಷ್ಯಾಧಾರಗಳಿಂದ ಹೀಗೆ ಸಾಬೀತು ಗೊಳಿಸಿದ್ದೇವೆ: ಪ್ರತಿಯೊಬ್ಬ ನಬಿ ಹೊಸದಾದೊಂದು ಶರೀಅತ್ ತರುವುದು ಆವಶ್ಯಕವಾಗಿದೆ ಎಂಬ ಮಾತು ಖಂಡಿತವಾಗಿಯೂ ತಪ್ಪಾಗಿದೆ. ಹಝ್ರತ್ ಶೇಖ್ ಅಕ್‌ಬರ್‌ರವರ ಉದ್ದೇಶ ಇದಾಗಿತ್ತು. ಅವರು ತಶ್‌ರೀಈ ನುಬುವ್ವತಿಗೆ ನುಬುವ್ವತೆ ಖಾಸ್ಸ ಎಂದು ಹೆಸರಿಸಿ ಅದರ ಬಾಗಿಲು ಸಂಪೂರ್ಣವಾಗಿ ಮುಚ್ಚಲಾಗಿದೆ ಎಂದು ಹೇಳಿದರು. ಆದರೆ ಅದರೆದುರಿಗೆ ನುಬುವ್ವತಿನ ಉಳಿದ ಎಲ್ಲಾ ರೀತಿಗಳನ್ನು ನುಬುವ್ವತೆ ಆಮ್ಮ ಎಂದು ಕರೆದು ಅದರ ಬಾಗಿಲು ತೆರೆದಿರುವುದಾಗಿ ಭಾವಿಸಿದ್ದರು.

ನಿಜವಾದ ಸಂಗತಿಯೇನೆಂದರೆ: ಪ್ರತಿಯೋರ್ವ ನಬಿ ಶರೀಅತನ್ನು ತರುವುದು ಆವಶ್ಯಕವೆಂದು ಹಝ್ರತ್ ಇಬ್ನು ಅರಬಿಯವರು ಖಂಡಿತವಾಗಿಯೂ ಹೇಳಿಲ್ಲ. ಅವರು ಎಲ್ಲಿಯೂ ತನ್ನ ನಂಬಿಕೆ ಹೀಗೆಂದು ಬರೆದಿಲ್ಲ. ಅವರು ಸ್ಪಷ್ಟವಾಗಿ ಹೀಗೆ ಪ್ರಕಟಿಸಿದ್ದಾರೆ:

التشريع جزءٌ من اجزاء النبوة (فتوحات مكية جلد ٢ صفحه ١٠٠)

"ಶರೀಅತಿನ ಅವತೀರ್ಣಗೊಳ್ಳುವಿಕೆ ನುಬುವ್ವತಿನ ಭಾಗಗಳಲ್ಲಿ ಒಂದಾಗಿದೆ. ಅದೇ ನುಬುವ್ವತ್ ಅಲ್ಲ."

ಶರೀಅತಿನ ಅವತೀರ್ಣವಾಗುವಿಕೆ ನುಬುವ್ವತಿನ ಜೊತೆಗೆ ಅನಿವಾರ್ಯವಾಗಿ ಇಲ್ಲವೆಂದು ಹಝ್ರತ್ ಮುಹ್ಯುದ್ದೀನ್ ಇಬ್ನು ಅರಬಿ ಅಭಿಪ್ರಾಯ ಸೂಚಿಸಿರುವಾಗ, "ಪ್ರತಿಯೊಬ್ಬ ಪ್ರವಾದಿಯು ಶರೀಅತನ್ನು ತರುವುದು ಆವಶ್ಯಕ" ಎಂದು ಅವರು ನಂಬಿದುದಾಗಿ ಅವರ ಬಗ್ಗೆ ಹೇಳಲು ಹೇಗೆ ತಾನೆ ಸಾಧ್ಯ? ಅವರು ಎಲ್ಲಿಯಾದರೂ ನುಬುವ್ವತೆ ಆಮ್ಮ (ಶರೀಅತೇತರ ನುಬುವ್ವತ್) ಇದನ್ನು ವಿಲಾಯತ್ ಎಂಬ ಅರ್ಥದಲ್ಲಿ ಉಪಯೋಗಿಸಿದ್ದರೆ ಅದು ಆಲಂಕಾರಿಕವಾದ ಒಂದು ಪ್ರಯೋಗದ ಉದಾಹರಣೆಯಾಗಿದೆ. ಅವರು ಸಾಮಾನ್ಯ ಜನರಿಗೆ ಶರೀಅತೇತರ ನುಬುವ್ವತನ್ನು ಮನವರಿಕೆ ಮಾಡಿಕೊಡಲು ಹೀಗೆ ಪದ ಪ್ರಯೋಗ ಮಾಡಿದ್ದಾರೆ. ಅವರ ಉದ್ದೇಶ ಇದಾಗಿತ್ತು: ಪ್ರತಿಯೊಬ್ಬ ಪ್ರವಾದಿ ಕಡ್ಡಾಯವಾಗಿಯೂ ವಲೀ (ಅಲ್ಲಾಹನ ಸ್ನೇಹಿತ) ಆಗಿರುತ್ತಾರೆ. ನುಬುವ್ವತೆ ಆಮ್ಮ ಇದರ ಜೊತೆ ಶರೀಅತ್ ಸೇರಿರುವುದಿಲ್ಲ. ಅದು ಯಥಾರ್ಥವಾಗಿ ವಿಲಾಯತ್ (ಅಲ್ಲಾಹನೊಂದಿಗೆ ಸ್ನೇಹ ಸಂಬಂಧ) ಎನ್ನುವುದರ ಒಂದು ಅಭಿವೃದ್ಧಿ ಪಡೆದ ಸ್ಥಾನವಾಗಿದೆ.

ಹಝ್ರತ್ ಮುಹ್‌ಯುದ್ದೀನ್ ಇಬ್ನು ಅರಬಿ ಹಝ್ರತ್ ಹಾರೂನ್ ಅಲೈಹಿಸ್ಸಲಾಮರ ಕುರಿತು, ಅವರು ಯಾವುದೇ ಶರೀಅತ್ ತಂದಿರಲಿಲ್ಲ; ಅವರು ಮೂಸಾ ಅಲೈಹಿಸಲಾಮರ ಶರೀಅತನ್ನು ಅನುಸರಿಸುವವರಾಗಿದ್ದರು ಎಂದು ಬರೆದು ಅವರನ್ನು ಪವಿತ್ರ ಖುರ್‌ಆನಿನ ವಚನ "ವ ವಹಬ್‌ನ ಲಹೂ ಹಾರೂನ ನಬಿಯ್ಯನ್" ಪ್ರಕಾರ ನಬಿ ಎಂದು ಕರೆದಿರುವರು. (ಫುತೂಹಾತೆ ಮಕ್ಕಿಯ್ಯ ಸಂಪುಟ 2, ಪುಟ 34)


ವಿವಿಧ ಧರ್ಮಗಳ ಅಧ್ಯಯನಕ್ಕಾಗಿ

ಯುಗರಶ್ಮಿ ಓದಿರಿ

ಪ್ರತಿಕ್ರಿಯೆ

# ಇಸ್ಲಾಮಿನ ಮೂಲಭೂತ ವಿಶ್ವಾಸಗಳು ಮತ್ತು ಮೌದೂದಿ ಪತ್ರಿಕೆ

✠ ಮೌಲವಿ ಸಿ.ಪಿ.ಮ್ಯೊದಿನ್ ಕುಟ್ಟಿ

ಇಸ್ಲಾಮಿನ ಪ್ರಧಾನ ಅನುಷ್ಠಾನ ಕರ್ಮಗಳು ಐದೆಂದೂ ಮೂಲಭೂತ ವಿಶ್ವಾಸಗಳು ಆರೆಂದೂ ಮುಸ್ಲಿಂ ಚಿಕ್ಕ ಮಕ್ಕಳಿಗೆ ಕೂಡ ತಿಳಿದಿರುವ ಇಸ್ಲಾಮಿನ ಪ್ರಾಥಮಿಕ ಪಾಠವಾಗಿದೆ. ಪವಿತ್ರ ಖುರ್‌ಆನ್ ಮತ್ತು ಮುಹಮ್ಮದ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮರ ನುಡಿಗಳ ಖಚಿತವಾದ ಅಧ್ಯಾಪನಾನುಸಾರ ಕಳೆದ ಒಂದೂವರೆ ಸಾವಿರ ವರ್ಷಗಳಿಂದ ಮುಸ್ಲಿಂ ಲೋಕ ಅಭಿಪ್ರಾಯ ಭೇದವಿಲ್ಲದೆ ಒಮ್ಮತದಿಂದ ನಂಬಿಕೊಂಡು, ಅನುಷ್ಠಿಸಿಕೊಂಡು ಮತ್ತು ಅಂಗೀಕರಿಸಿಕೊಂಡು ಬಂದುದಾಗಿದೆ ಇಸ್ಲಾಮಿನ ಐದು ಪ್ರಧಾನ ಅನುಷ್ಠಾನ ಕರ್ಮಗಳು ಮತ್ತು ಆರು ಮೂಲಭೂತ ವಿಶ್ವಾಸಗಳು.

ಒಬ್ಬನು ಮುಸ್ಲಿಮನಾಗಬೇಕಾದರೆ ಐದು ಪ್ರಧಾನ ಕರ್ಮಗಳನ್ನು ಅನುಷ್ಠಿಸಬೇಕೆಂದೂ ಆರು ಮೂಲಭೂತ ವಿಶ್ವಾಸಗಳನ್ನು ಹೊಂದಿರಬೇಕೆಂದೂ ಪ್ರಾಥಮಿಕ ಮದ್ರಸಗಳಲ್ಲಿ ಕೂಡ ಕಲಿಸುವ ವಿಷಯವಾಗಿದೆಯಷ್ಟೆ. ಆದರೆ ಸಂದರ್ಭಕ್ಕೆ ತಕ್ಕಂತೆ ಪದೇ ಪದೇ ಧೋರಣೆಗಳನ್ನು ಬದಲಾಯಿಸುತ್ತಿರುವ ಮೌದೂದಿ ಸಂಘಟನೆ ಮೂಲಭೂತ ವಿಶ್ವಾಸಗಳಲ್ಲಿ ಕೂಡ ಮಾರ್ಪಾಟುಗಳನ್ನು ಮಾಡುತ್ತಿದೆ. ಸುಮಾರು ಅರ್ಧ ಶತಮಾನಕ್ಕೆ ಮುಂಚೆ "ರಿಸಾಲೆ ದೀನೀಯಾತ್ ಎಂಬ ಮೌದೂದಿ ಕೃತಿಯ ಮಲಯಾಳ ಅನುವಾದ "ಇಸ್ಲಾಂ ಮತಂ" ಎಂಬ ಪುಸ್ತಕದಲ್ಲಿ ಇಸ್ಲಾಮಿನ ಮೂಲಭೂತ ವಿಶ್ವಾಸಗಳು ಐದೆಂದು ಮುದ್ರಿಸಿದಾಗ ಕೇರಳದ ಮುಸ್ಲಿಮರೆಲ್ಲರೂ ಲೇಖನ ಮತ್ತು ಭಾಷಣಗಳ ಮೂಲಕ ಅದರ ವಿರುದ್ಧವಾಗಿ ಪ್ರತಿಭಟಿಸಿದರು. ವಾದ ಕೋಲಾಹಲಗಳು ಹದಮೀರಿದಾಗ ಅಂದಿನ ಕೇರಳ ಮೌದೂದಿ ಅಮೀರ್ ಹಾಗೂ ಅಬುಲ್ ಆಲಾ ಮೌದೂದಿ ಸಾಹೇಬರ ಪಠಾನ್‌ಕೋಟ್ ಶಿಷ್ಯನೂ ಆಗಿದ್ದ ಮೌಲವಿ ವಿ.ಪಿ.ಮುಹಮ್ಮದಲಿಯವರು ವಿಷಮ ಪರಿಸ್ಥಿತಿಯನ್ನು ಮೌದೂದಿ ಸಾಹೇಬರಿಗೆ ತಿಳಿಸಿ ಅವರ ಆದೇಶಾನುಸಾರ "ಕೇರಳ ಧೋರಣೆ" ಪ್ರಕಾರ ಮೂಲಭೂತ ವಿಶ್ವಾಸಗಳು ಆರೆಂದೇ ಪುನರ್ಮುದ್ರಣ ಮಾಡಲಾಯಿತೆಂಬುದು ಕೇರಳ ಮುಸ್ಲಿಮರ ಹಳೆಯ ಪೀಳಿಗೆಯ ಸ್ಮೃತಿಯಲ್ಲಿರುವ ಸತ್ಯ ವಿಚಾರವಾಗಿದೆ. ಮುಸ್ಲಿಮರು ಎಷ್ಟು ಭಿನ್ನಾಭಿಪ್ರಾಯ ಹೊಂದಿದವರಾಗಿದ್ದರೂ ಮೂಲಭೂತ ವಿಶ್ವಾಸಗಳ ಬಗ್ಗೆ ಹಾಗೂ ಪ್ರಧಾನ ಕರ್ಮಾನುಷ್ಠಾನಗಳ ಬಗ್ಗೆ ಹಸ್ತಕ್ಷೇಪ ಮಾಡಲ್ಪಡುವಾಗ ಅದನ್ನು ನೋಡಿ ಸುಮ್ಮನಿರಲು ಅವರಿಗೆ ಸಾಧ್ಯವಿಲ್ಲವಷ್ಟೆ.

ಈಗ ಇದೋ ಮಂಗಳೂರಿನಿಂದ ಹೊರಡುವ ಮೌದೂದಿ ಮುಖವಾಣಿ 'ಸನ್ಮಾರ್ಗ' ಪತ್ರಿಕೆಯಲ್ಲಿ (2004 ಅಕ್ಟೋಬರ್ 24-30) ಮೂಲಭೂತ ವಿಶ್ವಾಸಗಳು ಏಳೆಂಬಂತೆ ಬರೆಯಲಾಗಿದೆ. ಮುಂಚೆ ಗುರು ಮೌದೂದಿ ಸಾಹೇಬರು ಆರನೇ ಮೂಲಭೂತ ವಿಶ್ವಾಸವಾದ "ವಲ್ ಖದ್‌ರಿ ಖೈರಿಹಿ ವ ಶರ್ರಿಹಿ ಮಿನಲ್ಲಾಹಿ ತಆಲಾ" (ಎಲ್ಲ ಒಳಿತು ಮತ್ತು ಕೆಡುಕುಗಳು ಅಲ್ಲಾಹನ ತೀರ್ಮಾನಕ್ಕೊಳಪಟ್ಟಿವೆ) ಎಂಬ ವಚನವನ್ನು ತೆಗೆದು ಹಾಕಿ ಖೈರ್ ಮತ್ತು ಶರ್ರ್ ಮನುಷ್ಯನಿಂದ ಉಂಟಾಗುತ್ತದೆಂದು ವ್ಯಾಖ್ಯಾನಿಸಿ ಆರನೇ ವಿಧಿ ನಿರ್ಣಯ ವಿಶ್ವಾಸ ಖುರ್‌ಆನಿನಲ್ಲಿಲ್ಲ ಎಂದು ವಾದಿಸುತ್ತಾ ತಿದ್ದಿದರೆ, ಈಗ ಮಂಗಳೂರಿನ ಮೌದೂದಿ ಶಿಷ್ಯರು ಮೂಲಭೂತ ವಿಶ್ವಾಸಗಳನ್ನು ಏಳೆಂಬಂತೆ ಪ್ರಕಟಿಸಿದ್ದಾರೆ!

ಅಹ್ಮದೀ ಮುಸ್ಲಿಮರ ಬಗ್ಗೆ ಕೇಳಿದ ಒಂದು ಪ್ರಶ್ನೆಗೆ ಉತ್ತರವಾಗಿ ಮೌದೂದಿ ಪತ್ರಿಕೆ ಹೀಗೆ ಹೇಳುತ್ತದೆ: "ಅಲ್ಲಾಹನ ಮೇಲೆ ವಿಶ್ವಾಸ, ಎಲ್ಲ ಪ್ರವಾದಿಗಳ ಮೇಲೆ ಹಾಗೂ ಪ್ರವಾದಿ ಮುಹಮ್ಮದ್(ಸ) ಕೊನೆಯ ಪ್ರವಾದಿ ಎಂಬ ಬಗ್ಗೆ ವಿಶ್ವಾಸ ಮತ್ತು ಪರಲೋಕದ ಮೇಲೆ ವಿಶ್ವಾಸ, ಅವು ಇಸ್ಲಾಮಿನ ಬುನಾದಿಯಾಗಿವೆ. ಈ ಪೈಕಿ ಯಾವುದೇ ಒಂದು ವಿಷಯದಲ್ಲಿ ಒಬ್ಬನಿಗೆ ವಿಶ್ವಾಸವಿಲ್ಲದಿದ್ದರೆ ಅಥವಾ ಅವುಗಳ ಬಗ್ಗೆ ಸಂಶಯವಿದ್ದರೆ ಅವನನ್ನು 'ಮುಸ್ಲಿಮ್' ಎಂದು ಪರಿಗಣಿಸಲಾಗುವುದಿಲ್ಲ."

ಪತ್ರಿಕೆಯಲ್ಲಿ ಹೇಳಲಾದ "ಪ್ರವಾದಿ ಮುಹಮ್ಮದ್(ಸ) ಕೊನೆಯ ಪ್ರವಾದಿ ಎಂಬ ಬಗ್ಗೆ ವಿಶ್ವಾಸ" ಇಸ್ಲಾಮಿನ ಮೂಲಭೂತ ವಿಶ್ವಾಸಗಳಲ್ಲಿ ಪತ್ರಿಕೆಯ ಸೇರ್ಪಡೆಯಾಗಿದೆ. ಅಹ್ಮದೀ ಮುಸ್ಲಿಮರನ್ನು ಕಾಫಿರ್ ಮಾಡಲಿಕ್ಕಾಗಿ "ಖತಮುನ್ನುಬುವ್ವತ್" ಎಂಬ ಕೃತಿಯಲ್ಲಿ ಮೌದೂದಿ ಸಾಹೇಬರು ಹರ್ಝ್ರತ್ ರಈಸುಲ್ ಮುಹಖಿಖೀನ್ ಇಮಾಂ ಗಝ್ಝಾಲಿಯವರ (ರಹ್) " ಅಲ್ ಇಖ್‌ತಿಸಾದು ಫಿಲ್ ಇಲ್‌ತಿಖಾದ್" ಎಂಬ ಗ್ರಂಥದಿಂದ ಎಂದು ಸುಳ್ಳು ಹೇಳಿ, ಆ ಗ್ರಂಥದಲ್ಲಿಲ್ಲದ ಸುಳ್ಳು ಇಬಾತರನ್ನು ಇಮಾಂ ಗಝ್ಝಾಲಿಯವರ ಹೆಸರಿನಲ್ಲಿ ಪ್ರಕಟಿಸಿ ಪ್ರಚುರಪಡಿಸಿದರು. ಸಂದರ್ಭ ಬಂದರೆ ಸುಳ್ಳು ಹೇಳಬಹುದೆಂಬ ಫತ್ವಾವನ್ನು ಸಹ ಅವರು ತನ್ನ ಶಿಷ್ಯರಿಗೆ ನೀಡಿದರು. ಹಾಗಿರುವಾಗ ಸುಳ್ಳು ಹೇಳುವುದರಲ್ಲಿ, ಸುಳ್ಳು ಬರೆಯುವುದರಲ್ಲಿ, ಇಸ್ಲಾಮಿನ ಮೂಲಭೂತ ವಿಶ್ವಾಸಗಳಲ್ಲಿ ಬದಲಾವಣೆ ಮಾಡುವುದರಲ್ಲಿ ಮೌದೂದಿ

ಶಿಷ್ಯರಿಗೆ ಸಂಕೋಚವಿರಲಾರದಷ್ಟೆ. ಅವರು ಕಾಲ - ದೇಶಗಳಿಗೆ ಅನುಸಾರವಾಗಿ ಧೋರಣೆಗಳನ್ನು ಬದಲಾಯಿಸುತ್ತಿರುವಾಗ ಇಸ್ಲಾಮಿನ ಮೂಲಭೂತ ವಿಶ್ವಾಸಗಳಲ್ಲೂ ಅನುಷ್ಠಾನಗಳಲ್ಲೂ ಹೆಚ್ಚು ಕಮ್ಮಿ ಮಾಡಬಹುದಷ್ಟೆ.

ಹಝ್ರತ್ ಮುಹಮ್ಮದ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವ ಸಲ್ಲಂ ಅಂತ್ಯ ಪ್ರವಾದಿಯೆಂದು ನಂಬುವುದು ಮೂಲಭೂತ ವಿಶ್ವಾಸದಲ್ಲಿ ಸೇರುತ್ತದೆಂದೂ ಹಾಗೆ ನಂಬದಿರುವವರು ಇಸ್ಲಾಮಿನಿಂದ ಹೊರಗೆಯೆಂದೂ ಪವಿತ್ರ ಖುರ್‌ಆನ್, ಹದೀಸ್ ಮತ್ತು ಇತರ ಇಸ್ಲಾಮಿಕ ಅಧಿಕೃತ ಸಾಕ್ಷ್ಯಾಧಾರಗಳ ಮೂಲಕ ಸಾಬೀತುಪಡಿಸಲು ಮೌದೂದಿ ಶಿಷ್ಯರಿಗೆ ಸಾಧ್ಯವಿದೆಯೇ? ಸಾಧ್ಯವಿದ್ದರೆ ಸಾಬೀತುಗೊಳಿಸಲಿ.

◆ ಮೌದೂದಿ ಪತ್ರಿಕೆಯ ವೀಕ್ಷಣದಲ್ಲಿ ಕಳೆದ 14 ಶತಮಾನಗಳ ಕಾಲದಲ್ಲಿ ಇಸ್ಲಾಮಿಕ ಲೋಕದಲ್ಲಿ ಹುಟ್ಟಿ, ಬದುಕಿ, ಮೃತಪಟ್ಟವರಲ್ಲಿ ಮುಹಮ್ಮದ್ ಪೈಗಂಬರರ[ಸ] ಅಂತ್ಯ ಪ್ರವಾದಿತ್ವದಲ್ಲಿ ನಂಬದವರೆಲ್ಲರೂ ಇಸ್ಲಾಮಿನಿಂದ ಹೊರಗಲ್ಲವೇ? ಹಾಗಾದರೆ ಹಝ್ರತ್ ಮುಹಮ್ಮದ್ ಪೈಗಂಬರರ[ಸ] ಧರ್ಮಪತ್ನಿ ಮತ್ತು ವಿಶ್ವಾಸಿಗಳ ಮಾತೆ ಹಾಗೂ ಧರ್ಮದ ಅರ್ಧಾಂಶವನ್ನು ನೀವು ಆಯಿಶಾರಿಂದ ಕಲಿತುಕೊಳ್ಳಿರಿ ಎಂದು ಪೈಗಂಬರರು ತನ್ನ ಅನುಯಾಯಿಗಳಿಗೆ ನಿರ್ದೇಶಿಸಿದ ಮುಸ್ಲಿಂ ಸಮುದಾಯದ ಆಧ್ಯಾತ್ಮಿಕ ಅಧ್ಯಾಪಿಕೆಯಾದ ಹಝ್ರತ್ ಆಯಿಶಾ ಸಿದ್ದೀಖ[ರ] ಹೀಗೆ ಹೇಳುತ್ತಾರೆ: "ಖೂಲೂ ಇನ್ನಹು ಖಾತಮುಲ್ ಅಂಬಿಯಾಅ್ ವಲಾ ತಖೂಲೂ ಲಾ ನಬಿಯ್ಯ ಬಅ್‌ದಹು." ಅಂದರೆ, ಹಝ್ರತ್ ಮುಹಮ್ಮದ್ ಪೈಗಂಬರ್[ಸ] ಖಾತಮುಲ್ ಅಂಬಿಯಾ ಎಂದು ನೀವು ಹೇಳಿರಿ. ಆದರೆ ಅವರ ನಂತರ ಪ್ರವಾದಿ ಇಲ್ಲವೆಂದು ನೀವು ಹೇಳಬೇಡಿರಿ." (ದುರ್ರೆಮನ್‌ಸೂರ್-ತಕ್ಮಿಲ ಮಜ್ಮಉಲ್‌ಬಿಹಾರ್.) ಮೌದೂದಿ ವೀಕ್ಷಣ ಪ್ರಕಾರ, ಹಝ್ರತ್ ಮುಹಮ್ಮದ್ ಪೈಗಂಬರರ[ಸ] ಅಂತ್ಯ ಪ್ರವಾದಿತ್ವವನ್ನು ನಂಬದ ಹಾಗೂ ಹಾಗೆ ನಂಬಬಾರದೆಂದು ಮುಸ್ಲಿಂ ಸಮುದಾಯಕ್ಕೆ ಕಲಿಸಿದ ಹಝ್ರತ್ ಆಯಿಶಾ ಸಿದ್ದೀಖ[ರ] ಮೌದೂದಿಗಳ ಇಸ್ಲಾಮಿನಿಂದ ಹೊರಗಲ್ಲವೇ?

◆ ಖತ್ಮುನುಬುವ್ವತಿನ ತಾತ್ಪರ್ಯ ಶರೀಅತ್ ಸಹಿತ ಯಾವ ಪ್ರವಾದಿಯೂ ಹಝ್ರತ್ ಮುಹಮ್ಮದ್ ಪೈಗಂಬರರ[ಸ] ನಂತರ ಬರಲಾರರೆಂದೂ ಆದರೆ ಪೈಗಂಬರರ ಶರೀಅತಿನ ಹುಕುಮುಗಳಿಗೆ ವಿಧೇಯರಾಗಿರುವ ಪ್ರವಾದಿಗಳು ಬರುವರೆಂದೂ ಅಂತಹ ಪ್ರವಾದಿಗಳು ಖಿಯಾಮತ್ ದಿನದ ವರೆಗೆ ಬರಲು ಸಾಧ್ಯವೆಂದೂ ಫುತೂಹಾತುಲ್ ಮಕ್ಕಿಯ್ಯ ಎಂಬ ತನ್ನ ಗ್ರಂಥದಲ್ಲಿ ಬರೆದು ಸಮುದಾಯಕ್ಕೆ ಕಲಿಸಿದ ಇಮಾಮುಲ್ ಅಸ್‌ಫಿಯಾ ಶೈಖುಲ್ ಅಕ್‌ಬರ್ ಮುಹ್ಯುದ್ದೀನ್ ಇಬ್ನು ಅರಬಿ ಸಹ ಮೌದೂದಿಗಳ ವೀಕ್ಷಣದಲ್ಲಿ ಇಸ್ಲಾಮಿನಿಂದ ಹೊರಗಲ್ಲವೆ?

◆ 'ಖಾತಂ' ಎಂಬ ಪದಕ್ಕೆ ಅಂತ್ಯನು ಎಂಬ ಅರ್ಥವಿಲ್ಲವೆಂದೂ ಒಬ್ಬನು ಸಂಖ್ಯೆಯಲ್ಲಿ ಮೊದಲಿಗನೋ ಕೊನೆಯವನೋ ಆಗಿರುವುದರಲ್ಲಿ ಶ್ರೇಷ್ಠತೆಯೇನೂ ಇಲ್ಲವೆಂದೂ 'ಖಾತಂ' ಎಂದರೆ ಕೊನೆಯ ಪದವಿ ಎಂದರ್ಥವೆಂದೂ ಮುಹಮ್ಮದ್ ಪೈಗಂಬರ್[ಸ] ಪ್ರವಾದಿ ಶ್ರೇಷ್ಠರೆಂದೂ ತನ್ನ ತಹ್‌ದೀರುನ್ನಾಸ್ ಎಂಬ ಗ್ರಂಥದಲ್ಲಿ ವಿವರಿಸಿದ ದಯೂಬಂದ್‌ನ ಮಹಾಪಂಡಿತ ಜಾಮಿಅ ದಾರುಲ್ ಉಲೂಮ್‌ನ ಸ್ಥಾಪಕ ಹಾಗೂ ಮುಫ್ತಿ ಆಗಿದ್ದ ಅಲ್ಲಾಮ ಮುಹಮ್ಮದ್ ಖಾಸಿಂ ನಾನೂತವೀ ಸಹ ಮೌದೂದಿ ಪತ್ರಿಕೆಯ ವೀಕ್ಷಣದಲ್ಲಿ ಇಸ್ಲಾಮಿನಿಂದ ಹೊರಗಲ್ಲವೇ?

ಸ್ಥಳಾವಕಾಶದ ಕೊರತೆಯಿಂದ ಹೆಚ್ಚು ವಿವರಿಸುವುದಿಲ್ಲ. ಇಮಾಮುಲ್ ಅಅ್‌ಝಂ ಇಮಾಂ ಅಬೂ ಹನೀಫರನ್ನು ಬಿಟ್ಟರೆ ಹನಫಿ ಮದ್‌ಹಬ್‌ನಲ್ಲಿ ಅತ್ಯಂತ ಗೌರವಾನ್ವಿತ ಪಂಡಿತ, ತತ್ವಜ್ಞಾನಿ ಹಾಗೂ ಮಿರ್ಕಾತುಲ್ ಮಸಾಬೀಹ್ ಎಂಬ ಹದೀಸ್ ವಿಜ್ಞಾನ ಕೋಶಗಳಿಗೆ ವ್ಯಾಖ್ಯಾನ ಬರೆದ ಇಮಾಂ ಮುಲ್ಲಾ ಅಲೀಯುಲ್ ಖಾರಿ, ಇಮಾಂ ಮುಹಮ್ಮದ್ ತಾಹಿರ್ ಗುಜರಾತಿ, ಮೌಲಾನ ಅಬ್ದುಲ್ ಕರೀಂ ಜೀಲಿ ಮೊದಲಾದ ಇಸ್ಲಾಮಿಕ ವಿಶ್ವ ವಿಶಾರದರೂ ದಿವ್ಯಜ್ಞಾನ ಪ್ರಬುದ್ಧರಾದ ಆರಿಫಿಗಳೂ ಕಾಲದ ಇಮಾಮುಗಳಾದ ಮಹಾತ್ಮರೂ ಹಝ್ರತ್ ಮುಹಮ್ಮದ್ ಪೈಗಂಬರರ[ಸ] ನಂತರ ಪೈಗಂಬರರೊಡನಿರುವ "ಇತ್ತಿಬಾಅ್" ಮೂಲಕ ಶಿಷ್ಯ ಪ್ರವಾದಿಗಳು ಆಗಮಿಸುವರೆಂದು ನಂಬಿದವರು ಹಾಗೂ ಅದನ್ನು ಸಂಶಯಾತೀತವಾಗಿ ಘೋಷಿಸಿದವರು. ಪೈಗಂಬರರು ಅಂತ್ಯ ಪ್ರವಾದಿಯೆಂದು ನಂಬದಿದ್ದ ಹಝ್ರತ್ ಆಯಿಶಾ[ರ] ಮೊದಲ್ಗೊಂಡು ಮುಹಮ್ಮದ್ ಖಾಸಿಂ ನಾನೂತವೀ ವರೆಗಿರುವ 14 ಶತಮಾನಗಳಲ್ಲಿ ಗತಿಸಿದ ಇಸ್ಲಾಮಿನ ಆಧ್ಯಾತ್ಮಿಕ ಸಾರಥಿಗಳಾಗಿದ್ದ ಜ್ಞಾನಿಗಳೂ ಖುತ್‌ಬಿಗಳೂ ಇಮಾಮುಗಳೂ ಎಲ್ಲರೂ ಮೌದೂದಿ ವೀಕ್ಷಣದಲ್ಲಿ ಇಸ್ಲಾಮಿನಿಂದ ಹೊರಗಲ್ಲವೇ?.

ಹಝ್ರತ್ ಮುಹಮ್ಮದ್ ಪೈಗಂಬರರ[ಸ] ನಂತರ ಪ್ರವಾದಿ ಬರುವರೆಂದು ನಂಬುವವರು ಇಸ್ಲಾಮಿನಿಂದ ಹೊರಗೆ ಎಂಬ ಮೌದೂದಿ ಫತ್ವ ಪ್ರಕಾರ, ಅಂತ್ಯಕಾಲದಲ್ಲಿ ಈಸಾನಬಿ ಅಲೈಹಿಸ್ಸಲಾಂ ಬಂದು ಧರ್ಮ ಸುಧಾರಣೆ ಮಾಡುವರೆಂದು ನಂಬುವ ಸಕಲ ಮುಸ್ಲಿಮರೂ ಇಸ್ಲಾಮಿನಿಂದ ಹೊರಗಲ್ಲವೇ? ಈಸಾನಬಿ[ಅ] ಕೊನೆಗಾಲದಲ್ಲಿ ಬಂದು ದಜ್ಜಾಲನ್ನು ಕೊಲ್ಲುವರೆಂದು ತನ್ನ ಖತ್‌ಮೆನುಬುವ್ವತ್ ಎಂಬ ಪುಸ್ತಕದಲ್ಲಿ ಮೌದೂದಿ ಸಾಹೇಬರು ಬರೆದಿದ್ದಾರೆ. ಆದರೆ ಅವರು ಪ್ರವಾದಿಯಾಗಿ ಬರುವುದಲ್ಲ; ನಿವೃತ್ತ ಪ್ರವಾದಿಯಾಗಿ ಬರುವರೆಂದು ಅವರು ವ್ಯಾಖ್ಯಾನ ನೀಡಿರುವರು. ಅವರು ಪ್ರವಾದಿಯಾಗಿ ಬರುವುದಲ್ಲ ಎಂದು ಯಾರಾದರೂ ಹೇಳಿದರೆ ಆತನು ಯಥಾರ್ಥದಲ್ಲಿ ಇಸ್ಲಾಮಿನಿಂದ ಹೊರಗೆಯೆಂದೂ ಕಾಫಿರೆಂದೂ ಅಲ್ಲಾಮ ಇಮಾಂ ಸುಯೂತಿ ತಫ್‌ಸೀರುಲ್ ಇತ್‌ಖಾನ್ ಎಂಬ ಗ್ರಂಥದಲ್ಲಿ ಬರೆದಿದ್ದಾರೆ. ಈ ಫತ್ವ ಪ್ರಕಾರ ಮೌಲಾನ ಅಬುಲ್ ಆಲಾ ಮೌದೂದಿ ಯಾರೆಂದು ಓದುಗರು ತೀರ್ಮಾನಿಸಲಿ.

ಆದರೆ ಅಹ್ಮದೀ ಮುಸ್ಲಿಮರನ್ನು ಇಸ್ಲಾಮಿನಿಂದ ಹೊರದೂಡಲಿಕ್ಕಾಗಿ ಈಸಾನಬಿಯ ನುಬುವ್ವತನ್ನು ಕೂಡ ನಿರಾಕರಿಸುವ ಮೌದೂದಿ ಸಾಹೇಬ್ ಓರ್ವ ಪ್ರವಾದಿಯ ಆಗಮನದ ಅನಿವಾರ್ಯತೆಯ ಕುರಿತು ಮನಸಾಕ್ಷಿಯ ಕರೆಯನ್ನು ಹೀಗೆ ಬರೆದಿದ್ದಾರೆ: "ಅಧಿಕಾಂಶ ಜನರು

ನಾಲಗೆಯಿಂದ ಖತ್ಮೆನುಬುವ್ವತ್ ಬಗ್ಗೆ ಉರುಹಾಕುವವರಾದರೂ ಪೈಗಂಬರರ(ಸ) ನಂತರ ಯಾರಾದರೂ ಪ್ರವಾದಿ ಬರಬಹುದೆಂದು ವಾದಿಸುವವನ ನಾಲಗೆಯನ್ನು ಕಿತ್ತೊಗೆಯಲು ಸನ್ನದ್ಧರಾಗುವರಾದರೂ ಅವರ ಹೃದಯ - ಮನಸ್ಸಾಕ್ಷಿ ಒಬ್ಬ ಪ್ರವಾದಿಯ ಆವಶ್ಯಕತೆಯ ಕುರಿತು ಪಿಸುಗುಟ್ಟುತ್ತದೆ. ಒಬ್ಬ ಪ್ರವಾದಿಗಿಂತ ಕಡಿಮೆಯಾದ ಯಾವುದರಿಂದಲೂ ಅವರು ಸಂತೃಪ್ತರಲ್ಲ." (ತರ್ಜುಮಾನುಲ್ ಖುರ್‌ಆನ್, ಡಿಸೆಂಬರ್ 1942)

ಮುಹಮ್ಮದ್ ಪೈಗಂಬರರ(ಸ) ಅಂತ್ಯ ಪ್ರವಾದಿತ್ವ ಸಿದ್ಧಾಂತಕ್ಕೆ ವಿರುದ್ಧವಾಗಿ ತನ್ನ ಮನಸ್ಸಾಕ್ಷಿಯ ಕರೆಯನ್ನು ಬರೆದು ಪ್ರಕಟಿಸಿದ ಮೌದೂದಿ ಸಾಹೇಬ್ ಇಸ್ಲಾಂ ಧರ್ಮದ ಒಳಗಿದ್ದಾರೋ ಹೊರಗಿದ್ದಾರೋ? ಮೌದೂದಿ ಪತ್ರಿಕೆ ಹೇಳಿಕೊಡುವುದೇ?

ಅಹ್ಮದಿಯಾ ಮುಸ್ಲಿಂ ಜಮಾಅತ್ ಇಸ್ಲಾಮಿನಿಂದ ಹೊರಗಾಗುವ ಯಾವುದೇ ವಿಶ್ವಾಸವನ್ನು ಹೊಂದಿಲ್ಲ. ಮುಹಮ್ಮದ್ ಪೈಗಂಬರರ(ಸ) ನಂತರ ಶರೀಅತಿಲ್ಲದ ಶಿಷ್ಯ ಪ್ರವಾದಿ ಬರಬಹುದೆಂದು ಮೇಲೆ ಹೆಸರಿಸಿದವರೂ ಅಲ್ಲದೆ ಬೇರೆಯೂ ಅನೇಕ ವಿದ್ವಾಂಸರೂ ಇಮಾಮುಗಳೂ ಆರಿಫೀಗಳೂ ಮುಸ್ಲಿಂ ಸಮುದಾಯಕ್ಕೆ ಕಲಿಸಿಕೊಟ್ಟಿದ್ದಾರೆ. ಅಲ್ಲಾಹನ ಅನುಗ್ರಹದಿಂದ ಅವರ ವಿಶ್ವಾಸವೇ ಅಹ್ಮದೀ ಮುಸ್ಲಿಮರ ವಿಶ್ವಾಸವೂ ಆಗಿದೆ. ಹಿಂದಿನ ಕಾಲದ ಮತ್ತು ನಂತರದ ಕಾಲದ ಆ ಮಹಾತ್ಮರ ವಿಶ್ವಾಸದಿಂದ ಭಿನ್ನವಾದ ಯಾವುದೇ ವಿಶ್ವಾಸವನ್ನು ಅಹ್ಮದೀ ಮುಸ್ಲಿಮರು ಕೈಗೊಂಡಿಲ್ಲ.

ಮುಹಮ್ಮದ್ ಪೈಗಂಬರರ(ಸ) ನಂತರ ಅಂತ್ಯಕಾಲದಲ್ಲಿ ಈಸಾನಬಿ(ಅ) ಭೂಮಿಗೆ ಇಳಿದು ಬಂದು ಧರ್ಮ ಸುಧಾರಣೆ ಮಾಡುವರು, ಶಿಲುಬೆಯನ್ನು ಮುರಿಯುವರು, ಹಂದಿಯನ್ನು ಕೊಲ್ಲುವರು, ದಜ್ಜಾಲನ್ನು ವಧಿಸುವರು ಎಂಬುದು ಮುಸ್ಲಿಮರ ನಂಬಿಕೆಯಾಗಿದೆ. ಈಸಾನಬಿ(ಅ) ಎರಡನೇ ಸಲ ಭೂಮಿಗೆ ಬಂದರೆ ಅವರ ಆಗಮನ ಮುಹಮ್ಮದ್ ಪೈಗಂಬರರ(ಸ) ನಂತರವಾಗಿರುವುದರಿಂದ, ಪೈಗಂಬರರ (ಸ) ನಂತರ ಯಾರಾದರೂ ಪ್ರವಾದಿ ಬರುವರೆಂದು ನಂಬಿದರೆ ಇಸ್ಲಾಮಿನಿಂದ ಆತನು ಹೊರಗಾಗುವನೆಂದು ಮೌದೂದಿಗಳು ಹೇಗೆ ಫತ್ವ ಕೊಡುವರು? ಈ ಫತ್ವ ಪ್ರಕಾರ ಈಸಾನಬಿ(ಅ) ಬರುವರೆಂದು ನಂಬುವ ಸಕಲ ಮುಸ್ಲಿಮರೂ ಕಾಫಿರ್ ಆಗುವರಲ್ಲವೇ?

ಅಹ್ಮದೀ ಮುಸ್ಲಿಮರು ಮತ್ತು ಇತರ ಮುಸ್ಲಿಮರ ಮಧ್ಯೆ ಇರುವ ಅಭಿಪ್ರಾಯ ಭಿನ್ನತೆ ಹಝ್ರುತ್ ಮುಹಮ್ಮದ್ ಪೈಗಂಬರರ(ಸ) ನಂತರ ಒಬ್ಬ ಪ್ರವಾದಿ ಬರುವರೇ ಬರಲಾರರೇ ಎಂಬುದಲ್ಲ. ಪೈಗಂಬರರ ನಂತರ ಒಬ್ಬ ಹಳೆಯ ಪ್ರವಾದಿ ಬರುವರೋ ಅಥವಾ ಒಬ್ಬ ಹೊಸ ಪ್ರವಾದಿ ಬರುವರೋ? ಆಕಾಶದಿಂದ ಇಳಿದು ಒಬ್ಬ ಪ್ರವಾದಿ ಬರುವರೋ ಅಥವಾ ಪೂರ್ವಕಾಲಗಳಲ್ಲಿ ಲಕ್ಷಗಟ್ಟಲೆ ಪ್ರವಾದಿಗಳು ಆಗಮಿಸಿದಂತೆ ಭೂಮಿಯಲ್ಲಿ ಜನ್ಮತಾಳಿ ಬೆಳೆದು ಓರ್ವ ವ್ಯಕ್ತಿ ಪ್ರವಾದಿಯಾಗಿ ನಿಯುಕ್ತರಾಗುವರೋ ಎಂಬುದಾಗಿದೆ. ಹಾಗಿರುವಾಗ, ಪೈಗಂಬರರ ನಂತರವೂ ಪ್ರವಾದಿಯ ಆಗಮನವಾಗುವುದೆಂದು ನಂಬುವ ಕಾರಣದಿಂದ ಇಸ್ಲಾಮಿನಿಂದ ಹೊರಗಾಗುವುದೆಂಬ ಮೌದೂದಿ ಪತ್ರಿಕೆಯ ಹೇಳಿಕೆ ತಿಳಿಗೇಡಿತನದ್ದೆಂದಲ್ಲದೆ ಮತ್ತೇನು ಹೇಳಲಿಕ್ಕಿದೆ.

ಇನ್ನಿರುವುದು ಖಾತಮುನ್ನಬಿಯ್ಯೀನ್ ಎಂಬುದರ ಅರ್ಥದ ಕುರಿತಾಗಿದೆ. ಒಂದು ಸಮೂಹನಾಮದೊಂದಿಗೆ ಖಾತಂ ಎಂಬ ಪದವನ್ನು ಪ್ರಯೋಗಿಸಿದರೆ ಆ ಸಮೂಹದಲ್ಲಿ ಅತ್ಯಂತ ಶ್ರೇಷ್ಠ ವ್ಯಕ್ತಿ ಎಂದು ಅರಬಿ ಭಾಷೆಯಲ್ಲಿ ಅದರ ಅರ್ಥ. ಈ ಅರ್ಥದಲ್ಲಿ ಖಾತಂ ಎಂಬ ಪದ ಹದೀಸುಗಳಲ್ಲಿ ಮತ್ತು ಅರಬಿ ಸಾಹಿತ್ಯಗಳಲ್ಲಿ ಧಾರಾಳವಾಗಿ ಪ್ರಯೋಗಿಸಲ್ಪಟ್ಟಿದೆ. ಉದಾಹರಣೆಗೆ: ಖಾತಮುಲ್ ಔಲಿಯಾ (ವಲಿಗಳಲ್ಲಿ ಶ್ರೇಷ್ಠ), ಖಾತಮುಲ್ ಮುಹಾಜಿರೀನ್ (ಹಿಜ್‌ರತ್ ಮಾಡಿದವರಲ್ಲಿ ಶ್ರೇಷ್ಠ), ಖಾತಮುಲ್ ಮುಫಸ್ಸಿರೀನ್ (ವ್ಯಾಖ್ಯಾನಗಾರರಲ್ಲಿ ಶ್ರೇಷ್ಠ), ಖಾತಮುಲ್ ಮುಹದ್ದಿಸೀನ್ (ಹದೀಸ್ ಪಂಡಿತರಲ್ಲಿ ಶ್ರೇಷ್ಠ), ಖಾತಮುಶ್ಶುಅರಾಅ್ (ಕವಿಗಳಲ್ಲಿ ಶ್ರೇಷ್ಠ) ಇತ್ಯಾದಿ. ಆದರೆ ಸಮೂಹ ನಾಮದೊಂದಿಗೆ ಸೇರಿಸಿ ಪ್ರಯೋಗಿಸಿದ ಖಾತಂ ಎಂಬ ಪದಕ್ಕೆ ಕೊನೆಯವನು ಎಂಬ ಅರ್ಥದಲ್ಲಿ ಪ್ರಯೋಗಿಸಿದ್ದಕ್ಕೆ ಅರಬಿ ಭಾಷೆಯಿಂದ ಒಂದು ಉದಾಹರಣೆಯನ್ನು ತೋರಿಸಲು ಕಳೆದ 100 ವರ್ಷಗಳಿಂದ ಅಹ್ಮದಿಯಾ ಮುಸ್ಲಿಂ ಜಮಾಅತ್ ವಿದ್ವತ್ ಲೋಕ ಪಂಥಾಹ್ವಾನ ನೀಡುತ್ತಿದೆ. ಆದರೆ ಭಾಷೆಯಲ್ಲಿ ಇಲ್ಲದ ಒಂದು ಪ್ರಯೋಗ ಎಲ್ಲಿಂದ ಲಭಿಸುವುದು? ಅಂತ್ಯಕಾಲದ ವರೆಗೆ ಈ ಪಂಥಾಹ್ವಾನ ಉತ್ತರವಿಲ್ಲದೆ ಬಾಕಿಯಾಗುವುದು. ಹಾಗಿರುವಾಗ ಅಹ್ಮದೀ ಮುಸ್ಲಿಮರು ಮುಹಮ್ಮದ್ ಪೈಗಂಬರರನ್ನು(ಸ) ಖಾತಮುನ್ನಬಿಯ್ಯೀನ್ ಎಂದು ನಂಬುವುದಿಲ್ಲವೆಂದು ಯಾರಾದರೂ ಹೇಳುವರಾದರೆ "ಲಅನತುಲ್ಲಾಹಿ ಅಲಲ್ ಕಾದಿಬೀನ್" (ಸುಳ್ಳು ಹೇಳುವವರ ಮೇಲೆ ಅಲ್ಲಾಹನ ಶಾಪ) ಎಂದಾಗಿದೆ ನಮ್ಮ ಮರುನುಡಿ.

ಅಹ್ಮದಿಯಾ ಮುಸ್ಲಿಂ ಜಮಾಅತಿನ ಸ್ಥಾಪಕರಾದ ಹಝ್ರುತ್ ಅಹ್ಮದ್ ಅಲೈಹಿಸ್ಸಲಾಂ ಬಹಳ ಶಕ್ತಿಯುತವಾಗಿ ಘೋಷಿಸಿದ್ದು, ನಾವು ಹಝ್ರುತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಖಾತಮುನ್ನಬಿಯ್ಯೀನ್ ಎಂದು ನಂಬುವುದರ ಸಾವಿರದಲ್ಲಿ ಒಂದಂಶವಾದರೂ ನನ್ನ ವಿರೋಧಿಗಳು ಅವರನ್ನು ಖಾತಮುನ್ನಬಿಯ್ಯೀನ್ ಎಂದು ನಂಬುವುದಿಲ್ಲ ಎಂದಾಗಿದೆ.

ಅಹ್ಮದಿಯಾ ಮುಸ್ಲಿಂ ಜಮಾಅತಿನಲ್ಲಿ ಪ್ರವೇಶಿಸುವ ಪ್ರತಿಯೊಬ್ಬ ವ್ಯಕ್ತಿ ಹಝ್ರುತ್ ಮುಹಮ್ಮದ್ ಪೈಗಂಬರ್ (ಸ) ಖಾತಮುನ್ನಬಿಯ್ಯೀನ್ ಎಂದು ವಿಶ್ವಾಸ ಘೋಷಣೆಯ ಪ್ರತಿಜ್ಞೆ ಮಾಡಬೇಕಾಗಿದೆ. ಹಾಗಿರುವಾಗ ಹಝ್ರುತ್ ಪೈಗಂಬರರು ಖಾತಮುನ್ನಬಿಯ್ಯೀನ್ ಎಂದು ಅಹ್ಮದೀ ಮುಸ್ಲಿಮರು ನಂಬುವುದಿಲ್ಲವೆಂದು ಹೇಳುವುದು ಬಲುದೊಡ್ಡ ಸುಳ್ಳಾರೋಪವಾಗಿದೆ.

ಖಾತಮುನ್ನಬಿಯ್ಯೀನ್ ಎಂಬುದಕ್ಕೆ ಅನೇಕ ಪೂರ್ವಿಕ ಮಹಾತ್ಮರು ನೀಡಿದ, ಪವಿತ್ರ ಖುರ್‌ಆನ್ ಮನಗಾಣಿಸಿಕೊಟ್ಟ ಅರ್ಥವನ್ನೇ ಅಹ್ಮದೀ ಮುಸ್ಲಿಮರು ನಂಬುತ್ತಾರೆ. ಖಾತಮುನ್ನಬಿಯ್ಯೀನ್ ಎಂದರೆ ಪ್ರವಾದಿ ಸಾರ್ವಭೌಮ ಎಂದಾಗಿದೆ ಅರ್ಥ. ಅಂದರೆ, ಭೂಮಿಯಲ್ಲಿ ಜನ್ಮತಾಳಿದ

ಪ್ರತಿಕ್ರಿಯೆ

# ಜಮಾತೆ ಇಸ್ಲಾಮಿ ಮತ್ತು ಮಾನವ ಹಕ್ಕು ರಕ್ಷಣೆ!

ಎ. ಇನಾಮುಲ್ಲಾ

ಡಿಸೆಂಬರ್ ಮಾಸದಲ್ಲಿ ಜಮಾತೆ ಇಸ್ಲಾಮಿ ಆಶ್ರಯದಲ್ಲಿ, ರಾಷ್ಟ್ರಮಟ್ಟದಲ್ಲಿ ಮಾನವ ಹಕ್ಕು ರಕ್ಷಣಾ ಅಭಿಯಾನ ನಡೆಯಿತು! ಪ್ರಾರ್ಥನಾ ಮಂದಿರಗಳ ರಕ್ಷಣೆಗೆ ಸರಕಾರಕ್ಕೆ ಮನವಿ ಸಲ್ಲಿಸುವುದು ಸಹ ಆ ಕಾರ್ಯಕ್ರಮದಲ್ಲಿ ಸೇರಿತ್ತು.

ಅವರ ಈ ಅಭಿಯಾನ ಬಹಳ ಪರಿಹಾಸ್ಯಕರವಾಗಿದೆ. ಪಾಕಿಸ್ಥಾನದಲ್ಲಿ, ಸರಕಾರದ ಮೇಲೆ ಜಮಾತೆ ಇಸ್ಲಾಮಿ ಒತ್ತಡದಿಂದಾಗಿ ಕಳೆದ 20 ವರ್ಷಗಳಿಂದ, ಸೌಮ್ಯವಾದಿಗಳಾದ ಅಲ್ಪಸಂಖ್ಯಾತ ಅಹ್ಮದೀ ಮುಸ್ಲಿಮರಿಗೆ ಮೂಲಭೂತ ಮಾನವ ಹಕ್ಕುಗಳಿಗೆ ಸೇರಿದ ಧಾರ್ಮಿಕ ಸ್ವಾತಂತ್ರ್ಯ ಧ್ವಂಸವಾಗಿದೆ. ಅವರ ಅನೇಕ ಮಸೀದಿಗಳು ನಾಶಗೊಳಿಸಲ್ಪಟ್ಟಿವೆ. ಧಾರ್ಮಿಕ ವಿಶ್ವಾಸ ಭೇದದ ಕಾರಣವಾಗಿ ಅನೇಕ ಅಹ್ಮದಿಯರನ್ನು ಹತ್ಯೆಗೈಯಲಾಗಿದೆ. ಹಲವರನ್ನು ಸೆರೆಮನೆಗೆ ತಳ್ಳಲಾಗಿದೆ. ಧರ್ಮಾಚರಣೆ ಹೇತುವಾಗಿ ಈಗಲೂ ಅನೇಕ ಅಹ್ಮದೀ ಮುಸ್ಲಿಮರು ಹಲವು ವರ್ಷಗಳಿಂದ ಸೆರೆಮನೆಯಲ್ಲಿದ್ದಾರೆ.

ಬಾಂಗ್ಲಾದೇಶದಲ್ಲಿ ಸಹ ಬಾಂಗ್ಲಾ ನ್ಯಾಶನಲ್ ಪಾರ್ಟಿಯೊಂದಿಗೆ ಜಮಾತೆ ಇಸ್ಲಾಮಿ ಪಕ್ಷ ಅಧಿಕಾರಕ್ಕೇರಿದ ಪರಿಣಾಮವಾಗಿ ಇತ್ತೀಚೆಗೆ ಅಹ್ಮದೀ ಮುಸ್ಲಿಮರ ಧಾರ್ಮಿಕ ಸ್ವಾತಂತ್ರ್ಯಕ್ಕೆ ಚ್ಯುತಿಯುಂಟಾಗಿದೆ. ಅವರ ಏಳು ಧಾರ್ಮಿಕ ಪುಸ್ತಕಗಳಿಗೆ ಮುಟ್ಟುಗೋಲು ಹಾಕಲಾಗಿದೆ. ನವೆಂಬರ್ ತಿಂಗಳಲ್ಲಿ ಜಮಾತೆ ಇಸ್ಲಾಮಿ ನೇತೃತ್ವದಲ್ಲಿ ಅಹ್ಮದೀ ಮುಸ್ಲಿಮರ ಎರಡು ಮಸೀದಿಗಳ ಮೇಲೆ ಆಕ್ರಮಣ ನಡೆದಿದೆ. ಸ್ತ್ರೀಯರೂ ಮಕ್ಕಳೂ ಸೇರಿದಂತೆ ಹನ್ನೆರಡು ಮಂದಿ ತೀವ್ರವಾಗಿ ಗಾಯಗೊಂಡಿದ್ದಾರೆ.

'ರಿಸರ್ಚ್ ಆ್ಯಂಡ್ ಅನಾಲಿಸಿಸ್ ವಿಂಗ್' ನ ಮಾಜಿ ಎಡಿಶನಲ್ ಸೆಕ್ರೆಟರಿಯಾಗಿರುವ ಬಿ.ಬಿ. ನಂದಿಯವರು ಹೇಳುವ ಪ್ರಕಾರ, "ಬಾಂಗ್ಲಾದೇಶದ ಆಡಳಿತಾರೂಢ ಬಾಂಗ್ಲಾ ನ್ಯಾಶನಲ್ ಪಾರ್ಟಿ ಮತ್ತು ಜಮಾತ್ ಕಾರ್ಯಕರ್ತರು ಅಲ್ಪ ಸಂಖ್ಯಾತ ಹಿಂದೂಗಳನ್ನು ಎಲ್ಲ ಬಗೆಯ ಹಿಂಸೆಗೆ ಗುರಿಮಾಡಿ ಕೊಲ್ಲುವುದರ ಮೂಲಕ ಅವರನ್ನೆಲ್ಲ ಅಳಿಸಿ ಹಾಕುವ ಯೋಜನೆ ಹೊಂದಿದ್ದು ಆ ಕಾರಣಕ್ಕಾಗಿ ಅಲ್ಲಿರುವ ಹಿಂದೂಗಳೆಲ್ಲ ಸಾಮೂಹಿಕವಾಗಿ ಭಾರತಕ್ಕೆ ವಲಸೆ ಬರುತ್ತಿದ್ದಾರೆ." ಹಿಂದೂ ದೇವಾಲಯಗಳನ್ನು ಮತ್ತು ಪೂಜಾ ಮಂದಿರಗಳನ್ನು ಹಾಳು ಗೆಡಹುವುದು ಬಾಂಗ್ಲಾ ಆಡಳಿತಕ್ಕೆ ತೀರಾ ಮಾಮೂಲಿಯಾಗಿ ಬಿಟ್ಟಿದೆ. 2001 ರಲ್ಲಿ ಬಾಂಗ್ಲಾ ನ್ಯಾಶನಲ್ ಪಾರ್ಟಿಯೊಂದಿಗೆ ಜಮಾತ್-ಎ- ಇಸ್ಲಾಮಿ ಪಕ್ಷವು

---

ಪ್ರವಾದಿಗಳಲ್ಲಿ ಅತ್ಯಂತ ಶ್ರೇಷ್ಠ. ಈ ಪದಕ್ಕೆ ಈ ಅರ್ಥದ ಹೊರತು ಬೇರೆ ಯಾವ ಅರ್ಥ ಕೊಟ್ಟರೂ ಅದು ಸರಿಯಾಗದು. ಅಷ್ಟೇ ಅಲ್ಲ, ಹಝ್ರತ್ ಮುಹಮ್ಮದ್ ಪೈಗಂಬರ್[ಸ] ಎಲ್ಲ ಪ್ರವಾದಿಗಳಿಗಿಂತ ಶ್ರೇಷ್ಠರೆಂದು ಖುರ್‌ಆನಿನಿಂದ ಸಾಬೀತುಗೊಳಿಸಲು ಮೌದೂದಿಗಳಿಗೆ ಸಾಧ್ಯವಿಲ್ಲ. ಹಝ್ರತ್ ಪೈಗಂಬರರ[ಸ] ಕುರಿತು ಹಝ್ರತ್ ಅಹ್ಮದ್[ಅ] ಹೀಗೆ ಘೋಷಿಸಿದರು:

"ತಮ್ಮತ್ ಅಲೈಹಿ ಸಿಫಾತು ಕುಲ್ಲಿ ಮಝಿಯ್ಯತಿನ್
ಖುತಿಮತ್ ಬಿಹೀ ನಲ್‌ಮಾಉ ಕುಲ್ಲಿ ಝಮಾನಿ"

ಅಂದರೆ, ಸರ್ವವಿಧ ಉತ್ಕೃಷ್ಟ ಗುಣಗಳು ಅವರಲ್ಲಿ ಪರಿಪೂರ್ಣತೆ ಗಳಿಸಿದೆ. ಎಲ್ಲ ಕಾಲಗಳ ಅನುಗ್ರಹಗಳು ಅವರಲ್ಲಿ ಪರಾಕಾಷ್ಠೆ ಹೊಂದಿದೆ."

ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಂ ಆಧ್ಯಾತ್ಮಿಕ ಪ್ರಪಂಚದ ಸೂರ್ಯ ಆಗಿದ್ದಾರೆ. ಅಂತ್ಯಕಾಲದ ವರೆಗೆ ಪ್ರಕಾಶಿಸುವ ಸಕಲ ಆಧ್ಯಾತ್ಮಿಕ ಉಪಗ್ರಹಗಳು ಆ ಸೂರ್ಯನಿಂದ ಪ್ರಕಾಶವನ್ನು ಪಡೆಯುತ್ತಲೇ ಇರುವುವು. ಇದು ಹಝ್ರತ್ ಪೈಗಂಬರ್[ಸ] ಅವರ ಬಗ್ಗೆ ನಮ್ಮ ನಂಬಿಕೆ.

ಮುಸ್ಲಿಮರನ್ನು ಕಾಫಿರ್ ಎಂದು ಕರೆಯುವುದು ಆಧುನಿಕ ಮುಲ್ಲಾಯಿಸಮ್‌ನ ವರ್ತನೆಯಾಗಿದೆ. ಒಬ್ಬ ನಿಜವಾದ ಮುಸ್ಲಿಮನ ಕರ್ತವ್ಯ ಕಾಫಿರನ್ನು ಮುಸ್ಲಿಂ ಮಾಡುವುದಾಗಿದೆ. ಕವಿ ಇಕ್ಬಾಲ್ ಹಾಡಿದಂತೆ:

ದೀನೇ ಮೂಮಿನ್ ಫಿಕ್‌ರೋ ತದ್‌ಬೀರೇ ಜಿಹಾದ್
ದೀನೇ ಮುಲ್ಲಾ ಫೀ ಸಬೀಲಿಲ್ಲಾಹ್ ಫಸಾದ್.

ಅಂದರೆ, ವಿಶ್ವಾಸಿಯ ದೀನ್ ಧರ್ಮಪ್ರಚಾರ ಮತ್ತು ಅದಕ್ಕೋಸ್ಕರ ಪರಿಶ್ರಮವಾಗಿದೆ. ಮುಲ್ಲಾನ ದೀನ್ ಅಲ್ಲಾಹನ ಮಾರ್ಗದಲ್ಲಿ ಕ್ಷೋಭೆ ಹರಡುವುದಾಗಿದೆ.

ಆದುದರಿಂದ ಮೌದೂದಿ ಪತ್ರಿಕೆ ದುರ್ಮಾರ್ಗವನ್ನು ಬಿಟ್ಟು 'ಸನ್ಮಾರ್ಗ' ಎಂಬ ಹೆಸರಿಗೆ ಅನ್ವರ್ಥಕವಾಗುವಂತೆ ವರ್ತಿಸಲಿಕ್ಕೂ ಅಮುಸ್ಲಿಮರನ್ನು ಮುಸ್ಲಿಮರನ್ನಾಗಿ ಪರಿವರ್ತಿಸುವ ಪ್ರವಾದಿಚರ್ಯೆಯನ್ನು ಅನುಕರಿಸುತ್ತಿರುವ ಅಹ್ಮದಿಯಾ ಮುಸ್ಲಿಂ ಜಮಾಅತಿನ ಕುರಿತು ವಸ್ತುನಿಷ್ಠವಾಗಿ ತಿಳಿದುಕೊಳ್ಳಲಿಕ್ಕೂ 'ಸನ್ಮಾರ್ಗ' ಪತ್ರಿಕೆಗೆ ಕರೆನೀಡುತ್ತೇವೆ. ಗಾಜಿನ ಮನೆಯಲ್ಲಿ ಕುಳಿತು ಕಲ್ಲಿನ ಕೋಟೆಗೆ ಕಲ್ಲೆಸೆಯಬಾರದು.

ಅಧಿಕಾರಕ್ಕೇರಿದ ಪರಿಣಾಮವಾಗಿ ಭಯೋತ್ಪಾದಕ ಶಕ್ತಿಗಳು ಮುಕ್ತವಾಗಿ ತಲೆಯೆತ್ತಿ ನಡೆಯುವುದಕ್ಕೆ ಅವಕಾಶವಾಗಿದೆ. (ಉದಯವಾಣಿ: 3-10-2004 - ಪ್ರಚಲಿತ : ಎಂ.ವಿ.ಕಾಮತ್)

ಜಮಾತೆ ಇಸ್ಲಾಮಿಯ ಧಾರ್ಮಿಕ ಸ್ವಾತಂತ್ರ್ಯ ಹಕ್ಕಿನ ಒಂದು ಉದಾಹರಣೆಯನ್ನು ನೋಡಿರಿ. ಸಂದರ್ಶನವೊಂದರಲ್ಲಿ ಪಾಕ್ ಜಮಾತೆ ಇಸ್ಲಾಮಿ ಅಧ್ಯಕ್ಷ ಕಾಜಿ ಹುಸೇನ್ ಅಹ್ಮದ್ ಹೇಳುತ್ತಾರೆ : "ಜಮಾತೆ ಇಸ್ಲಾಮಿ ಅಧಿಕಾರ ಸೂತ್ರವನ್ನು ತನ್ನ ವಶಕ್ಕೆ ತೆಗೆದುಕೊಂಡ ಬಳಿಕ ಶರಿಯತ್ ಸಂವಿಧಾನದ ಸ್ಥಾನ ಪಡೆಯುವುದು. ಆಗ ಇಸ್ಲಾಮನ್ನು ತ್ಯಜಿಸಿ ಅಹ್ಮದಿಯಾ, ಕ್ರಿಶ್ಚನ್ ಮತ್ತು ಹಿಂದುವಾದರೆ ಪಾಕಿಸ್ತಾನವು ಕಾನೂನಿನ್ವಯ ಆತನನ್ನು ಗಲ್ಲಿಗೇರಿಸಬಹುದು. ಇರಾನ್ ಮತ್ತು ತಾಲಿಬಾನ್ ತಮ್ಮಲ್ಲಿ ಧರ್ಮಭ್ರಷ್ಟರನ್ನು ಇದೇ ರೀತಿ ಮಾಡುತ್ತಾರೆ." (ಉದಯವಾಣಿ 13-2-2000)

ವಸ್ತುಸ್ಥಿತಿ ಹೀಗಿರುವಾಗ, ಜಮಾತೆ ಇಸ್ಲಾಮಿ ಸಂಘಟನೆಯ 'ಮಾನವ ಹಕ್ಕು ರಕ್ಷಣಾ ಅಭಿಯಾನ' ಅವರ ಗೋಮುಖ ವ್ಯಾಘ್ರ ಪ್ರದರ್ಶನವೆಂದೇ ತಿಳಿಯಬೇಕಾಗಿದೆ. ಭಾರತದ ಪ್ರಜೆಗಳು ಅವರನ್ನು ಸದಾ ಎಚ್ಚರಿಕೆಯಿಂದ ವೀಕ್ಷಿಸಬೇಕಾಗಿದೆ.

# 'ಜಮಾತೆ ಇಸ್ಲಾಮಿ ಹಿಂದ್' ಭಾರತಕ್ಕೆ ನಿಷ್ಠ ಸಂಘಟನೆಯೇ ?

ಭಾರತದಲ್ಲಿರುವ ಜಮಾತೆ ಇಸ್ಲಾಮಿ ಸಂಘಟನೆಗೆ ಪಾಕಿಸ್ತಾನ ಅಥವಾ ಬಾಂಗ್ಲಾದೇಶದಲ್ಲಿರುವ 'ಜಮಾತೆ ಇಸ್ಲಾಮಿ' ಸಂಘಟನೆಗ ಳೊಂದಿಗೆ ಸಂಘಟನಾತ್ಮಕವಾಗಿ ಯಾವುದೇ ಸಂಬಂಧವಿಲ್ಲವೆಂದೂ 'ಜಮಾಅತೆ ಇಸ್ಲಾಮಿ ಹಿಂದ್' ಭಾರತಕ್ಕೆ ನಿಷ್ಠ ಸಂಘಟನೆಯೆಂದೂ ಭಾರತದ ಜಮಾತೆ ಇಸ್ಲಾಮಿ ಪಂಥದವರು ಹೇಳುತ್ತಾರೆ. ಇದು ಬರೇ ಬೊಗಳೆ.

ಜಮಾಅತೆ ಇಸ್ಲಾಮಿ ಹಿಂದ್, ಜಮಾಅತೆ ಇಸ್ಲಾಮಿ ಬಾಂಗ್ಲಾದೇಶ, ಜಮಾಅತೆ ಇಸ್ಲಾಮಿ ಪಾಕಿಸ್ತಾನ - ಈ ಎಲ್ಲ ಸಂಘಟನೆಗಳ ಮೂಲ ಪುರುಷ ಸೈಯ್ಯದ್ ಅಬುಲ್ ಆಲಾ ಮೌದೂದಿ ಎಂಬ ಉಗ್ರವಾದಿ ಮುಲ್ಲಾ ಆಗಿದ್ದಾರೆ. ಅವರ ಬೋಧನೆಗಳನ್ನು ಕಾರ್ಯಗತಗೊಳಿಸುವುದೇ ಮೇಲೆ ಹೇಳಿದ ದೇಶಗಳಲ್ಲಿರುವ ಜಮಾಅತೆ ಇಸ್ಲಾಮಿ ಸಂಘಟನೆಗಳ ಧ್ಯೇಯೋದ್ದೇಶವಾಗಿದೆ.

ಅಬುಲ್ ಆಲಾ ಮೌದೂದಿಯವರ ಬೋಧನೆಗಳಲ್ಲಿ ಅತಿ ಪ್ರಧಾನವಾದುದು 'ಹುಕೂಮತೆ ಇಲಾಹಿ' ಅಂದರೆ ದೇವಾಡಳಿತ ಸ್ಥಾಪನೆ. ಅವರ ಕಾಲ್ಪನಿಕ ದೇವಾಡಳಿತ ಹೊರತು ಬೇರೆ ಎಲ್ಲ ಆಡಳಿತಗಳು ಅವರ ದೃಷ್ಟಿಯಲ್ಲಿ 'ತಾಗೂತ್' (ಪೈಶಾಚಿಕ). ಪೈಶಾಚಿಕ ಆಡಳಿತವನ್ನು ಕಿತ್ತೊಗೆದು ದೇವಾಡಳಿತವನ್ನು ಸ್ಥಾಪಿಸಲು ಕಂಕಣಬದ್ಧರಾಗಬೇಕೆಂದು ಅವರು ತನ್ನ ಅನುಯಾಯಿಗಳಿಗೆ ಕರೆ ನೀಡಿದ್ದಾರೆ. ಈ ನಿಟ್ಟಿನಲ್ಲಿ ನಡೆಸುವ ಪ್ರಯತ್ನ ಹಾಗೂ ಹೋರಾಟವನ್ನು ಅವರು 'ಜಿಹಾದ್' ಎಂದು ಕರೆದಿದ್ದಾರೆ. ("ಜಿಹಾದ್" ಪುಟ 10 - ಶಾಂತಿ ಪ್ರಕಾಶನ, ಮಂಗಳೂರು). ಅವರ ಪ್ರಕಾರ ಇಸ್ಲಾಮಿನ ಪ್ರಧಾನ ಕರ್ಮಾನುಷ್ಠಾನಗಳಾದ ನಮಾಝ್, ಉಪವಾಸವ್ರತ, ಝಕಾತ್ ಮತ್ತು ಹಜ್ಜ್ ಈ ಜಿಹಾದಿಗೆ (ಪೈಶಾಚಿಕ ಆಡಳಿತವನ್ನು ಕಿತ್ತೊಗೆಯುವ ಹೋರಾಟಕ್ಕೆ) ಸಿದ್ಧಗೊಳಿಸುವ ತರಬೇತಿಯಾಗಿದೆ. ("ಜಿಹಾದ್" ಪುಟ 12-15)

ಶರೀಅತೇತರ ಆಡಳಿತವನ್ನು ಕಿತ್ತೊಗೆಯಲು ತನ್ನ ಅನುಯಾಯಿಗಳಿಗೆ ಬೋಧಿಸಿದ ಮುಲ್ಲಾ ಮೌದೂದಿಯವರು ಈಸಾನಬಿಯ ಪ್ರವಾದಿತ್ವವನ್ನೂ ಕಸಿದಿದ್ದಾರೆ. ಹಝ್ರತ್ ಈಸಾನಬಿ ಮುಸ್ಲಿಮರ ಧರ್ಮಸುಧಾರಣೆಗೋಸ್ಕರ ಈ ಲೋಕಕ್ಕೆ ಪುನಃ ಆಗಮಿಸುವರೆಂದು ಎಲ್ಲ ಮುಸ್ಲಿಮರು ನಂಬುತ್ತಿರುವಾಗ ಈಸಾ ಅಲೈಹಿಸ್ಸಲಾಂ ಪುನಃ ಈ ಲೋಕಕ್ಕೆ ಬರುವಾಗ ಪ್ರವಾದಿಯಾ ಗಿರಲಿಕ್ಕಿಲ್ಲವೆಂದು ಅವರು ಬರೆದಿದ್ದಾರೆ.

ಮೌದೂದಿ ಸಿದ್ಧಾಂತ ಪ್ರಕಾರ ಒಬ್ಬ ಮುಸ್ಲಿಮನು ಇಸ್ಲಾಮೀ ಕಾನೂನು (ಶರೀಅತ್) ಹೊರತು ಬೇರೆ ಕಾನೂನನ್ನು ಅನುಸರಿಸಬಾರದು. ಹಾಗೆ ಅನುಸರಿಸಿದರೆ ಅವನು ಮುಶ್ರಿಕ್ (ಬಹುದೇವಾರಾಧಕ) ಆಗುತ್ತಾನೆ. ("ಜಿಹಾದ್" ಪುಟ 17). ಹಾಗಿರುವಾಗ ಒಬ್ಬ ಜಮಾತೆ ಇಸ್ಲಾಮಿ ಸದಸ್ಯ ಭಾರತದ ಅಥವಾ ಬೇರಾವುದೇ ಶರೀಅತೇತರ ಆಡಳಿತಕ್ಕೆ ನಿಷ್ಠನಾಗಲು ಸಾಧ್ಯವಿಲ್ಲ. ಯಾವನಾದರೂ ಜಮಾತೆ ಇಸ್ಲಾಮಿ ಸದಸ್ಯ ತಾನು ಶರೀಅತೇತರ ಯಾವುದೇ ದೇಶಕ್ಕೆ ನಿಷ್ಠ ಎಂದು ಹೇಳಿದರೆ ಆತನಿಗೆ ಒಂದೋ ಮೌದೂದಿ ಸಿದ್ಧಾಂತದ ಅರಿವಿಲ್ಲ. ಅಥವಾ ತನ್ನ ಗುರುವಿನ ತತ್ವ ಪ್ರಕಾರ ಸಂದರ್ಭಕ್ಕೆ ತಕ್ಕಂತೆ ಸುಳ್ಳು ಹೇಳುತ್ತಾನೆ.

ಮೌಲಾನ ಮೌದೂದಿಯವರ ತತ್ವಗಳನ್ನು ಪ್ರಚಾರ ಮಾಡುವ, ಅವರ ಕೃತಿಗಳನ್ನು ಪ್ರಕಟಿಸುವ ಜಮಾಅತೆ ಇಸ್ಲಾಮಿ ಹಿಂದ್ ಸದಸ್ಯರು ಭಾರತಕ್ಕೆ ನಿಷ್ಠರಾಗಿರಲು ಸಾಧ್ಯವಿಲ್ಲ. 1953ರಲ್ಲಿ ಪಾಕಿಸ್ತಾನದ ಪಂಜಾಬ್ ಪ್ರಾಂತ್ಯದಲ್ಲಿ ರಕ್ತಸಿಕ್ತ ಕ್ಷೋಭೆ ಹಬ್ಬಿಸಿ ನಿರಪರಾಧಿಗಳಾದ

ಅನೇಕ ಜನರ ಕಗ್ಗೊಲೆಗೂ ಮಾನಹಾನಿಗೂ ಸೊತ್ತುಹಾನಿಗೂ ಕಾರಣಕರ್ತರಾಗಿ ಪಾಕಿಸ್ಥಾನ ಸರಕಾರದಿಂದ ಗಲ್ಲುಶಿಕ್ಷೆ ವಿಧಿಸಲ್ಪಟ್ಟ ಮೌಲಾನ ಮೌದೂದಿಯವರನ್ನು ವಿಚಾರಣೆಗೊಳಪಡಿಸಿದ ಜಸ್ಟಿಸ್ ಮುನೀರ್ ಆಯೋಗದ ಮುಂದೆ ಅವರು ನೀಡಿದ ಉತ್ತರವೇ ಅದಕ್ಕೆ ಸಾಕ್ಷಿ.

ಆಯೋಗದ ಪ್ರಶ್ನೆ : ಭಾರತ ಮತ್ತು ಪಾಕಿಸ್ಥಾನಕ್ಕೆ ಯುದ್ಧವಾದರೆ ಭಾರತದ ಮುಸ್ಲಿಮರ ಕರ್ತವ್ಯವೇನು?

ಮೌದೂದಿ ಉತ್ತರ : ಅವರ ಕರ್ತವ್ಯ ಸ್ಪಷ್ಟ. ಅವರು ಪಾಕಿಸ್ಥಾನಕ್ಕೆ ವಿರುದ್ಧವಾಗಿ ಯುದ್ಧಮಾಡಬಾರದು. ಅವರು ಪಾಕಿಸ್ಥಾನದ ಭದ್ರತೆಗೆ ಹಾನಿಕರವಾದ ಏನನ್ನೂ ಮಾಡಬಾರದು. "(Report of the Court of Inquiry - Punjab Disturbances of 1953, Lahore, printed by the Supt. Government Printing, Punjab - 1954 - Page 230)

ಮುಲ್ಲಾ ಮೌದೂದಿಯವರ ಈ ಹೇಳಿಕೆ ಭಾರತದ ಎಲ್ಲ ಮುಸ್ಲಿಮರನ್ನು ಅವಹೇಳಿಸುವಂಥದ್ದು ಹಾಗೂ ರಾಷ್ಟ್ರದ್ರೋಹಿಗಳೆಂದು ಚಿತ್ರೀಕರಿಸುವಂಥದ್ದಾಗಿದೆ.

ಹಝ್ರತ್ ಮುಹಮ್ಮದ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಂ ಬೋಧಿಸಿದ್ದು, " ಹುಬ್ಬುಲ್ ವತ್‌ನಿ ಮಿನಲ್ ಈಮಾನ್" ಅಂದರೆ, ಸ್ವದೇಶ ಪ್ರೇಮ ವಿಶ್ವಾಸದ ಅಂಶವಾಗಿದೆ ಎಂದು. ಮುಹಮ್ಮದ್ ಪೈಗಂಬರರ(ಸ) ಉಪದೇಶವೆಲ್ಲಿ? ಮುಲ್ಲಾ ಮೌದೂದಿಯವರ ಉಪದೇಶವೆಲ್ಲಿ?

# ಅಹ್ಮದೀ ಮುಸ್ಲಿಮರು ಶಾಂತಿ ಹರಡುವವರು

ಅಹ್ಮದಿಯರು ಕ್ಷೋಭೆ ಹುಟ್ಟು ಹಾಕುವವರೆಂದೂ ಅವರು ಕಾಫಿರ್‌ಗಳೆಂದು ಜಗತ್ತಿನ ಮುಸ್ಲಿಂ ವಿದ್ವಾಂಸರು ಸಾರಿದ್ದಾರೆಂದೂ ಮೌದೂದಿಗಳು ಹೇಳುತ್ತಾರೆ.

ಅಹ್ಮದಿಯಾ ಜಮಾಅತ್‌ನಲ್ಲಿ ಸೇರಿದವರು ಮುಸ್ಲಿಮರು ಎಂಬುದಕ್ಕೆ ನಮಗೆ ಜಗತ್ತಿನ ಮುಸ್ಲಿಂ ವಿದ್ವಾಂಸರ ಅಥವಾ ಮುಲ್ಲಾಗಳ ಪ್ರಮಾಣ ಪತ್ರ ಅಗತ್ಯವಿಲ್ಲ. ಮುಸ್ಲಿಂ ಎಂದರೆ ಯಾರೆಂದು ಹಝ್ರತ್ ಮುಹಮ್ಮದ್ ಪೈಗಂಬರ್(ಸ) ನೀಡಿರುವ ವ್ಯಾಖ್ಯೆಯ ಪ್ರಕಾರ ನಾವು ಮುಸ್ಲಿಂ ಎಂಬುದಕ್ಕೆ ನಮಗೆ ಅಲ್ಲಾಹನು ಮತ್ತು ಮುಹಮ್ಮದ್ ಪೈಗಂಬರ್(ಸ) ನೀಡಿದ ಖಾತರಿ ಸಾಕು.

ಕ್ಷೋಭೆ ಹುಟ್ಟುಹಾಕುವುದು ಅಹ್ಮದಿಯರ ಜಾಯಮಾನವೆಂದು ಆರೋಪಿಸುತ್ತಾ, ಅಹ್ಮದಿಯರು ಮಾಡಿದ್ದಾದರೂ ಏನು ಎಂದು ಮೌದೂದಿಗಳು ಕೇಳುತ್ತಾರೆ. ಖುರ್‌ಆನಿನಲ್ಲಿ ಅಲ್ಲಾಹನು ಮುಹಮ್ಮದ್ ಪೈಗಂಬರರಿಗೆ(ಸ) "ನೀನು ಉಪದೇಶಿಸು; ಖಂಡಿತವಾಗಿಯೂ ಉಪದೇಶ ಫಲನೀಡುವುದು" ಮತ್ತು "ಧರ್ಮದ ವಿಚಾರದಲ್ಲಿ ಬಲಾತ್ಕಾರ ಸಲ್ಲದು" ಎಂದು ಬೋಧಿಸಿದ್ದಾನೆ. ಆದರೆ ಮುಹಮ್ಮದ್ ಪೈಗಂಬರರ(ಸ) ಬಗ್ಗೆ ಮುಲ್ಲಾ ಮೌದೂದಿಯವರು "ಅಲ್‌ಜಿಹಾದ್ ಫಿಲ್ ಇಸ್ಲಾಂ" ಎಂಬ ತನ್ನ ಕೃತಿಯಲ್ಲಿ, ಪ್ರವಾದಿಯವರು 13 ವರ್ಷ ಕಾಲ ಅರಬಿಗಳಿಗೆ ಶಾಂತರೀತಿಯಲ್ಲಿ ಉಪದೇಶ ನೀಡಿದರೂ ನಿಷ್ಫಲವಾಯಿತೆಂದೂ ಕೊನೆಗೆ ಅವರು ಕೈಯಲ್ಲಿ ಖಡ್ಗವೆತ್ತಿದಾಗ ಜನರು ಇಸ್ಲಾಂ ಧರ್ಮ ಸ್ವೀಕರಿಸಲು ತೊಡಗಿದರೆಂದೂ ಹಾಗೆ ಒಂದು ಶತಮಾನದೊಳಗೆ ಜಗತ್ತಿನ ನಾಲ್ಕನೆಯ ಒಂದಂಶ ಜನರು ಮುಸಲ್ಮಾನರಾದರೆಂದೂ ಇಸ್ಲಾಮಿನ ಖಡ್ಗ ಮನುಷ್ಯ ಹೃದಯಗಳನ್ನು ಮುಚ್ಚಿದ್ದ ಪರದೆಗಳನ್ನು ಹರಿದು ಹಾಕಿದ್ದೇ ಅದಕ್ಕೆ ಕಾರಣವೆಂದೂ ಬರೆದಿದ್ದಾರೆ. ("ಅಲ್ ಜಿಹಾದ್ ಫಿಲ್ ಇಸ್ಲಾಂ" ಪುಟ 137-138). ಹಾಗೆ ಮೌದೂದಿಯವರು ತನ್ನ ಸ್ವಾರ್ಥ ಸಾಧನೆಗೋಸ್ಕರ ಹಝ್ರತ್ ಪ್ರವಾದಿಯವರ ಮುಖಕ್ಕೆ ಮಸಿ ಬಳಿದು, ಧರ್ಮ ಪ್ರಚಾರದ ಕಾರ್ಯದಲ್ಲಿ ಖಡ್ಗ ಮತ್ತು ಬಲಾತ್ಕಾರದ ಆವಶ್ಯಕತೆಯ ಕುರಿತು ತನ್ನ ಅನುಯಾಯಿಗಳಿಗೆ ಮನಗಾಣಿಸಿಕೊಟ್ಟಿದ್ದಾರೆ. ಆದರೆ ಅಹ್ಮದೀ ಮುಸ್ಲಿಮರು, ಇಸ್ಲಾಂ ಶಾಂತಿಯ ಧರ್ಮವೆಂದೂ ಇಸ್ಲಾಂ ಧರ್ಮ ಖಡ್ಗದ ಬಲದಿಂದ ಪ್ರಚಾರಗೊಂಡದ್ದಲ್ಲವೆಂದೂ ಧರ್ಮದ ವಿಚಾರದಲ್ಲಿ ಬಲಾತ್ಕಾರ ಸಲ್ಲದೆಂದೂ ಜಗತ್ತಿನಾದ್ಯಂತ 178 ರಾಷ್ಟ್ರಗಳಲ್ಲಿ ಪ್ರವಚನ, ಪುಸ್ತಕ ಪ್ರಕಾಶನ ಮತ್ತು ಪ್ರತಿದಿನ 24 ಗಂಟೆಗಳ ಕಾಲ MTAI (ಮುಸ್ಲಿಂ ಟೆಲಿವಿಶನ್ ಅಹ್ಮದಿಯಾ ಇಂಟರ್‌ನ್ಯಾಶನಲ್) ಮೂಲಕ ಪ್ರಚಾರಪಡಿಸಿ ಇಸ್ಲಾಮಿನ ನೈಜ, ಶಾಂತ, ಸುಂದರ ಮುಖವನ್ನು ಜಗತ್ತಿಗೆ ತೋರಿಸುತ್ತಿದ್ದಾರೆ.

ಮೌದೂದಿಗಳ ಪ್ರಕಾರ, ಪಾಕಿಸ್ಥಾನದಲ್ಲಿ ಮತ್ತು ಬಾಂಗ್ಲಾದೇಶದಲ್ಲಿ ಅಹ್ಮದೀ ಮುಸ್ಲಿಮರ ವಿರುದ್ಧ ನಡೆಯುತ್ತಿರುವ ದೌರ್ಜನ್ಯಗಳು ಧಾರ್ಮಿಕ ಸ್ವಾತಂತ್ರ್ಯದ ಧ್ವಂಸನ ಅಥವಾ ಮಾನವ ಹಕ್ಕು ರಕ್ಷಣೆಯ ಉಲ್ಲಂಘನೆ ಅಲ್ಲವಂತೆ! ಮೌದೂದಿ ಅನುಯಾಯಿಗಳಿಗೆ ತಮಗೊಂದು ನ್ಯಾಯ, ಅನ್ಯರಿಗೆ ಬೇರೊಂದು ನ್ಯಾಯ! ಇವರ ಕುರುಡು ಕಣ್ಣುಗಳಿಗೆ ದೃಷ್ಟಿ ಬರುವುದು ಯಾವಾಗ?

# ಅಹ್ಮದಿಯಾ ವಾರ್ತೆಗಳು

## ಪಶ್ಚಿಮ ಯುರೋಪಿನ ಅತಿ ದೊಡ್ಡ ಮಸೀದಿ

ಲಂಡನಿನ ದಕ್ಷಿಣ ಭಾಗದ ಮೋರ್ಡನ್ ಎಂಬಲ್ಲಿ ಅಹ್ಮದಿಯಾ ಮುಸ್ಲಿಂ ಜಮಾಅತಿನ ವತಿಯಿಂದ ನಿರ್ಮಿಸಲ್ಪಟ್ಟ ಪಶ್ಚಿಮ ಯುರೋಪಿನ ಅತಿ ದೊಡ್ಡ ಮಸೀದಿ "ಬೈತುಲ್ ಫುತೂಹ್" ಅಹ್ಮದಿಯಾ ಜಮಾಅತಿನ ಖಲೀಫರಾದ ಹಝ್ರತ್ ಮಿರ್ಝಾ ಮಸ್ರೂರ್ ಅಹ್ಮದ್ ಸಾಹೇಬರಿಂದ 3-10-2003ರಂದು (ಶುಕ್ರವಾರ) ಉದ್ಘಾಟಿಸಲ್ಪಟ್ಟಿತು.

ಮಸೀದಿಯು 50 ಅಡಿ ವ್ಯಾಸದ ಗುಂಬಜನ್ನೂ 100 ಅಡಿ ಎತ್ತರದ ಮಿನಾರವನ್ನೂ ಹೊಂದಿದೆ. ಈ ಮಸೀದಿಯಲ್ಲಿ 10 ಸಾವಿರ ಮಂದಿಗೆ ನಮಾಝ್ ಮಾಡಲಿಕ್ಕೆ ಸೌಕರ್ಯವಿದೆ. ಲೋಕದಾದ್ಯಂತ 178 ರಾಷ್ಟ್ರಗಳಲ್ಲಿರುವ ಅಹ್ಮದೀ ಮುಸ್ಲಿಮರಿಂದ ಸಂಗ್ರಹಿಸಲಾದ 1.5 ಕೋಟಿ ಪೌಂಡ್ಸ್ (ಸುಮಾರು 112 ಕೋಟಿ ರೂಪಾಯಿಗಳು) ದೇಣಿಗೆಯಿಂದ ಈ ಮಸೀದಿಯನ್ನು ನಿರ್ಮಿಸಲಾಗಿದೆ.

(ಫೋಟೋ ಹೊರ ಕವಚದ 3ನೇ ಪುಟದಲ್ಲಿ)

## ಬರ್ಮಿಂಗ್‌ಹಾಮ್‌ನಲ್ಲಿ ಹೊಸ ಮಸೀದಿ

ಬ್ರಿಟನಿನ ಎರಡನೇ ದೊಡ್ಡ ನಗರವಾದ ಬರ್ಮಿಂಗ್‌ಹಾಮ್‌ನಲ್ಲಿ ಅಹ್ಮದಿಯಾ ಮುಸ್ಲಿಂ ಜಮಾಅತಿನ ವತಿಯಿಂದ ನಿರ್ಮಿಸಲ್ಪಟ್ಟ ಮಸೀದಿಯನ್ನು 1-10-2004ರಂದು (ಶುಕ್ರವಾರ) ಖಲೀಫರಾದ ಹಝ್ರತ್ ಮಿರ್ಝಾ ಮಸ್ರೂರ್ ಅಹ್ಮದ್ ಸಾಹೇಬರು ಉದ್ಘಾಟಿಸಿದರು.

ಬರ್ಮಿಂಗ್‌ಹಾಂ ಕೇಂದ್ರದಿಂದ 3 ಕಿಲೋಮೀಟರ್ ದೂರದಲ್ಲಿರುವ ಒಂದೂ ಮುಕ್ಕಾಲು ಎಕ್ರೆ ವಿಸ್ತೀರ್ಣದ ನಿವೇಶನದಲ್ಲಿ ಸುಮಾರು 16 ಲಕ್ಷ ಪೌಂಡ್ಸ್ ವೆಚ್ಚದಲ್ಲಿ ಈ ಮಸೀದಿಯನ್ನು ನಿರ್ಮಿಸಲಾಗಿದೆ. 1960ರಲ್ಲಿ ಬರ್ಮಿಂಗ್‌ಹಾಮ್‌ನಲ್ಲಿ ಜಮಾಅತ್ ಸ್ಥಾಪಿತಗೊಂಡಿದೆ.

## ಪಯಂಗಾಡಿಯಲ್ಲಿ ಮಸೀದಿ ಉದ್ಘಾಟನೆ

ಕೇರಳದ ಕಣ್ಣೂರು ಜಿಲ್ಲೆಯ ಪಯಂಗಾಡಿಯಲ್ಲಿ ಅಹ್ಮದಿಯಾ ಜಮಾಅತಿನ ವತಿಯಿಂದ ನಿರ್ಮಿಸಲ್ಪಟ್ಟ "ತಾಹಿರ್ ಮಸ್‌ಜಿದ್" 30-1-2004ರಂದು (ಶುಕ್ರವಾರ) ಭಾರತದ ನಾಝಿರ್ ಆಲಾ ಹಝ್ರತ್ ಮಿರ್ಝಾ ವಸೀಂ ಅಹ್ಮದ್ ಸಾಹೇಬರು ಉದ್ಘಾಟಿಸಿದರು.

ಸಂಜೆ ಮಸೀದಿ ವಠಾರದಲ್ಲಿ ಜರಗಿದ ಧರ್ಮ ಸಾಮರಸ್ಯ ಸಮ್ಮೇಳನದ ಅಧ್ಯಕ್ಷತೆಯನ್ನು ಮಿರ್ಝಾ ವಸೀಂ ಅಹ್ಮದ್ ಸಾಹೇಬ್ ವಹಿಸಿದರು. ಕೇರಳ ಅಹ್ಮದಿಯಾ ಅಮೀರ್ ಎ.ಪಿ. ಕುಞ್ಞಾಮು ಸಾಹೇಬ್, ಚೀಫ್ ಮಿಶನರಿ ಮೌಲಾನ ಮುಹಮ್ಮದ್ ಉಮರ್ ಸಾಹೇಬ್, ಸ್ವಾಮಿ ವೇದಾಮೃತ ಚೈತನ್ಯ, ರೈಟ್ ವರೆವರೆಂಡ್, ಡಾ| ವರ್ಗೀಸ್ ಚಕ್ಕಾಲಕ್ಕಲ್ ಮೊದಲಾದವರು ವಿವಿಧ ಧರ್ಮಗಳ ಕುರಿತು ಮಾತನಾಡಿದರು.

(ಫೋಟೋ ಹೊರ ಕವಚದ 3ನೇ ಪುಟದಲ್ಲಿ)

## ಮಡಿಕೇರಿಯಲ್ಲಿ ಮಸೀದಿ ಉದ್ಘಾಟನೆ

ಕೊಡಗು ಜಿಲ್ಲೆಯ ಮಡಿಕೇರಿಯಲ್ಲಿ ಅಹ್ಮದಿಯಾ ಜಮಾಅತಿನ ವತಿಯಿಂದ ನಿರ್ಮಿಸಲ್ಪಟ್ಟ "ಬೈತುಲ್ ಹುದಾ" ಮಸೀದಿಯನ್ನು 31-1-2004ರಂದು ಹಝ್ರತ್ ಮಿರ್ಝಾ ವಸೀಂ ಅಹ್ಮದ್ ಸಾಹೇಬರು ಉದ್ಘಾಟಿಸಿದರು.


ಅಂದು ರಾತ್ರಿ ಮಿರ್ಝಾ ವಸೀಂ ಅಹ್ಮದ್ ಸಾಹೇಬರ ಅಧ್ಯಕ್ಷತೆಯಲ್ಲಿ ಜರಗಿದ ಸಭೆಯಲ್ಲಿ ಕರ್ನಾಟಕ ಅಹ್ಮದಿಯಾ ಅಮೀರ್ ಎಂ.ಶಫೀಉಲ್ಲಾ ಸಾಹೇಬ್, ಕೇರಳ ಅಮೀರ್ ಎ.ಪಿ. ಕುಞ್ಞಾಮು ಸಾಹೇಬ್, ಚೀಫ್ ಮಿಶನರಿ ಮೌಲಾನ ಮುಹಮ್ಮದ್ ಉಮರ್ ಸಾಹೇಬ್, ಮಡಿಕೇರಿ ಜಮಾಅತ್ ಅಧ್ಯಕ್ಷರಾದ ಯು.ಎಂ.ಎ. ಬಶೀರ್ ಅಹ್ಮದ್ ಸಾಹೇಬ್ ಮೊದಲಾದವರು ಮಾತನಾಡಿದರು.

## ಮಟ್ಟನ್ನೂರ್‌ನಲ್ಲಿ ಮಸೀದಿ ಉದ್ಘಾಟನೆ

ಕಣ್ಣೂರ್ ಜಿಲ್ಲೆಯ ಮಟ್ಟನ್ನೂರ್‌ನಲ್ಲಿ ಅಹ್ಮದಿಯಾ ಜಮಾಅತಿನ ವತಿಯಿಂದ ನಿರ್ಮಿಸಲ್ಪಟ್ಟ ಮಸೀದಿಯನ್ನು 1-2-2004ರಂದು ಹಝ್ರತ್ ಮಿರ್ಝಾ ವಸೀಂ ಅಹ್ಮದ್ ಸಾಹೇಬರು ಉದ್ಘಾಟಿಸಿದರು.

ಈ ಮಸೀದಿ ನಿರ್ಮಾಣ ಕಾರ್ಯದಲ್ಲಿ ಬಹಳ ಪ್ರಯತ್ನಶೀಲರಾಗಿದ್ದ ತ್ಯಾಯಮಯಿ ಮರ್ಹೂಮ್ ಡಾಕ್ಟರ್ ಮನ್‌ಸೂರ್ ಅಹ್ಮದ್ ಸಾಹೇಬರನ್ನು ವಸೀಂ ಅಹ್ಮದ್ ಸಾಹೇಬ್ ಶ್ಲಾಘಿಸಿ ಅವರ ಮಾದರಿಯನ್ನು ಅನುಕರಿಸಲು ಕರೆ ನೀಡಿದರು.

## ಕೇರಳ ಅಹ್ಮದಿಯಾ ಖಾಝಿ



ಮೊಗ್ರಾಲಿನ ಜನಾಬ್ ಸಿದ್ದೀಖ್ ಅಶ್ರಫ್ ಅಲಿ ಸಾಹೇಬರನ್ನು ಹಝ್ರತ್ ಖಲೀಫರವರು ಕೇರಳ ಅಹ್ಮದಿಯಾ ಖಾಝಿಯಾಗಿ ನೇಮಕ ಮಾಡಿದ್ದಾರೆ. ಅಶ್ರಫ್ ಅಲಿ ಸಾಹೇಬರು ಪಂಜಾಬ್ ವಿಶ್ವವಿದ್ಯಾಲಯದ ಎಚ್.ಎ. ಬಿರುದು ಧಾರಿಯಾಗಿದ್ದಾರೆ. ಅವರು ಪ್ರಥಮ ಕೇರಳ ಅಹ್ಮದಿಯಾ ಅಮೀರ್ ಆಗಿದ್ದ ಮರ್ಹೂಮ್ ಸಿದ್ದೀಖ್ ಅಮೀರಲಿ ಸಾಹೇಬರ ಹಿರಿಯ ಪುತ್ರರಾಗಿದ್ದಾರೆ.

## ಸವಿ ನೆನಪು

### ಮಿರ್ಝಾ ಮುಬಾರಕ್ ಅಹ್ಮದ್ ಸಾಹೇಬ್



ಹಝ್ರತ್ ವಾಗ್ದತ್ತ ಮಹ್‌ದೀ ಮಸೀಹರ ಮೊಮ್ಮಗ ಹಾಗೂ ಹಝ್ರತ್ ಮುಸ್ಲಿಹ್ ಮೌಊದರ ಪುತ್ರ ಹಝ್ರತ್ ಮಿರ್ಝಾ ಮುಬಾರಕ್ ಅಹ್ಮದ್ ಸಾಹೇಬ್ ತನ್ನ 90 ವರ್ಷ ಪ್ರಾಯದಲ್ಲಿ 21-6-2004 ರಂದು ದಿವಂಗತರಾದರು. ("ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್")

ಮುಬಾರಕ್ ಅಹ್ಮದ್ ಸಾಹೇಬರು ಮೌಲವಿ ಫಾಝಿಲ್ (ಎಚ್.ಎ.), ಬಿ.ಎ. ಬಿರುದುಗಳನ್ನು ಪಡೆದ ಬಳಿಕ 1944ರಲ್ಲಿ ತನ್ನ ಜೀವಿತವನ್ನು ಜಮಾಅತಿನ ಸೇವೆಗಾಗಿ ಅರ್ಪಿಸಿದರು. ವಕೀಲ್ ಅಲ್‌ಲಾ, ವಕೀಲ್ ತಬ್‌ಶೀರ್, ಸದರ್ ಮಜ್‌ಲಿಸ್ ತಹ್‌ರೀಕ್ ಜದೀದ್ ಇತ್ಯಾದಿ ಉನ್ನತ ಸ್ಥಾನಗಳನ್ನು ಅವರು ವಹಿಸಿದ್ದರು. ಅವರು ಯುರೋಪು, ಅಮೇರಿಕ, ಇಂಡೋನೇಷ್ಯಾ, ಇರಾನ್, ತುರ್ಕಿ, ಚೀನಾ, ಆಫ್ರಿಕ ಎಂಬೀ ದೇಶಗಳನ್ನು ಸಂದರ್ಶಿಸಿ ಅಲ್ಲೆಲ್ಲ ಪ್ರಚಾರ ಚಟುವಟಿಕೆಗಳನ್ನು ಚುರುಕುಗೊಳಿಸುತ್ತಿದ್ದರು.

ಅಲ್ಲಾಹನು ದಿವಂಗತರಿಗೆ ಮಗ್ಫಿರತ್ ಮತ್ತು ಜನ್ನತ್ ದಯಪಾಲಿಸಲಿ - ಆಮೀನ್.

### ಜನಾಬ್ ಬಿ.ಎಂ. ಕೋಯಾ ಸಾಹೇಬ್



ಮಜ್ಲಿಸ್ ಅನ್ಸಾರುಲ್ಲಾಹ್ ಕೇರಳ ನಾಝಿಂ ಅಲ್‌ಲಾ ಹಾಗೂ "ಸತ್ಯದೂತನ್" ಮಾಸಿಕದ ಮಾಜಿ ಸಂಪಾದಕರಾಗಿದ್ದ ಬಿ.ಎಂ.ಕೋಯಾ ಸಾಹೇಬ್ 6-11-2004ರಂದು ತನ್ನ 64ನೇ ವಯಸ್ಸಿನಲ್ಲಿ ನಿಧನರಾದರು. ("ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್")

ಕೋಯಾ ಸಾಹೇಬರು ಸುಮಾರು ಹತ್ತು ವರ್ಷ ಕಾಲ ಕೇರಳ ಅನ್ಸಾರುಲ್ಲಾಹ್ ನಾಝಿಂ ಅಲ್‌ಲಾ ಆಗಿ ಸೇವೆಸಲ್ಲಿಸಿದ್ದರು. ತಹ್‌ರೀಕ್ ಜದೀದ್ ಅಖಿಲ ಭಾರತ ಸಮಿತಿಯಲ್ಲಿ ಅವರು ಸದಸ್ಯರಾಗಿದ್ದರು. ಅವರು ಉತ್ತಮ ಬರಹಗಾರನೂ ವಾಗ್ಮಿಯೂ ಆಗಿದ್ದರು. 2001ರಿಂದ ಅನ್ಸಾರುಲ್ಲಾಹ್ ಮುಖವಾಣಿಯಾದ "ಸತ್ಯಮಿತ್ರಂ" ಮಾಸ ಪತ್ರಿಕೆಯ ಸ್ಥಾಪಕ ಸಂಪಾದಕರಾಗಿದ್ದರು. "ಚಿಂತನ" ಎಂಬ ವಾರ ಪತ್ರಿಕೆಯನ್ನೂ ಅವರು ಆರಂಭಿಸಿದ್ದರು.

ಅಲ್ಲಾಹನು ದಿವಂಗತರಿಗೆ ಮಗ್ಫಿರತ್ ಮತ್ತು ಜನ್ನತ್ ದಯಪಾಲಿಸಲಿ - ಆಮೀನ್.

### ಜನಾಬ್ ಬಿ. ಶೈಖ್ ಅಲಿ ಸಾಹೇಬ್



ಮಡಿಕೇರಿ ಅಹ್ಮದಿಯಾ ಜಮಾಅತಿನ ಮಾಜಿ ಅಧ್ಯಕ್ಷರು ಹಾಗೂ ಮಾಜಿ ಝಈಂ ಅನ್ಸಾರುಲ್ಲಾಹ್ ಆಗಿದ್ದ ಜನಾಬ್ ಬಿ.ಶೈಖ್ ಅಲಿ ಸಾಹೇಬರು ತನ್ನ 74ನೇ ವಯಸ್ಸಿನಲ್ಲಿ 25-1-2004ರಂದು ದಿವಂಗತರಾದರು. ("ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್")

ಮೂಲತಃ ಮಂಗಳೂರಿನ ಬೆಂಗ್ರೆ ನಿವಾಸಿಯಾಗಿದ್ದ ಶೈಖ್ ಅಲಿ ಸಾಹೇಬರು ಸುಮಾರು 50 ವರ್ಷಗಳ ಮುಂಚೆ ಅಹ್ಮದಿಯಾ ಮುಸ್ಲಿಂ ಜಮಾಅತಿಗೆ ಸೇರಿದರು. ಶತ್ರುಗಳು ಅವರನ್ನು ನಾನಾ ರೀತಿಗಳಲ್ಲಿ ಪೀಡಿಸಿದರು. ಹಲ್ಲೆಗೊಳಗಾಗಿ ಅವರು ಆಸ್ಪತ್ರೆಯಲ್ಲಿ ದಾಖಲಾಗಿದ್ದರು.

ಅವರು ಬಹಳ ಸಹನಶೀಲರಾಗಿದ್ದರು. ಒಮ್ಮೆ ಅವರು ಓರ್ವ ಮೌಲವಿಯೊಡನೆ ಅಹ್ಮದಿಯಾ ಜಮಾಅತಿನ ಬಗ್ಗೆ ಚರ್ಚೆ ಮಾಡುತ್ತಿದ್ದಾಗ ಆ ಮೌಲವಿ ಶೇಖ್ ಅಲಿ ಸಾಹೇಬರ ಮುಖಕ್ಕೆ ಉಗುಳಿದರು. ಆದರೆ ಅವರು ಸಿಟ್ಟುಗೊಳ್ಳದಿರುವುದನ್ನು ಕಂಡು ಆ ಮೌಲವಿ ಚಕಿತಗೊಂಡರು. ಮನಪರಿವರ್ತಿತರಾಗಿ ಅವರು ಅಹ್ಮದಿಯಾ ಜಮಾಅತಿಗೆ ಸೇರಿದರು.


ಬಹಳ ಧೈರ್ಯ ಶಾಲಿಯಾಗಿದ್ದ ಶೈಖ್‌ಅಲಿ ಸಾಹೇಬರು, ಒಂದು ರಾತ್ರಿ ಬೆಂಗರೆಯ ತನ್ನ ಮನೆಯಲ್ಲಿ ತಂಗಿದ್ದ ಅಹ್ಮದಿಯಾ ಮಿಶನರಿಯಾಗಿದ್ದ ಮೌಲವಿ ಬಿ. ಅಬ್ದುಲ್ಲಾ ಸಾಹೇಬರ ಮೇಲೆ ಹಲ್ಲೆ ನಡೆಸಲು ಬಂದಿದ್ದ ಗೂಂಡಾಗಳ ಮುಖಂಡನಾದ ಒಬ್ಬ ಪಹಿಲ್ವಾನನ್ನು ತಾನು ಕಲಿತಿದ್ದ ಕಳರಿ ಪಯಟ್ಟ್ ವಿದ್ಯೆಯಿಂದ ಕೆಳಗೆ ಬೀಳಿಸಿ ಹಿಮ್ಮೆಟ್ಟಿಸಿದರು.

ಮತ್ತೊಂದು ಸಂದರ್ಭದಲ್ಲಿ, ಮೊಗ್ರಾಲಿನ ಸಿದ್ದೀಖ್ ಅಮೀರಲಿ ಸಾಹೇಬರ ಕುಟುಂಬ ಸೊತ್ತಿನಲ್ಲಿ ಸೇರಿದ ಮಸೀದಿಯಲ್ಲಿ ಪ್ರಾರ್ಥನೆ ಸಲ್ಲಿಸಲು ಹೋಗಿದ್ದ ಅಹ್ಮದಿಯರ ಮೇಲೆ ಆಕ್ರಮಣ ನಡೆಸಲು ಹೊರಟಿದ್ದ ಒಂದು ಗುಂಪು ಜನರ ನೇತೃತ್ವ ವಹಿಸಿದ್ದ ಒಬ್ಬ ಗೂಂಡಾನನ್ನು ತನ್ನ ಕಳರಿ ಪಯಟ್ಟ್ ವಿದ್ಯೆ ಪ್ರಯೋಗಿಸಿ ಓಡ್ದೋಡಿಸಿದ್ದಾರೆ.

ಅವರು "ಯುಗರಶ್ಮಿ"ಯ ಹಿತೈಷಿಗಳಲ್ಲೊಬ್ಬರಾಗಿದ್ದರು.

ಮಡಿಕೇರಿಗೆ ಅಹ್ಮದಿಯಾ ಸಂದೇಶವನ್ನು ಮೊತ್ತ ಮೊದಲಿಗೆ ತಲಪಿಸಿದ್ದ ಜನಾಬ್ ಯು.ಎಂ.ಎ. ಮುಹ್ಯುದ್ದೀನ್ ಸಾಹೇಬರ ಪುತ್ರಿ ಝುಹ್‌ರಾಬಿ ಅವರ ಪತ್ನಿ. ಅಬ್ದುರ್ರಹೀಂ, ರಫೀಕ್ ಅಹ್ಮದ್ ಮತ್ತು ತಾಹಿರಾಬಿ ಮಕ್ಕಳು.

ಅಲ್ಲಾಹನು ದಿವಂಗತರಿಗೆ ಮಗ್ಫಿರತನ್ನೂ ಜನ್ನತನ್ನೂ ದಯಪಾಲಿಸಲಿ - ಆಮೀನ್.



ಲಂಡನಿನ ಮೋರ್ಡನ್ ಎಂಬಲ್ಲಿರುವ ಅಹ್ಮದಿಯಾ ಮುಸ್ಲಿಂ ಮಸೀದಿ "ಬೈತುಲ್ ಫತೂಹ್".
(ವರದಿ 43ನೇ ಪುಟದಲ್ಲಿ)



ಕಣ್ಣೂರು ಜಿಲ್ಲೆಯ ಪಯಂಗಾಡಿಯಲ್ಲಿರುವ ಅಹ್ಮದಿಯಾ ಮುಸ್ಲಿಂ ಮಸೀದಿ "ತಾಹಿರ್ ಮಸ್‌ಜಿದ್".
(ವರದಿ 43ನೇ ಪುಟದಲ್ಲಿ)

Regd. with Registrar of Newspapers for India No. R.N. 27354/75
YUGARASHMI Kannada Quarterly, January 2005


ದಿನಂಪ್ರತಿ 24 ಗಂಟೆಗಳ ಕಾಲ ಪ್ರಸಾರಗೊಳ್ಳುತ್ತಿರುವ




ಏಕೈಕ ಇಸ್ಲಾಮೀ ಟಿ. ವಿ. ಚ್ಯಾನಲ್

ಮುಸ್ಲಿಂ ಟೆಲಿವಿಶನ್ ಅಹ್ಮದಿಯಾ
ಇಂಟರ್‌ನೇಶನಲ್

E-mail : info@alislam.org

**THE FIRST ISLAMIC SATELLITE CHANNEL**

**BROADCASTING ROUND THE CLOCK**

| | | | |
|---|---|---|---|
| SATELLITE | : ASIASAT 3S | POLARISATION | : HORIZONTAL |
| POSITION | : 105.5° EAST | SYMBOL RATE | : 2600 MBPS |
| FREQUENCY | : 3760 MHZ | FEC | : 7/8 |
| MIN. DISH SIZE | : 1.8 METRE | | |

ಬೇಗನೇ ಲಭಿಸಲಿದೆ

ಅಹ್ಮದಿಯಾ ಮುಸ್ಲಿಂ ಜಮಾಅತಿನ ವತಿಯಿಂದ

ಪ್ರಕಟಿಸಲ್ಪಟ್ಟ

**ಪವಿತ್ರ ಖುರ್‌ಆನ್**

**ಕನ್ನಡ ಭಾಷಾಂತರ**

ಸಂಪರ್ಕಿಸಿರಿ:

AHMADIYYA MUSLIM MISSION
No.1, 3rd Cross Road,
Wilson Garden,
BANGALORE - 560027
Phone : 080-22246133

NAZARAT NASHR-0-ISHAAT
Sadr Anjuman Ahmadiyya
QADIAN - 143516
(PUNJAB)


Edited and Published by Muhammad Yusuf on behalf of Jamath Ahmadiyya at 10-23-1008/1, Ist Floor, Ansari Road, Mangalore - 575001.
Printed at **Karavali Printers**, Azizuddin Road, Mangalore on behalf of Jubilee Printing Press, Mangalore.
Typeset at **View Graphics**, Car Street, Mangalore - 575 001.